
"VARTHA JANAPADA" Monthly - Oct 2019
"ವಾರ್ತಾ ಜನಪದ" ಮಾಸಿಕ - ಅಕ್ಟೋಬರ್ 2019
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




downloaded from: www.kpscvaani.com



ಗಾಂಧಿ 150

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-
ಅಕ್ಟೋಬರ್ 2019





ಚಂದ್ರನ ಮೇಲೆ ಲ್ಯಾಂಡರ್ ಇಳಿಸಲು ಇಸ್ರೋ ನಡೆಸಿದ ಕಾರ್ಯಾಚರಣೆಯನ್ನು ವೀಕ್ಷಿಸಲು ಸೆಪ್ಟೆಂಬರ್ 6 ರಂದು ನಗರಕ್ಕೆ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಯಲಹಂಕ ವಾಯು ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸ್ವಾಗತಿಸುತ್ತಿರುವುದು. ಈ ಸಂದರ್ಭದಲ್ಲಿ ರಾಜ್ಯಪಾಲರಾದ ವಜುಭಾಯಿ ವಾಲಾ ಅವರು ಉಪಸ್ಥಿತರಿದ್ದರು.



ಮಲ್ಲೇಶ್ವರದ ಅರಣ್ಯ ಭವನದಲ್ಲಿ ಸೆಪ್ಟೆಂಬರ್ 10 ರಂದು ಏರ್ಪಡಿಸಲಾಗಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹುತಾತ್ಮ ಯೋಧರ ಸ್ಮಾರಕಕ್ಕೆ ಪುಷ್ಪಗುಚ್ಛವಿಟ್ಟು ನಮನ ಸಲ್ಲಿಸಿದರು.

downloaded from: www.kpscvaani.com



ಪೋಷಣ್ ಅಭಿಯಾನ್ ಯೋಜನೆಯ ಪ್ರಗತಿ ಪರಿಶೀಲನೆ ಸಭೆಗೆ ಸೆಪ್ಟೆಂಬರ್ 13 ರಂದು ವಿಧಾನಸೌಧಕ್ಕೆ ಆಗಮಿಸಿದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಜವಳಿ ಸಚಿವರಾದ ಸ್ಮೃತಿ ಝುಬಿನ್ ಇರಾನಿ ಅವರನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ ಅವರು ಉಪಸ್ಥಿತರಿದ್ದರು.



ಸೆಪ್ಟೆಂಬರ್ 8 ರಂದು ಬೆಂಗಳೂರು ನಗರ ಪರಿವೀಕ್ಷಣೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕುಂದಲಹಳ್ಳಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ಕಾಮಗಾರಿ ಕುರಿತು ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯುತ್ತಿರುವುದು. ಶಾಸಕ ಅರವಿಂದ ಲಿಂಬಾವಳಿ ಇದ್ದಾರೆ.

ವಾರ್ತಾ
# ಜನಪದ
ಸಂಪುಟ-03 • ಸಂಚಿಕೆ-01 • ಅಕ್ಟೋಬರ್ 2019



05 ಪ್ರವಾಹ ಸಂತ್ರಸ್ತರಿಗೆ ನೆರವಾದ ಸರ್ಕಾರ

21 ಮಹಾರಾಷ್ಟ್ರ ಭೇಟಿ: ಮಹತ್ವದ ತೀರ್ಮಾನಕ್ಕೆ ಮುಂದಾದ ಮುಖ್ಯಮಂತ್ರಿಗಳು

23 ರಾಜ್ಯದಲ್ಲೂ ಫಿಟ್ ಇಂಡಿಯಾ ಕಾರ್ಯಕ್ರಮಕ್ಕೆ ಚಾಲನೆ

25 ಮಹಾವೈಭವದ ಮೈಸೂರು ದಸರಾ
• ಬನ್ನೂರು ಕೆ.ರಾಜು

31 ಇಂದಿಗೂ ನಮಗಾಗಿ ಗಾಂಧೀಜಿ
• ಯು.ವಿನೀತ್ ರಾವ್

35 ಮತ್ತೆ ನೆನಪಾಗುತ್ತಿರುವ ಗಾಂಧಿ
• ಡಿ.ಎಸ್.ನಾಗಭೂಷಣ

39 ಗಾಂಧಿ ಮತ್ತು ನಾಸ್ತಿಕ ಗೊ.ರಾ. ಮುಖಾಮುಖಿಯ ನೆನಪುಗಳು
• ವೆಂಕಟೇಶ ಮಾಚಕನೂರು

43 ಕಾಯಕ ಸಂಸ್ಕೃತಿ–ಗಾಂಧಿ ಮಾರ್ಗ
• ಸುಮಾ ಚಂದ್ರಶೇಖರ್

45 ಮನದ ಮನೆಯೊಳಗಿರುವ ಮನೆಯೊಡನೆಯನನ್ನು ಮೀರುವುದೆಂದರೆ
• ವೆಂಕಟೇಶ ಕೆ.ಜನಾದ್ರಿ

48 ದೇಶ ಕಂಡ ಸರಳ ಸಜ್ಜನ ರಾಜಕಾರಣಿ–ಲಾಲ್ ಬಹಾದ್ದೂರ್ ಶಾಸ್ತ್ರಿ
• ಸಂಗಮೇಶ್

ಪ್ರಧಾನ ಸಂಪಾದಕರು
ಎಸ್. ಎನ್. ಸಿದ್ದರಾಮಪ್ಪ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂದಿ
ಜಂಟಿ ನಿರ್ದೇಶಕರು
ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಪಿ. ಪೂರ್ಣಿಮಾ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
#3 ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

**downloaded from: www.kpscvaani.com**



## ಓದುಗರಿಂದ...

ಆಧುನಿಕ ಕರ್ನಾಟಕದ ಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ ಅವರ ಬದ್ಧತೆ, ಚಿಂತನೆ, ಸರಳತನ, ಇಂದಿನ ಎಂಜಿನಿಯರ್‌ಗಳಿಗೆ ಕಣ್ಣು ತೆರೆಸುವಂತಿದೆ. ಅವರ ಜೀವನ ಶೈಲಿಯಲ್ಲಿ ಶಿಸ್ತು, ಪ್ರಾಮಾಣಿಕತೆ, ದಕ್ಷತೆ ಇಂದಿನ ಎಂಜಿನಿಯರ್‌ಗಳಿಗೆ ಇದೆಯೇ ? ಎಂಬ ಪ್ರಶ್ನೆ ಕಾಡುತ್ತದೆ. ಭಾರತರತ್ನ ಸರ್. ಎಂ.ವಿ ಅವರು ನಾಡುಕಂಡ ಸರ್ವಕಾಲಿಕ ಮೇರು ವ್ಯಕ್ತಿತ್ವ ಹೊಂದಿದ್ದವರು. ಲೇಖನ ಚಿಕ್ಕದಾದರೂ ಸಮಗ್ರ ಮಾಹಿತಿಯನ್ನು ಒಳಗೊಂಡಿದೆ.

**–ಕರೇಶ್‌ಕುಮಾರ್**, ಬೆಂಗಳೂರು

ಸ್ವಾತಂತ್ರ್ಯೋತ್ಸವದ ಮುಖಪುಟ ಹೊತ್ತು ಬಂದಿರುವ ಜನಪದ ಸಂಚಿಕೆಯಲ್ಲಿನ ಬರಹಗಳು ಉತ್ತಮವಾಗಿ ಮೂಡಿ ಬಂದಿದೆ. 370 ನೇ ವಿಧಿ ಕುರಿತ ಲೇಖನ ಸಮಂಜಸವಾಗಿದೆ. ಜಮ್ಮು ಕಾಶ್ಮೀರದಲ್ಲಿ ಹೊಸ ಶಕೆಯೊಂದು ಆರಂಭಗೊಂಡಂತಾಗಿದೆ. ಸ್ವತಂತ್ರ ಭಾರತದಲ್ಲಿದ್ದುಕೊಂಡು ಪ್ರತ್ಯೇಕ ಕಾನೂನು ಕಟ್ಟಲೆಗಳನ್ನು ಹೊಂದಿದ್ದು, ವಿಪರ್ಯಾಸವೇ ಸರಿ. ಕೇಂದ್ರ ಸರ್ಕಾರದ ದಿಟ್ಟ ನಿರ್ಧಾರ ಮೆಚ್ಚುವಂತದ್ದು. ಸರ್.ಎಂ.ವಿ, ತೇಜಸ್ವಿ, ಗಾಂಧಿ ಕುರಿತ ಲೇಖನಗಳು ಮಾಹಿತಿ ಪೂರ್ಣವಾಗಿವೆ. ಕುಮಾರಪರ್ವ ಚಾರಣ ಕುರಿತ ಲೇಖನ ಓದಿದರೆ ಅಲ್ಲಿಗೆ ಹೋಗಿ ಬಂದಷ್ಟೇ ಖುಷಿಯಾಗುತ್ತದೆ.

**–ನರಸಿಂಹಮೂರ್ತಿ**, ತುಮಕೂರು

ಸೆಪ್ಟೆಂಬರ್ 2019 ರ ವಾರ್ತಾ ಜನಪದ ಸಂಚಿಕೆಯಲ್ಲಿ ಮಹಾತ್ಮಗಾಂಧಿ, ಸರ್ವಪಲ್ಲಿ ರಾಧಾಕೃಷ್ಣ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಅವರ ಕುರಿತು ಪ್ರಕಟಿಸಲಾಗಿರುವ ಲೇಖನಗಳು ಪತ್ರಿಕೆಯ ತೂಕವನ್ನು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು. ಲೇಖನಗಳನ್ನು ಬರೆದ ರೀತಿಯಂತೂ ಅತ್ಯದ್ಭುತವಾಗಿದೆ. ಇಂದಿನ ಪೀಳಿಗೆಯ ಮಕ್ಕಳಿಗೆ ಇಂತಹ ಮಹಾನ್ ವ್ಯಕ್ತಿಗಳ ಕುರಿತು ಪರಿಚಯಿಸಬೇಕಾದುದ್ದು ಅತ್ಯವಶ್ಯಕ. ಇಂತಹ ಲೇಖನಗಳು ಹೊತ್ತಿಗೆಯ ಮೌಲ್ಯವನ್ನು ವೃದ್ಧಿಸುತ್ತದೆ. ಇದಕ್ಕೆ ಕಾರಣಕರ್ತರಾದ ಪ್ರಧಾನ ಸಂಪಾದಕರಿಗೆ ಅಭಿನಂದನೆಗಳು.

**–ವಿದ್ಯಾವಂತ ಆಚಾರ್ಯ**, ಉಡುಪಿ

ಸೆಪ್ಟೆಂಬರ್ 2019ರ 'ವಾರ್ತಾ ಜನಪದ' ಸಂಚಿಕೆಯ ಮುಖಪುಟದಲ್ಲಿ ಮಾನ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಮಾಡಿದ ಛಾಯಚಿತ್ರ ಮೂಡಿ ಬಂದಿರುವುದನ್ನು ನೋಡಿ ಕಣ್ತುಂಬಿಕೊಂಡೆವು. ಹಾಗೂ ಅದೇ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ ಮುಖ್ಯಮಂತ್ರಿ ಅವರ ಸ್ವಾತಂತ್ರ್ಯೋತ್ಸವದ ಭಾಷಣ ಕೂಡ ಅರ್ಥ ಪೂರ್ಣವಾಗಿತ್ತು. ಜೊತೆಗೆ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಕುರಿತ ಸಮಗ್ರ ಮಾಹಿತಿ, ಕವಿ ಕಲ್ಪನೆಯ ಗಣೇಶ, ಸಾಮೂಹಿಕ ಸಂಕಲ್ಪದಲ್ಲಿ ಅಭಿವೃದ್ಧಿಗೊಂಡ ಕೆರೆಗಳು, 370 ನೇ ವಿಧಿ ಅಸಿಂಧು:ಕಾಶ್ಮೀರದಲ್ಲಿ ನವೋದಯ, ಸೇರಿದಂತೆ ಪ್ರಕಟವಾಗಿರುವ ಎಲ್ಲಾ ಲೇಖನಗಳು ಉತ್ತಮ ಮಾಹಿತಿಯನ್ನು ಒದಗಿಸಿವೆ. ಪ್ರತಿ ಮಾಹೆಯೂ ವಿವಿಧ ವಿಷಯಗಳ ಕುರಿತು ವಿಶೇಷ ಮಾಹಿತಿಯನ್ನು ನೀಡುತ್ತಿರುವುದಕ್ಕೆ ತಮ್ಮ ಪತ್ರಿಕಾ ಬಳಗಕ್ಕೆ ಅಭಿನಂದನೆಗಳು.

**–ನಾಗಮ್ಮ ಚೋಳಕೆ**, ಕಲ್ಯಾಣನಗರ

ವಾರ್ತಾ ಜನಪದ ಸೆಪ್ಟಂಬರ್ ಸಂಚಿಕೆಯಲ್ಲಿ ಪ್ರಕಟಗೊಂಡಿರುವ 'ದೊಡ್ಡಬಳ್ಳಾಪುರದಲ್ಲಿ ಮಹಾತ್ಮಗಾಂಧಿ' ಸಮಯೋಚಿತ ಹಾಗೂ ಉಪಯುಕ್ತ ಮಾಹಿತಿಯಿಂದ ಕೂಡಿದೆ. ಬಹುರೂಪಿ ಪೂರ್ಣ ಚಂದ್ರ ತೇಜಸ್ವಿ ಅವರ ಕುರಿತ ಬರಹ ಮತ್ತೊಮ್ಮೆ ತೇಜಸ್ವಿ ಅವರ ಸಾಹಿತ್ಯವನ್ನು ಮೆಲುಕು ಹಾಕುವಂತೆ ಮಾಡಿದೆ. ವಿಜ್ಞಾನ, ಸಾಹಿತ್ಯ, ಕೃಷಿ, ಛಾಯಾಗ್ರಾಹಣ, ಎಲ್ಲದರಲ್ಲೂ ಅವರಿಗಿದ್ದ ಆಸಕ್ತಿ ಹುಬ್ಬೇರಿಸುವಂತೆ ಮಾಡುತ್ತದೆ.

**–ಶ್ರೀಧರ್**, ಹಾಸನ

"ಹಲವು ರೋಗಗಳಿಗೆ ರಾಮಬಾಣ ಕರಿಬೇವು" ಸಂಗಮೇಶ ಎನ್ ಜವಾದಿ ಅವರು ಬರೆದಿರುವ ಈ ಲೇಖನದಲ್ಲಿ ನಿಜವಾಗಿ ಕರಿಬೇವಿನ ಮಹತ್ವ ಹಾಗೂ ಅವರ ಔಷಧೀಯ ಗುಣಗಳನ್ನು ವಿವರವಾಗಿ ತಿಳಿಸಲಾಗಿದೆ. ಇದರಲ್ಲಿನ ಪೌಷ್ಟಿಕಾಂಶ ಹಾಗೂ ಅನೇಕ ಕಾಯಿಲೆಗಳನ್ನು ತಡೆಗಟ್ಟುವ ಸಾಮರ್ಥ್ಯ ಹೊಂದಿದೆ. ಮಧುಮೇಹ ರೋಗಿಗಳಿಗೆ ರಾಮಬಾಣ ಎಂದು ಪರಿಗಣಿಸಲಾಗಿರುವ ಕರಿಬೇವು ರಕ್ತಹೀನತೆಯನ್ನು ಹೋಗಲಾಡಿಸುವುದರ ಜೊತೆಗೆ ಕೊಲೆಸ್ಟಾಲ್ ಅನ್ನು ಕಡಿಮೆ ಮಾಡಿ, ನಮ್ಮ ತೂಕವನ್ನು ನಿಯಂತ್ರಿಸುತ್ತದೆ. ಲಿವರ್‌ಗೆ ಸಂಬಂಧಪಟ್ಟ ಕಾಯಿಲೆಗಳನ್ನು ತಡೆಗಟ್ಟುವ ಕರಿಬೇವು, ಕೂದಲ ಬೆಳವಣಿಗೆಗೆ ಕೂಡ ಸಹಕಾರಿಯಾಗಿದೆ.

ಹೀಗೆ ಕರಿಬೇವಿನ ಅನೇಕ ಔಷಧೀಯ ಗುಣಗಳ ಬಗ್ಗೆ ತಿಳಿಸಿಕೊಟ್ಟಿರುವುದು ನಿಜಕ್ಕೂ ಅಭಿನಂದನಾರ್ಹ. ಇಂತಹ ಆರೋಗ್ಯಕ್ಕೆ ಉಪಯುಕ್ತವಾಗುವಂತಹ ಗಿಡಮೂಲಿಕೆಗಳ ಬಗ್ಗೆ ಇನ್ನು ಹೆಚ್ಚಿನ ಲೇಖನಗಳನ್ನು ಪ್ರಕಟಿಸುವ ಮೂಲಕ ಜನಸಾಮಾನ್ಯರ ಆರೋಗ್ಯದ ಬಗ್ಗೆ ಕಾಳಜಿವಹಿಸುವ ಪತ್ರಿಕೆ ನಮ್ಮದಾಗಲಿ ಎಂದು ಹಾರೈಸುತ್ತೇನೆ.

**–ವಿಲ್ಸನ್**, ಉತ್ತರ ಕನ್ನಡ


'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/-

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ "The Director, Department of Information & Public Relations" ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು, 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.


downloaded from: www.kpscvaani.com



# ಪ್ರವಾಹ ಸಂತ್ರಸ್ತರಿಗೆ ನೆರವಾದ ಸರ್ಕಾರ

**ಭೀಕರ ನೆರೆ ಪ್ರವಾಹದಿಂದ ಉತ್ತರ ಕರ್ನಾಟಕ ಜಿಲ್ಲೆ ಸೇರಿದಂತೆ 17 ಜಿಲ್ಲೆಗಳ ನೂರಾರು ಹಳ್ಳಿಗಳು ಜಲಾವೃತವಾಗಿ ಸಾವಿರಾರು ಮಂದಿ ಮನೆ, ಮಠ, ಆಸ್ತಿ ಕಳೆದುಕೊಂಡು ನಿರಾಶ್ರಿತರಾದರು. ನೆರೆಯ ಸೂಚನೆಯನ್ನು ಅರಿತ ಜಿಲ್ಲಾಡಳಿತವು ಮುಂಜಾಗ್ರತವಾಗಿ ಜನರನ್ನು ಸ್ಥಳಾಂತರಿಸುವ ಮೂಲಕ ಸಂಭವಿಸಬಹುದಾದ ಭಾರೀ ಅನಾಹುತವನ್ನು ತಪ್ಪಿಸಿದರು. ಮುಖ್ಯಮಂತ್ರಿಗಳ ಸೂಚನೆಯಂತೆ ಜಿಲ್ಲಾಡಳಿತವು ಸಂತ್ರಸ್ತರ ನೆರವಿಗೆ ಕ್ಷಿಪ್ರಗತಿಯಲ್ಲಿ ಕಾರ್ಯಪ್ರವೃತ್ತವಾಗಿ, ಹಗಲು–ರಾತ್ರಿ ಎನ್ನದೆ ನೆರೆಯಲ್ಲಿ ಸಿಲುಕಿದವರ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಯನ್ನು ಅಚ್ಚುಕಟ್ಟಾಗಿ ಕೈಗೊಂಡಿತು. ಜಿಲ್ಲಾಡಳಿತದ ಜೊತೆಗೆ ವಿವಿಧ ಸಂಘಸಂಸ್ಥೆಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ಸಾತ್ ನೀಡಿದರು.**

ಸ್ವತಃ ಮಾನ್ಯ ಮುಖ್ಯಮಂತ್ರಿಯವರೇ ಪ್ರವಾಹ ಪೀಡಿತ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಭೇಟಿ ನೀಡಿ ಮಾನಸಿಕವಾಗಿ ನೊಂದಿದ್ದ ಸಂತ್ರಸ್ತರಿಗೆ ಸಾಂತ್ವನ ಹೇಳಿ ಬಂದರಲ್ಲದೆ, ತಕ್ಷಣ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ತಾಕೀತು ಮಾಡಿದರು. ಸಚಿವ ಸಂಪುಟ ವಿಸ್ತರಣೆಯಾಗುತ್ತಿದ್ದಂತೆ, ಸಚಿವರುಗಳು ಕೂಡ ತಮ್ಮ ಉಸ್ತುವಾರಿ ಜಿಲ್ಲೆಗಳಿಗೆ ಹಗಲು ರಾತ್ರಿ ಎನ್ನದೆ ಪ್ರವಾಸ ಮಾಡಿ ಪರಿಹಾರ ಕಾರ್ಯಗಳ ಪ್ರಗತಿಯನ್ನು ಪರಿಶೀಲಿಸಿದರು. ಮುಖ್ಯಮಂತ್ರಿಗಳ ಸೂಚನೆಯಂತೆ ಜಿಲ್ಲಾಡಳಿತವು ಕೂಡ ಪರಿಹಾರ ಕಾರ್ಯಗಳನ್ನು ತ್ವರಿತಗತಿಯಲ್ಲಿ ಹಮ್ಮಿಕೊಳ್ಳುವ ಮೂಲಕ ಸಂತ್ರಸ್ತರಿಗೆ ನೆರವಾಯಿತು.

ಸರ್ಕಾರ ಘೋಷಿಸಿದ್ದಂತೆ ಸಂತ್ರಸ್ತರಿಗೆ ತಕ್ಷಣದ ನೆರವಿಗೆ 10 ಸಾವಿರ ರೂ ಪರಿಹಾರವನ್ನು ಹಾಗೂ ಭಾಗಶಃ ಹಾನಿಯಾದ ಮನೆಗಳ ದುರಸ್ತಿಗೆ 1 ಲಕ್ಷ ರೂ ಹಾಗೂ ಸಂಪೂರ್ಣ ಹಾನಿಯಾದ ಮನೆಗಳ ಪುನರ್ ನಿರ್ಮಾಣಕ್ಕೆ 5 ಲಕ್ಷ ರೂ ಪರಿಹಾರವನ್ನು ವಿತರಣೆ ಮಾಡಲಾಗಿದೆ. ನೆರೆಗೆ ಸಿಲುಕಿ ಪ್ರಾಣ ಕಳೆದುಕೊಂಡ ಕುಟುಂಬದವರಿಗೆ 24 ಗಂಟೆಯೊಳಗೆ 5 ಲಕ್ಷ ರೂ ಪರಿಹಾರವನ್ನು ಕೂಡ ವಿತರಿಸಲಾಗಿದೆ. ಕೆಲವು ಮಾಧ್ಯಮಗಳಲ್ಲಿ ಪರಿಹಾರ ಒದಗಿಸುವಲ್ಲಿ ಅಕ್ರಮ ಎಸಗಲಾಗುತ್ತಿದೆ ಎಂಬ ವರದಿಗಳು ಬಂದ ಹಿನ್ನೆಲೆಯಲ್ಲಿ, ಸರ್ಕಾರವು ನೀಡುವ ಪರಿಹಾರದಿಂದ ಸಂತ್ರಸ್ತರು ವಂಚಿತರಾಗಬಾರದು ಎಂಬ ಕಾರಣಕ್ಕೆ ತನಿಖಾ ತಂಡವನ್ನು ರಚಿಸಿದೆ. ಈ ತಂಡವು ಪರಿಹಾರ ವಿತರಣೆಯಲ್ಲಿ ಅಕ್ರಮ ನಡೆಯದಂತೆ ನಿಗಾವಹಿಸಲಿರುವುದರಿಂದ ಸಂತ್ರಸ್ತರು ಆತಂಕಕ್ಕೆ ಒಳಗಾಗಬಾರದೆಂದು ಸರ್ಕಾರವು ಸ್ಪಷ್ಟನೆಯನ್ನು ಕೂಡ ನೀಡಿದೆ.

**ಪ್ರವಾಹ ಪೀಡಿತ ಪ್ರತಿ ಜಿಲ್ಲೆಗಳಲ್ಲಿ ಜರುಗಿದ ಪರಿಹಾರ ಕಾರ್ಯಗಳ ಸಂಕ್ಷಿಪ್ತ ಪರಿಚಯವನ್ನು ಈ ಲೇಖನವು ಒಳಗೊಂಡಿದ್ದು, ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ.**

## ರಾಯಚೂರು

ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ಸುರಿದ ಅಪಾರ ಪ್ರಮಾಣದ ಮಳೆಯಿಂದಾಗಿ ಅಲ್ಲಿನ ಕೊಯ್ನಾ, ವೀರಾ ಹಾಗೂ ಉಜನಿ ಜಲಾಶಯಗಳಿಂದ ಹೆಚ್ಚುವರಿ ನೀರನ್ನು ಹರಿಸಿದ್ದರಿಂದ ಭತ್ತದ ಕಣಜವಾದ ಈ ಭೂಮಿಯೆಲ್ಲಾ ಜಲಾವೃತಗೊಂಡಿತು. ಜಿಲ್ಲೆಯ ನದಿ ಪಾತ್ರದ ಗ್ರಾಮಗಳ ಜನರ ಬದುಕು ಕಷ್ಟಕರವಾಗಿ ಪರಿಣಮಿಸಿತು. ಆದರೆ ಪ್ರವಾಹದಿಂದ ಯಾವೊಂದು ಜೀವಹಾನಿ ಆಗದೇ, ಜನ ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡುವ ಮೂಲಕ ಜಿಲ್ಲಾಡಳಿತ ಪ್ರತಿ ಕ್ಷಣವೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿದ್ದು, ಸಾರ್ವಜನಿಕ ವಲಯದಲ್ಲಿ ಪ್ರಶಂಸೆಗೆ ಪಾತ್ರವಾಯಿತು.

ಪ್ರವಾಹ ಪರಿಸ್ಥಿತಿಯ ಮೇಲೆ ನಿಗಾವಹಿಸಲು ಜಿಲ್ಲಾಧಿಕಾರಿ ಶರತ್.ಬಿ ಅವರು ವಾಟ್ಸಾಪ್ ಗ್ರೂಪ್‌ಗಳನ್ನು ರಚಿಸಿ, ರಕ್ಷಣಾ ತಂಡದ ಹಿರಿಯ ಮತ್ತು ಕಿರಿಯ ಅಧಿಕಾರಿಗಳಿಂದ ಪ್ರವಾಹದ ಕ್ಷಣಕ್ಷಣದ ಮಾಹಿತಿಯನ್ನು ವಿನಿಮಯ ಮಾಡಿಕೊಂಡು ಆ ಮೂಲಕ ಪ್ರವಾಹಕ್ಕೀಡಾಗುವ ಗ್ರಾಮಗಳ ಜನ ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದರು. ಜಿಲ್ಲಾಡಳಿತದ ವತಿಯಿಂದ ನಿಯೋಜಿಸಲಾದ ನೋಡಲ್ ಅಧಿಕಾರಿಗಳು ಪ್ರವಾಹ ಪೀಡಿತ ಗ್ರಾಮಗಳಲ್ಲಿ ಪ್ರವಾಹ ನಿಲ್ಲುವವರೆಗೂ ವಾಸ್ತವ್ಯ ಹೂಡಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡರು.

ಸಂಪೂರ್ಣವಾಗಿ ಜಲಾವೃತಗೊಂಡು ಸಂಪರ್ಕ ಕಡಿತಗೊಂಡಿದ್ದ, ಸೇತುವೆ ಹಾಗೂ ರಸ್ತೆಗಳನ್ನು ಸಾರ್ವಜನಿಕರು ದಾಟದಂತೆ ಪೊಲೀಸರು ಹಾಗೂ ನೋಡಲ್ ಅಧಿಕಾರಿಗಳು ನಿರ್ಬಂಧ ಹೇರಿ, ಅಲ್ಲಿ ಸೇತುವೆ ಹಾಗೂ ರಸ್ತೆಗಳನ್ನು ದಾಟದಂತೆ ಕ್ರಮಕೈಗೊಂಡಿದ್ದರು. ಲಿಂಗಸೂಗೂರು ತಾಲ್ಲೂಕಿನ ಕರಕಲಗಡ್ಡಿ ನಡುಗಡ್ಡೆಯಲ್ಲಿ ಸಿಲುಕಿದ್ದ ಒರ್ವ ಗರ್ಭಿಣಿ ಸೇರಿದಂತೆ ಆರು ಮಂದಿಯನ್ನು







ಸೇನೆಯ ಹೆಲಿಕಾಪ್ಟರ್ ಮೂಲಕ ರಕ್ಷಿಸಲಾಯಿತು. ಜಿಲ್ಲೆಯ ಒಟ್ಟು 105 ಪ್ರವಾಹ ಪೀಡಿತ ಗ್ರಾಮಗಳಲ್ಲಿ ಗ್ರಾಮಸ್ಥರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ಕಾರ್ಯಕ್ಕೆ ಭಾರತೀಯ ಸೇನೆಯ 105 ಯೋಧರು ಹಾಗೂ ಒಂದು ಸೇನಾ ಹೆಲಿಕಾಪ್ಟರ್, ಎನ್.ಡಿ.ಆರ್.ಎಫ್ ತಂಡದ 45 ಮಂದಿ ಮತ್ತು ಜಿಲ್ಲಾಡಳಿತದಿಂದ ಪ್ರವಾಹ ಕಾರ್ಯಕ್ಕೆ ನಿಯೋಜಿತ ವಿವಿಧ ಇಲಾಖೆಯ ಅಧಿಕಾರಿಗಳು, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಸ್ವಯಂ ಸೇವಕರು ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳು ನೆರೆ ಸಂತ್ರಸ್ತರಿಗಾಗಿ ಹಗಲಿರುಳು ಶ್ರಮಿಸಿ ಅವರನ್ನು ರಕ್ಷಿಸುವಲ್ಲಿ ಸಹಕರಿಸಿದರು.

ನೆರೆ ಸಂತ್ರಸ್ತ 3593 ಫಲಾನುಭವಿಗಳಿಗೆ ಜಿಲ್ಲಾಡಳಿತದ ವತಿಯಿಂದ ಸಕಾಲಕ್ಕೆ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು. ನದಿ ಪಾತ್ರದ ನೀರಿನಲ್ಲಿ ಮುಳುಗಡೆಯಾದ ಗ್ರಾಮಗಳ ಜನರಿಗೆ ಹತ್ತಿರದ ಸರಕಾರಿ ಶಾಲೆಗಳಲ್ಲಿ 30 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿತ್ತು.

ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರು ಪ್ರವಾಹ ಪೀಡಿತ ಪ್ರದೇಶಗಳಿಗೆ ವೈಮಾನಿಕ ಸಮೀಕ್ಷೆ ನಡೆಸಿ ರಾಯಚೂರು ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ನದಿ ಪ್ರವಾಹದಿಂದಾಗಿ ಬಾಧಿತರಾಗಿರುವ ಜಿಲ್ಲೆಯ ಸಂತ್ರಸ್ತರಿಗೆ ಸರ್ಕಾರದಿಂದ ಅಗತ್ಯವಿರುವ ಎಲ್ಲಾ ರೀತಿಯ ನೆರವು ಒದಗಿಸಲಾಗುವುದು ಎಂದು ಹೇಳಿದರು.

ಸಚಿವರಾದ ಬಿ.ಶ್ರೀರಾಮುಲು ಹಾಗೂ ಪ್ರಭು ಚೌವ್ಹಾಣ ಅವರು ಪ್ರವಾಹ ಪರಿಸ್ಥಿತಿ ಕುರಿತು ಸಭೆ ನಡೆಸಿ ನಂತರ ಪ್ರವಾಹ ಪೀಡಿತ ಗ್ರಾಮಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ತಕ್ಷಣವೇ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಹ ಸಂತ್ರಸ್ತ ಪ್ರತಿ ಕುಟುಂಬಕ್ಕೆ ತುರ್ತು ಪದಾರ್ಥಗಳ ಖರೀದಿಗೆ ಪರಿಹಾರವಾಗಿ 10 ಸಾವಿರ ರೂಪಾಯಿಯಂತೆ ಜಿಲ್ಲೆಯಲ್ಲಿ ಒಟ್ಟು 544 ಫಲಾನುಭವಿಗಳಿಗೆ ಜಿಲ್ಲಾಡಳಿತವು ನೇರವಾಗಿ ಹಣವನ್ನು ಅವರ ಖಾತೆಗೆ ಜಮಾ ಮಾಡಿದೆ.

ಜಿಲ್ಲೆಯಲ್ಲಿ 16197 ಹೆಕ್ಟೇರ್‌ನಷ್ಟು ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಈಗಾಗಲೇ ಜಂಟಿ ಸಮೀಕ್ಷೆ ಕೈಗೊಂಡಿದ್ದು, ಬೆಳೆ ಹಾನಿಯಾದ ರೈತರಿಗೆ ಬೆಳೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ. ಜಿಲ್ಲೆಯಲ್ಲಿ ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ 48.92 ಕೋಟಿ ರೂ.ಗಳ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.



downloaded from: www.kpscvaani.com

## ಬಾಗಲಕೋಟೆ



ಮಹಾ ಮಳೆಯಿಂದಾಗಿ ಉಕ್ಕಿ ಹರಿದ ಕೃಷ್ಣಾ, ಮಲಪ್ರಭಾ ಹಾಗೂ ಘಟಪ್ರಭಾ ನದಿಗಳಿಂದಾಗಿ ಬಾಗಲಕೋಟೆ ಜಿಲ್ಲೆಯ ನೂರಾರು ಗ್ರಾಮಗಳು ಜಲಾವೃತಗೊಂಡು ಲಕ್ಷಾಂತರ ಜನರ ಬದುಕು ದುಸ್ತರಗೊಂಡಿತು. ಸಚಿವರು, ಶಾಸಕರು, ಜಿಲ್ಲಾಧಿಕಾರಿ ಆರ್.ರಾಮಚಂದ್ರನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಂಗೂಬಾಯಿ ಮಾನಕರ ಅವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡಗಳು ಹಗಲಿರಳು ಶ್ರಮಿಸಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 195 ಗ್ರಾಮಗಳು ಪ್ರವಾಹ ಪೀಡಿತವಾದ್ದರಿಂದ, ಜನ-ಜಾನುವಾರುಗಳಿಗೆ ತೊಂದರೆಯಾಗುವ ಜೊತೆಗೆ ಕೃಷಿ ಮತ್ತು ತೋಟಗಾರಿಕೆ ಸೇರಿದಂತೆ 71678 ಹೆಕ್ಟೇರ್ ಬೆಳೆ ಹಾನಿಯಿಂದ ರೂ. 753 ಕೋಟಿ ನಷ್ಟವಾಯಿತು. ಒಟ್ಟಾರೆಯಾಗಿ ಪ್ರವಾಹದಿಂದ ರೂ.1587 ಕೋಟಿ ರೂ. ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.





ಸಂತ್ರಸ್ತರಾಗಿದ್ದ ಒಟ್ಟು 27,719 ಕುಟುಂಬಗಳ ಲಕ್ಷಾಂತರ ಜನರಿಗಾಗಿ ಜಿಲ್ಲಾಡಳಿತದ ವತಿಯಿಂದ 224 ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿ, ಊಟ, ವಸತಿ, ಆರೋಗ್ಯ ಸೇವೆ ಒದಗಿಸಲಾಗಿತ್ತು, ಜಾನುವಾರುಗಳನ್ನು ಕೂಡ ರಕ್ಷಿಸಿ, ಅವುಗಳಿಗೂ ಮೇವನ್ನು ಒದಗಿದಲಾಗಿತ್ತು.

ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಆಗಸ್ಟ 10 ರಂದು ಬಾಗಲಕೋಟೆ ಜಿಲ್ಲೆಗಳ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ರಾಜ್ಯದ ಸಚಿವರಾದ ಗೋವಿಂದ ಕಾರಜೋಳ ಹಾಗೂ ಕೆ.ಎಸ್.ಈಶ್ವರಪ್ಪನವರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಹೆಳದೂರ ಪ್ರವಾಹ ಪೀಡಿತ ಗ್ರಾಮಕ್ಕೆ ಭೇಟಿ ನೀಡಿ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಿದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮುಧೋಳ ತಾಲೂಕಿನ ಹಳೆ ನಂದಗಾವ್, ಢವಳೇಶ್ವರ, ಮಳಲಿ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಸಂತ್ರಸ್ತರ ನೋವನ್ನು ಆಲಿಸಿದರು. ಪ್ರವಾಹದಿಂದ ಸಂಪೂರ್ಣ ಜಲಾಗ್ರತಗೊಂಡ ಹಳೆ ನಂದಗಾಂವ ಗ್ರಾಮದ ಜನ ಒಪ್ಪಿದಲ್ಲಿ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ಕ್ರಮಕೈಗೊಳ್ಳುವುದಾಗಿ ಅವರು ತಿಳಿಸಿದರು.

## ವಿಜಯಪುರ



ಕರ್ನಾಟಕದ ಬರದನಾಡು ಎಂದು ಖ್ಯಾತಿ ಪಡೆದಿರುವ ವಿಜಯಪುರ ಜಿಲ್ಲೆಯಲ್ಲಿ ಮಳೆ ಆಗದಿದ್ದರೂ ಕೂಡ ಪ್ರವಾಹಕ್ಕೆ ಸಿಲುಕಿರುವ ರಾಜ್ಯದ 17 ಜಿಲ್ಲೆಗಳಲ್ಲಿ ವಿಜಯಪುರವೂ ಒಂದಾಗಿದೆ. ಕೃಷ್ಣಾ ಮತ್ತು ಭೀಮಾನದಿಗಳು ಅಪಾಯದ ಮಟ್ಟಮೀರಿ ಹರಿದ ಪರಿಣಾಮವಾಗಿ ಭೀಮಾ ಮತ್ತು ಕೃಷ್ಣಾ ನದಿ ತೀರದ ಪ್ರದೇಶಗಳು ಪ್ರವಾಹದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಜಿಲ್ಲೆಯಲ್ಲಿ ನೆರೆ ಸಂತ್ರಸ್ತರಿಗಾಗಿ ತೆರೆಯಲಾಗಿದ್ದ ಒಟ್ಟು 12 ಪರಿಹಾರ ಕೇಂದ್ರಗಳಲ್ಲಿ 1488 ಮಂದಿ ನಿರಾಶ್ರಿತರು ಆಶ್ರಯ ಪಡೆದುಕೊಂಡಿದ್ದರು. 483 ಕುಟುಂಬಗಳಿಗೆ ತಲಾ 10 ಸಾವಿರ ರೂ.ದಂತೆ ಪರಿಹಾರ ಚೆಕ್ ಮೂಲಕ ವಿತರಿಸಲಾಗಿದೆ. ಮನೆ ಹಾನಿಗೊಳಗಾದ ಜಿಲ್ಲೆಯ ಒಟ್ಟು 123 ಕುಟುಂಬಗಳಿಗೆ ತಲಾ 25 ಸಾವಿರ ರೂ. ಪರಿಹಾರ ಹಾಗೂ 18 ಕುಟುಂಬಗಳಿಗೆ 1 ಲಕ್ಷ ರೂ.ಗಳ ಪರಿಹಾರ ವಿತರಣೆಗೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ.

ಯಾವುದೇ ಬ್ಯಾಂಕಿನಿಂದ ಪರಿಹಾರ ಮೊತ್ತ ಪಾವತಿಯಲ್ಲಿ ವಿಳಂಬವಾದಲ್ಲಿ ತಕ್ಷಣ ಜಿಲ್ಲಾಧಿಕಾರಿಗಳ ಕಚೇರಿ ಕಂಟ್ರೋಲ್ ರೂಂ. ಟೋಲ್ ಫ್ರೀ ಸಂಖ್ಯೆ 1077 ಕರೆ ಮಾಡಿ ದೂರು ದಾಖಲಿಸುವಂತೆ ಕೂಡ ಸಂತ್ರಸ್ತರಿಗೆ ಜಿಲ್ಲಾಡಳಿತ ಸೂಚಿಸಿದೆ. ಆಗಸ್ಟ್ 5 ರಂದು ವಿಜಯಪುರದಲ್ಲಿ ನೆರೆಗೆ ಸಂಬಂಧಿಸಿದಂತೆ ಸಭೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಸಂಬಂಧಪಟ್ಟ ಅಧಿಕಾರಿಗಳು ಇಂತಹ ಪರಿಸ್ಥಿತಿಯಲ್ಲಿ ಜನರ ಸಂಕಷ್ಟಗಳಿಗೆ ಪರಿಹಾರವನ್ನು ಒದಗಿಸಿಕೊಡುವಲ್ಲಿ ಮುತುವರ್ಜಿ ವಹಿಸಬೇಕೆಂದು ಸೂಚಿಸಿದರು.

ಮುದ್ದೇಬಿಹಾಳ ತಾಲೂಕಿನ ಪ್ರವಾಹ ಪೀಡಿತ ಕಮಲದಿನ್ನಿ, ಕುಂಚನೂರ, ಮಸೂತಿ ಮತ್ತಿತರ ಗ್ರಾಮಗಳಿಗೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣರೆಡ್ಡಿ ಭೇಟಿ ನೀಡಿ ಪರಿಶೀಲಿಸಿದರು. ಕೃಷ್ಣಾ ಮತ್ತು



ಭೀಮಾನದಿ ತೀರದಲ್ಲಿ ಪ್ರವಾಹದಿಂದ ಹಾನಿಯಾಗಿರುವ ರೈತರ ಪಂಪಸೆಟ್‌ಗಳಿಗೂ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಿ ಈ ಬಗ್ಗೆ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ ಅವರು ಹೆಸ್ಕಾಂ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಜಿಲ್ಲೆಗೆ ಭೇಟಿ ನೀಡಿದ ಸಚಿವರಾದ ಕೆ.ಎಸ್ ಈಶ್ವರಪ್ಪ ಎಲ್ಲಾ ಸಂತ್ರಸ್ತರಿಗೂ ಸಮಾನ ರೀತಿಯಲ್ಲಿ ಪರಿಹಾರ ದೊರೆಯುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಪ್ರವಾಹದಿಂದ ಇದುವರೆಗೂ 33ಕೋಟಿ ನಷ್ಟವಾಗಿದ್ದು, ಹಾವು ಕಚ್ಚಿ ಇಂಡಿ ತಾಲೂಕಿನಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಅವರ ಕುಟುಂಬಕ್ಕೆ ರೂ.5ಲಕ್ಷ ಪರಿಹಾರ ವಿತರಿಸಲಾಗಿದೆ. ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಕಾಸ ಕಿಶೋರ ಸುರಳಕರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಕಾಶ ನಿಕ್ಕಂ ಅವರು ನಿರಂತರವಾಗಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮನೆ ಹಾನಿ, ಬೆಳೆ ಹಾನಿ, ಆಸ್ತಿ ಹಾನಿ, ಪರಿಶೀಲಿಸುವುದರ ಜೊತೆಗೆ ಸಂತ್ರಸ್ತರಿಗೆ ಸಾಂತ್ವನ ಹೇಳುವ ಕಾರ್ಯ ನಡೆಸಿದ್ದಾರೆ.



## ದಕ್ಷಿಣ ಕನ್ನಡ

ನೆರೆ ಪೀಡಿತ ಪ್ರದೇಶಗಳಲ್ಲಿ ಮೂಲಸೌಕರ್ಯ ನಿರ್ಮಾಣ ಎಲ್ಲಕ್ಕಿಂತಲೂ ತುರ್ತು ಕೆಲಸವಾಗಿರುತ್ತದೆ. ಪ್ರವಾಹಕ್ಕೆ ಕೊಚ್ಚಿಹೋದ ರಸ್ತೆ, ಸೇತುವೆಗಳ ಮರು ನಿರ್ಮಾಣ ಅಷ್ಟೊಂದು ಸುಲಭ ಸಾಧುವಲ್ಲ. ಇವುಗಳ ಮಧ್ಯೆ, ಪ್ರವಾಹಕ್ಕೆ ಕೊಚ್ಚಿ ಹೋದ ಸೇತುವೆಯನ್ನು ಕೇವಲ ಮೂರೇ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ ನಿರ್ಮಿಸಿ ಜನತೆಯಲ್ಲಿ ಹರ್ಷ ಮೂಡಿಸಿದೆ.

ಬೆಳ್ತಂಗಡಿ ತಾಲೂಕಿನ ಬಾಂಜಾರುಮಲೆ ಎಂಬ ಪ್ರದೇಶದಲ್ಲಿ ಬ್ರಿಟೀಷರ ಕಾಲದಲ್ಲಿ ನಿರ್ಮಿಸಿದ್ದ ಸೇತುವೆ ಆಗಸ್ಟ್ 9ರಂದು ಅಪ್ಪಳಿಸಿದ ಪ್ರವಾಹಕ್ಕೆ ಕೊಚ್ಚಿ ಹೋಗಿತ್ತು. ಇದರಿಂದ ಈ ಗ್ರಾಮದ ಜನತೆ ಸುರಕ್ಷಿತ ಸ್ಥಳಕ್ಕೆ ತೆರಳಲೂ ಆಗದೆ ಅತಂತ್ರರಾಗಿ, ದ್ವೀಪದಂತೆ ಸಿಲುಕಿದ್ದರು. ಇದರಿಂದ ಸುಮಾರು 40ಕ್ಕೂ ಹೆಚ್ಚು ಕುಟುಂಬಗಳು ಹೊರ ಪ್ರಪಂಚದೊಂದಿಗೆ ಸಂಪರ್ಕ ಕಳೆದುಕೊಂಡಿದ್ದರು.

ಇಂಜಿನಿಯರಿಂಗ್ ಪದವೀಧರರಾಗಿದ್ದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್ ಅವರು ಸೇತುವೆ ಕುಸಿದ ದಿನವೇ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೊಚ್ಚಿ ಹೋದ ಸೇತುವೆಯ ಸ್ಥಳದಲ್ಲಿಯೇ ಉಕ್ಕಿನ ಸೇತುವೆ ನಿರ್ಮಿಸಲು ಸೂಚಿಸಿದರು. ಅದರಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಪುತ್ತೂರು ಮಾಸ್ಟರ್ ಪ್ಲಾನರಿ ಸಂಸ್ಥೆಯ ತಂತ್ರಜ್ಞಾನದ ಮೂಲಕ ಸೇತುವೆ ನಿರ್ಮಾಣಕ್ಕೆ ಮುಂದಾದರು. ಇದಕ್ಕಾಗಿ ಸಂಸ್ಥೆಯವರು ಸುಮಾರು 15 ಗಂಟೆಗಳ ಕಾಲ ಈ ಉಕ್ಕು ಸೇತುವೆ ರಚನೆಯ ಪೂರ್ವ ತಯಾರಿ ನಡೆಸಿದರು. ಸ್ಥಳೀಯ ಶಾಸಕ ಹರೀಶ್ ಪೂಂಜಾ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಯಶವಂತ್ ಹಾಗೂ ಬೆಳ್ತಂಗಡಿ ಎಇಇ ಶಿವಪ್ರಸಾದ್ ಅಜಿಲ ಅವರ ಉಸ್ತುವಾರಿಯಲ್ಲಿ ಹರಿಯುತ್ತಿರುವ ಪ್ರವಾಹದ ನೀರಿನ ಮಧ್ಯೆಯೇ 4.5 ಮೀಟರ್ ಉದ್ದದ, ಏಕಕಾಲದಲ್ಲಿ 5 ಟನ್ ಭಾರ ( ಅಂದಾಜು 22 ಜನರು ಏಕಕಾಲಕ್ಕೆ ನಿಲ್ಲುವಷ್ಟು) ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದ ಸೇತುವೆಯನ್ನು ನಿರ್ಮಿಸಿದರು.







ಇಲ್ಲಿನ ಹೊಸಮಠ ಎಂಬಲ್ಲಿಯೂ ಮುಖ್ಯ ಸಂಪರ್ಕ ಸೇತುವೆಯೇ ಪ್ರವಾಹದ ಹೊಡೆತಕ್ಕೆ ಕೊಚ್ಚಿ ಹೋಗಿತ್ತು. ಇದರಿಂದ ಗ್ರಾಮದ ಜನತೆ ಅಕ್ಷರಶ: ಎರಡು ದಿನಗಳ ಕಾಲ ದಿಗ್ಬಂಧನಕ್ಕೊಳಗಾಗಿದ್ದರು. ಭಾರೀ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದುದರಿಂದ ರಕ್ಷಣಾ ಸಿಬ್ಬಂದಿಗಳಿಗೆ ಅತ್ತ ತೆರಳಲೂ ಅಸಾಧ್ಯವಾಗಿತ್ತು. ಆದರೆ, ಸ್ಥಳಕ್ಕೆ ಆಗಮಿಸಿದ್ದ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ(ಎನ್.ಡಿ.ಆರ್.ಎಫ್)ದ ಸದಸ್ಯರು ಅಸಾಧಾರಣ ಧೈರ್ಯ ಪ್ರದರ್ಶಿಸಿ, ಹಗ್ಗದ ಮೂಲಕ ಗ್ರಾಮದ ಇನ್ನೊಂದು ಬದಿಯಲ್ಲಿ ಸಿಲುಕಿದ್ದ ಹಿರಿಯರನ್ನು, ಗರ್ಭಿಣಿ ಮಹಿಳೆ, ರೋಗಿಗಳನ್ನು ಈ ಕಡೆಗೆ ಕರೆದುಕೊಂಡು ಬರುವಲ್ಲಿ ಯಶಸ್ವಿಯಾದರು. ಗ್ರಾಮದಲ್ಲಿಯೇ ಉಳಿದ ಜನರಿಗೆ ಹಗ್ಗದ ಮೂಲಕ ಅಗತ್ಯ ದಿನಬಳಕೆಯ ಸಾಮಾಗ್ರಿಗಳನ್ನು ಕಳುಹಿಸಿ ಕೊಡಲಾಯಿತು.

ಆಗಸ್ಟ್ 12ರಂದು ದಕ್ಷಿಣ ಕನ್ನಡ ಜಿಲ್ಲೆಯ ಅತಿವೃಷ್ಟಿ ಪ್ರದೇಶಗಳಿಗೆ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬೆಳ್ತಂಗಡಿ ತಾಲೂಕಿಗೆ ಭೇಟಿ ನೀಡಿ ಹಾನಿ ವೀಕ್ಷಿಸಿದರು. ಸಂತ್ರಸ್ತರು ವಾಸ್ತವ್ಯ ಹೂಡಿದ್ದ ಕುಕ್ಕಾವು ಶಾಲೆಯ ಪರಿಹಾರ ಕೇಂದ್ರಕ್ಕೂ ಭೇಟಿ ನೀಡಿ ಅವರಿಗೆ ಬದುಕು ಕಟ್ಟಲು ನೆರವು ನೀಡುವ ಭರವಸೆ ನೀಡಿ ಅವರಲ್ಲಿ ಧೈರ್ಯ ಮೂಡಿಸಿದರು. ಪ್ರವಾಹದಿಂದ ಮನೆ ಕಳೆದುಕೊಂಡ 1914 ಸಂತ್ರಸ್ತರ ದೈನಂದಿನ ಖರ್ಚಿಗೆ ತಲಾ ರೂ. 10 ಸಾವಿರದಂತೆ ರೂ. 191.4 ಲಕ್ಷ ಮೊತ್ತವನ್ನು ಪಾವತಿಸಲಾಗಿದೆ.



downloaded from: www.kpscvaani.com

## ಕಲಬುರಗಿ



ಕಲಬುರಗಿಯ ಭೀಮಾ ನದಿಯು ತುಂಬಿ ಹರಿದುದರಿಂದ ನದಿ ತೀರದಲ್ಲಿ ಪ್ರವಾಹ ಉಂಟಾಗಿತ್ತು. ಪ್ರವಾಹದ ಹಿನ್ನೀರಿನಿಂದ ಜಿಲ್ಲೆಯ ಅಫಜಲಪುರ, ಜೇವರ್ಗಿ, ಕಲಬುರಗಿ ಹಾಗೂ ಚಿತ್ತಾಪುರ ತಾಲೂಕಿನ ಒಟ್ಟು 31 ಗ್ರಾಮಗಳು ನೆರೆ ಹಾವಳಿಗೆ ಬಾಧಿತವಾಗಿದ್ದವು.

ಪ್ರವಾಹದ ಮುನ್ಸೂಚನೆ ಅರಿತ ಜಿಲ್ಲಾಧಿಕಾರಿ ಆರ್.ವೆಂಕಟೇಶ ಕುಮಾರ್ ಅವರು ನದಿ ತೀರದ ಗ್ರಾಮಗಳ ಸುಮಾರು 50 ಕುಟುಂಬಗಳನ್ನು ಸುರಕ್ಷಿತವಾಗಿ ಪುನರ್‌ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದುದು ಮೆಚ್ಚುಗೆಗೆ ಕಾರಣವಾಯಿತು. ಮುನ್ನೆಚರಿಕೆಯಾಗಿ ರಕ್ಷಣಾ ಕಾರ್ಯಕ್ಕಾಗಿ ಸಿಕಂದ್ರಾಬಾದಿನಿಂದ 100 ಸೈನಿಕರನ್ನು ಹೊಂದಿದ್ದ 202 ಇಂಜಿನೀಯರ್ ರೆಜ್‌ಮೆಂಟ್ ಸೇನಾ ಪಡೆಯನ್ನು ಕರೆಯಿಸಿ ಪ್ರವಾಹ ಪೀಡಿತ ಜಿಲ್ಲೆಯ 3 ತಾಲೂಕುಗಳಿಗೆ ನಿಯೋಜಿಸಲಾಗಿತ್ತು.

ಸಂತ್ರಸ್ತ ಕುಟುಂಬಕ್ಕೆ ಒಟ್ಟು 10 ಸಾವಿರ ರೂ. ಗಳಂತೆ 8.50 ಲಕ್ಷ ರೂ. ಪರಿಹಾರ ವಿತರಿಸಲಾಗಿದೆ. ಒಟ್ಟಾರೆ 9.63 ಲಕ್ಷ ರೂ. ಪರಿಹಾರವನ್ನು ಜಿಲ್ಲಾಡಳಿತವು ಸಂತ್ರಸ್ತರಿಗೆ ವಿತರಿಸಿದೆ.

ಪ್ರವಾಹದಲ್ಲಿ ಕೊಚ್ಚಿಹೋಗಿದ್ದ ಜೇವರ್ಗಿ ತಾಲೂಕಿನ ಕೋಳಕೂರ ಗ್ರಾಮದ ನಿವಾಸಿ ಬಸಣ್ಣ ದೊಡ್ಡಮನಿ ಅವರ ಕುಟುಂಬಕ್ಕೆ 24 ಗಂಟೆಯಲ್ಲಿ 5 ಲಕ್ಷ ರೂ. ಪರಿಹಾರಧನವನ್ನು ನೀಡುವ ಮೂಲಕ ಜಿಲ್ಲಾಡಳಿತ ತ್ವರಿತವಾಗಿ ಸ್ಪಂದಿಸಿತು.

ಪ್ರಾಥಮಿಕ ವರದಿಯ ಪ್ರಕಾರ ಜಿಲ್ಲೆಯಲ್ಲಿ 31.39 ಕೋಟಿ ರೂ.ಗಳ ಮೊತ್ತದ ಮೂಲಭೂತ ಸೌಕರ್ಯಗಳಿಗೆ ಹಾನಿ ಉಂಟಾಗಿದೆ. ಹಾಳಾದ ಬೆಳೆಗಳ ಸಮೀಕ್ಷೆ ಕಾರ್ಯ ಸಹ ಚುರುಕಿನಿಂದ ಸಾಗಿದ್ದು, ಹಣ ಬಿಡುಗಡೆಗಾಗಿ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.



## ಯಾದಗಿರಿ



ಪ್ರತಿ ಬಾರಿ ನೆರೆ ಬಂದಾಗಲೂ ಯಾದಗಿರಿ ಜಿಲ್ಲೆಯ ನೀಲಕಂಠರಾಯನ ಗಡ್ಡಿ ಗ್ರಾಮ ತತ್ತರಿಸುತ್ತೆ. ಕೃಷ್ಣಾ ಜಲ ವಿದ್ಯುತ್ ಕಂಪೆನಿಯು ನಿರ್ಮಿಸಿದ್ದ ಜಾಲರಿ ಸೇತುವೆಯೂ ಕೊಚ್ಚಿ ಹೋಗಿ, ಗ್ರಾಮ ಹೊರ ಜಗತ್ತಿನ ಸಂಪರ್ಕ ಕಳೆದುಕೊಂಡಿತ್ತು.

ಇಲ್ಲಿ ಹೆರಿಗೆ ನೋವಿನಿಂದ ಬಳಲುತ್ತಿದ್ದ ತುಂಬು ಗರ್ಭಿಣಿ ಹಣಮವ್ವ ಅವರನ್ನು ಅಗ್ನಿಶಾಮಕ ಸಿಬ್ಬಂದಿ ಸತತ ಮೂರು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ, ದಡ ಸೇರಿಸಿ ಆಸ್ಪತ್ರೆಗೆ ಸೇರಿಸುವಲ್ಲಿ ಯಶಸ್ವಿಯಾದರು. ರಕ್ಷಣಾ ಕಾರ್ಯಾಚರಣೆ ವೇಳೆ ಖುದ್ದು ಜಿಲ್ಲಾಧಿಕಾರಿ ಎಂ. ಕೂರ್ಮಾ ರಾವ್, ಎಸ್ಪಿ ಋಷಿಕೇಶ್ ಭಗವಾನ್ ಹಾಜರಿದ್ದರು. ಇನ್ನು ಗೆದ್ದಲಮರಿ ಗ್ರಾಮದಲ್ಲಿ ಒಂದೇ ಕುಟುಂಬದ 5 ಜನರನ್ನು ಹೆಲಿಕ್ಯಾಪ್ಟರ್ ಮೂಲಕ ರಕ್ಷಿಸಲಾಯಿತು. ಚೌಡೇಶ್ವರಹಾಳದ 2 ಕುಟುಂಬದ 5 ಜನರನ್ನು ದೋಣಿಯ ಮೂಲಕ ದಡ ಸೇರಿಸಲಾಯಿತು.

ಜಿಲ್ಲೆಯಲ್ಲಿ ನದಿಪಾತ್ರದ 22 ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗಿ, 339 ಮನೆಗಳು ಹಾನಿಗೀಡಾದವು. 75 ಗ್ರಾಮಗಳಲ್ಲಿ 7,663 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಯಿತು. ಜಿಲ್ಲಾಡಳಿತ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ವಿವಿಧ ಗ್ರಾಮಗಳ 7,260 ಜನರನ್ನು ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಿ, ಅವರಿಗೆ ಆಶ್ರಯ ಕಲ್ಪಿಸಿತ್ತು.

ಪ್ರವಾಹದಲ್ಲಿ ಸಾವನ್ನಪ್ಪಿದ ಕೌಳೂರು ಗ್ರಾಮದ ಸಾಬರಡ್ಡಿ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ವಿತರಿಸಲಾಗಿದೆ. ಜಿಲ್ಲೆಯಲ್ಲಿ ಅಂದಾಜು 26.16 ಕೋಟಿ ರೂ. ಮೊತ್ತದ ಹಾನಿ ಸಂಭವಿಸಿದ್ದು, ಸಚಿವರಾದ ಶ್ರೀರಾಮುಲು ಮತ್ತು ಪ್ರಭು ಚವ್ಹಾಣ್ ಅವರು ಯಾದಗಿರಿಯ ಪ್ರವಾಹ ಪೀಡಿತ ಪ್ರದೇಶಗಳ ಪರಿಶೀಲನೆ ನಡೆಸಿ, ಸಂತ್ರಸ್ತರಿಗೆ ಧೈರ್ಯ ತುಂಬಿದರು.

## ಗದಗ



ಹದಿನಾಲ್ಕು ವರ್ಷಗಳಿಂದ ವಾಡಿಕೆ ಮಳೆಯನ್ನೆ ಪಡೆಯದ ಗದಗ ಜಿಲ್ಲೆಯು ನೆರೆಪೀಡಿತವಾಗಿರುವುದು ಎರಡನೆ ಬಾರಿ. ಜಿಲ್ಲೆಯ ಮಲಪ್ರಭಾ ಮತ್ತು ತುಂಗಭದ್ರಾ ನದಿ ಪಾತ್ರಗಳನ್ನು ಹೊಂದಿದ್ದ ಒಟ್ಟು 40 ಗ್ರಾಮಗಳು ಕಂಡು ಕೇಳರಿಯದ ಪ್ರವಾಹದಿಂದ ಜಲಾವೃತವಾಗಿದ್ದವು. ನೆರೆಯ ಅಪಾಯವನ್ನು ಅರಿತ ಜಿಲ್ಲಾಡಳಿವು ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಹಾಗೂ ಅಧಿಕಾರಿಗಳ ಸಹಕಾರದಿಂದ ನೆರೆಯ ಎರಡು ದಿನಗಳ ಮುನ್ನವೇ ಗ್ರಾಮದ 47,919 ಜನರನ್ನು ಸ್ಥಳಾಂತರಿಸಿ 44 ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸು ಮೂಲಕ ಜನರ ಜೀವವನ್ನು ಕಾಪಾಡಿತು. ಜಿಲ್ಲಾಡಳಿತದ ಮುಂಜಾಗ್ರತಾ ಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಸಚಿವರು, ಕೇಂದ್ರ ನೆರೆ ಅಧ್ಯಯನ ತಂಡದವರು ಮೆಚ್ಚುಗೆ ವ್ಯಕ್ತಪಡಿಸಿದರು.

ನೆರೆಯಿಂದ ಜಿಲ್ಲೆಯಲ್ಲಿ ಅಂದಾಜು 305 ಕೋಟಿ ರೂ ಹಾನಿಯಾಗಿದೆ ಎಂದು ಅಂದಾಜಿಸಲಾಗಿದ್ದು, ರಾಜ್ಯ ಸರ್ಕಾರದ ನಿರ್ದೇಶನದಂತೆ ಪ್ರತಿ ಕುಟುಂಬಕ್ಕೆ ತಲಾ 10,000 ರೂ. ನಂತೆ ಈ ವರೆಗೆ 8,467 ಕುಟುಂಬಗಳಿಗೆ 8.47 ಕೋಟಿ ರೂ. ಪರಿಹಾರವನ್ನು ವಿತರಿಸಲಾಗಿದೆ. 73 ಜಾನುವಾರುಗಳು ಮೃತಪಟ್ಟಿದ್ದು 8.03 ಲಕ್ಷ ರೂ. ಪರಿಹಾರ ವಿತರಿಸಲಾಗಿದೆ.

ಗದಗ ಜಿಲ್ಲೆಯ ನೆರೆ ಸಂತ್ರಸ್ತರ ತುರ್ತು ಸ್ಥಳಾಂತರ, ಪರಿಹಾರ ಕೇಂದ್ರಗಳ ಸ್ಥಾಪನೆ, ವಿವಿಧ ಪರಿಹಾರ ವಿತರಣೆ ಸಂದರ್ಭದಲ್ಲಿ ಗದಗ ಜಿಲ್ಲಾಧಿಕಾರಿ, ಎಂ.ಜಿ.ಹಿರೇಮಠ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಾಥ ಜೋಷಿ, ಜಿ.ಪಂ. ಸಿಇಒ ಮಂಜುನಾಥ ಚವ್ಹಾಣ ಅವರುಗಳು ಹಗಲಿರುಳು ಕಾರ್ಯ ನಿರ್ವಹಿಸಿದರು.

ಅಪರ ಮುಖ್ಯ ಕಾರ್ಯದರ್ಶಿ ವಿ.ಮಂಜುಳ ಮತ್ತು ಕಾರ್ಯದರ್ಶಿ ಅಮ್ಲನ್ ಆದಿತ್ಯ ಬಿಸ್ವಾಸ್ ಅವರುಗಳು ಕೂಡ ನೆರೆ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರ ಕಾರ್ಯಗಳ ಪರಿಶೀಲನೆ ನಡೆಸಿದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಸಿ.ಸಿ. ಪಾಟೀಲ ಅವರು ಸೇರಿದಂತೆ ಶಾಸಕರು, ಸಂಸದರು, ಹಾಗೂ ಸ್ಥಳೀಯ ಜನಪ್ರತಿನಿಧಿಗಳು, ಪರಿಹಾರ ಕಾರ್ಯದಲ್ಲಿ ಕೈಜೋಡಿಸಿದರು. ಆಗಸ್ಟ್ 9ರಂದು ಜಿಲ್ಲೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸಂತ್ರಸ್ತರಿಗೆ ಸಾಂತ್ವನ ಮತ್ತು ಧೈರ್ಯ ತುಂಬಿದರು.

## ಕೊಪ್ಪಳ

ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ, ಗಂಗಾವತಿ & ಕಾರಟಗಿ ತಾಲೂಕುಗಳಿಗೆ ಮಾತ್ರ ನೆರಹಾನಿಯಾಗಿರುತ್ತದೆ. ನದಿಗೆ ಹೆಚ್ಚುವರಿಯಾಗಿ ನೀರು ಬಿಟ್ಟರೆ ಪ್ರವಾಸಿಗರಿಗೆ ತೊಂದರೆಯಾಗುತ್ತದೆ ಎಂದು ಗೊತ್ತಿದ್ದರೂ ಸಹ ಗಂಗಾವತಿ ತಾಲೂಕಿನ ವಿರುಪಾಪುರ ಗಡ್ಡಿಯಲ್ಲಿ ಬರುವ ಎಲ್ಲಾ ರೆಸಾರ್ಟ್/ಹೋಟಲ್ ಮಾಲೀಕರು ಪ್ರವಾಸಿಗರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸದ ಹಿನ್ನಲೆಯಲ್ಲಿ 21 ರೆಸಾರ್ಟ್/ಹೋಟಲ್ ಮಾಲೀಕರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಲಾಯಿತು. ಅಲ್ಲದೆ ಅಲ್ಲಿ ಸಿಲುಕಿದ್ದ 592 ಪ್ರವಾಸಿಗರನ್ನು ರಕ್ಷಣೆ ಮಾಡಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು.

ಕೊಪ್ಪಳ ತಾಲೂಕಿನ ಮುನಿರಾಬಾದ್ ಗ್ರಾಮದ 650 ಜನರಿಗಾಗಿ 6 ದಿನಗಳವರೆಗೆ ಪರಿಹಾರ ಕೇಂದ್ರವನ್ನು ತೆರೆಯಲಾಗಿತ್ತು. ನೀರು ನುಗ್ಗಿದ್ದ, 150 ಮನೆಗಳ ಪೈಕಿ 145 ಮನೆ ಮಾಲೀಕರಿಗೆ ರೂ. 10,000/– ದಂತೆ ಒಟ್ಟು ರೂ. 14.50 ಲಕ್ಷ ಪರಿಹಾರವನ್ನು ಆರ್.ಟಿ.ಜಿ.ಎಸ್ ಮೂಲಕ ಅವರ ಖಾತೆಗೆ ಜಮಾ ಮಾಡಲಾಗಿದೆ. ಇನ್ನುಳಿದ 5 ಮನೆಗಳು ಭಾಗಶಃ ಹಾನಿಯಾಗಿದ್ದರಿಂದ ರೂ. 25,000/– ರಂತೆ ಒಟ್ಟು ರೂ. 1.25 ಲಕ್ಷ ಪರಿಹಾರವನ್ನು ನೀಡಲಾಗಿದೆ.

ತುಂಗಭದ್ರ ಜಲಾಶಯದಿಂದ ಹೆಚ್ಚುವರಿಯಾಗಿ ನೀರು ಬಿಟ್ಟದ್ದರಿಂದ 199.72 ಹೆಕ್ಟೇರ್ ಕೃಷಿ ಮತ್ತು 86 ಹೆಕ್ಟೇರ್ ತೋಟಗಾರಿಕೆ ಬೆಳೆಹಾನಿಯಾಗಿದೆ. ಬೆಳೆಗಳ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಿ ಫಲಾನುಭವಿಗಳಿಗೆ ಆರ್.ಟಿ.ಜಿ.ಎಸ್ ಮೂಲಕವೇ ಪರಿಹಾರವನ್ನು ವಿತರಿಸಲು ಕ್ರಮಕೈಗೊಳ್ಳಲಾಗಿದೆ.

ಸಚಿವರಾದ ಸಿ.ಸಿ. ಪಾಟೀಲ ಅವರು ಕೊಪ್ಪಳ ತಾಲ್ಲೂಕಿನ ಮುನಿರಾಬಾದ ಗ್ರಾಮ ಸೇರಿದಂತೆ ನೆರೆ ಹಾವಳಿಗೆ ಒಳಗಾದ ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ನಿವಾಸಿಗಳೊಂದಿಗೆ ಮಾತನಾಡಿ, ಪರಿಹಾರ ಒದಗಿಸುವ ಭರವಸೆ ನೀಡಿದರು.







downloaded from: www.kpscvaani.com



ತುಂಗಾ ಜಲಾಶಯದ ನೀರನ್ನು ಹೊರಬಿಡುವ ಸೂಚನೆ ದೊರೆತ ಕ್ಷಣದಲ್ಲಿ ಜಿಲ್ಲಾಡಳಿತ ತುಂಗಾ ನದಿಪಾತ್ರದ ತಗ್ಗು ಪ್ರದೇಶದ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಮೂಲಕ ಸಂಭವಿಸಬಹುದಾದ ಭಾರೀ ಅವಘಡ ಹಾಗೂ ಪ್ರಾಣಹಾನಿ ತಪ್ಪಿಸಲು ಸಾಧ್ಯವಾಯಿತು.

ಈ ಸಮಯದಲ್ಲಿ ಮನೆಗಳಿಂದ ಹೊರಬಂದು ನಿರಾಶ್ರಿತರಾದ ಸಂತ್ರಸ್ತರಿಗೆ ತಕ್ಷಣದಲ್ಲಿ 15 ನೆರೆಪರಿಹಾರ ಕೇಂದ್ರಗಳನ್ನು ತೆರೆದು, ಅವರ ಊಟ, ವಸತಿ, ಆರೋಗ್ಯದ ಕುರಿತು ತಕ್ಷಣದ ಕ್ರಮ ಕೈಗೊಳ್ಳಲಾಯಿತು.

ಸ್ವತಃ ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಣಿವಣ್ಣನ್ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ ಅವರೊಂದಿಗೆ ಜಿಲ್ಲೆಯಾದ್ಯಂತ ನೆರೆ ಹಾವಳಿಗೆ ತುತ್ತಾದ ಅನೇಕ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಗತಿಯನ್ನು ಪರಿಶೀಲಿಸುವ ಜೊತೆಗೆ ಹಗಲಿರುಳೆನ್ನದೆ ತಮ್ಮ ಸಿಬ್ಬಂದಿಗಳೊಂದಿಗೆ ಸಂತ್ರಸ್ತರ ನೆರವಿಗೆ ಧಾವಿಸಿದರು.



ನೆರೆ ಪರಿಸ್ಥಿತಿ ಬಗ್ಗೆ ದಿನದ 24ಗಂಟೆ ನಿಗಾ ಇರಿಸಲು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿಯಂತ್ರಣ ಕೊಠಡಿ ತೆರೆಯಲಾಗಿತ್ತು, ಜನರು ನದಿ ಪಾತ್ರವನ್ನು ತೊರೆದು, ತಮ್ಮ ಜಾನುವಾರುಗಳೊಂದಿಗೆ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರವಾಗುವಂತೆ ಹಾಗೂ ಹಳೆಯ ಮಣ್ಣಿನ ಮನೆಗಳಲ್ಲಿ ವಾಸಿಸುತ್ತಿರುವವರು ಸುರಕ್ಷತೆ ದೃಷ್ಟಿಯಿಂದ ಮನೆ ತೆರವುಗೊಳಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು,

ಮಹಾವೀರ ಗೋಶಾಲೆಗೆ ನೀರು ನುಗ್ಗಿದ್ದರಿಂದ, ಜೀವನ್ಮರಣದ ಸ್ಥಿತಿಯಲ್ಲಿದ್ದ 450 ದನ ಕರುಗಳನ್ನು ಸಿವಿಲ್ ಡಿಫೆನ್ಸ್ ಬೋಟ್ ಸಂಸ್ಥೆಯವರು ಎರಡು ಬೋಟ್‌ಗಳ ಮೂಲಕ ರಕ್ಷಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹೆಗಲತ್ತಿ, ಶಿವಮೊಗ್ಗ ನಗರದ ಹಲವು ಬಡಾವಣೆಗಳು, ಶಿಕಾರಿಪುರ, ಸೊರಬ ಮತ್ತು ಸಾಗರ ತಾಲೂಕಿನ ಅನೇಕ ಗ್ರಾಮಗಳಿಗೆ ಭೇಟಿ ನೀಡಿ ಪರಿಹಾರ ಕಾರ್ಯ ಚುರುಕುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ನೆರೆಯಿಂದ ಹಾನಿಗೊಳಗಾದ 6850ಕುಟುಂಬಗಳಿಗೆ ತಲಾ ರೂ.10,000/–ಗಳನ್ನು ತಕ್ಷಣದ ಪರಿಹಾರವಾಗಿ ವಿತರಿಸಲಾಗಿದೆ. 41 ಮೃತ ಜಾನುವಾರುಗಳ ಮಾಲೀಕರಿಗೆ ರೂ.10.36ಲಕ್ಷ ಪರಿಹಾರಧನ ನೀಡಲಾಗಿದೆ. ಹಾನಿಗೊಳಗಾಗಿರುವ 1069 ಮನೆಗಳಿಗೆ ತಲಾ ರೂ.1.00 ಲಕ್ಷ, ಭಾಗಶಃ ಹಾನಿಗೊಳಗಾಗಿರುವ 2027 ಮನೆಗಳಿಗೆ ತಲಾ ರೂ.25,000/–ಗಳನ್ನು ವಿತರಿಸಲಾಗಿದೆ. ಸಂಪೂರ್ಣ ನಾಶವಾಗಿರುವ 655 ಮನೆಗಳ ವಾಸ್ತವ ಸ್ಥಿತಿಗತಿ ಮತ್ತು ಅಂದಾಜು ವೆಚ್ಚಗಳ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.



downloaded from: www.kpscvaani.com





ರಾಜ್ಯದ ಅತೀ ದೊಡ್ಡ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಎಂದೂ ಕಂಡರಿಯದ ಪ್ರವಾಹದ ಹೊಡೆತಕ್ಕೆ ನಲುಗಿದ್ದ ಲಕ್ಷಾಂತರ ಜನರ ನೆರವಿಗೆ ತಕ್ಷಣವೇ ಧಾವಿಸಿದ ಜಿಲ್ಲಾಡಳಿತವು ದೊಡ್ಡ ಪ್ರಮಾಣದ ಸಾವು–ನೋವು ತಡೆಗಟ್ಟುವಲ್ಲಿ ಯಶಸ್ವಿಯಾಯಿತು.

ಸಪ್ತ ನದಿಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿರುವ ಬೆಳಗಾವಿ ಜಿಲ್ಲೆಗೆ ಬರ ಮತ್ತು ನೆರೆ ಹೊಸದೇನಲ್ಲ. ಒಟ್ಟು 377 ಗ್ರಾಮಗಳು ಪ್ರವಾಹದಿಂದ ಬಾಧಿತಗೊಂಡಿದ್ದರಿಂದ ಜಿಲ್ಲಾಡಳಿತವು ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸುವ ಮೂಲಕ ಒಂದು ಲಕ್ಷ ಕುಟುಂಬಗಳ 4.15 ಲಕ್ಷ ಜನರನ್ನು ಹಾಗೂ 1.10 ಲಕ್ಷ ಜಾನುವಾರುಗಳನ್ನು ರಕ್ಷಿಸಿ, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡುವಲ್ಲಿ ಯಶಸ್ವಿಯಾಯಿತು.

ಸೇನೆಯ ನೆರವಿನೊಂದಿಗೆ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದರೂ ಕೂಡ ಮನೆಗಳ ಕುಸಿತ ಮತ್ತು ಪ್ರವಾಹದ ನೀರಿನಲ್ಲಿ ಸಿಲುಕಿದ ಪರಿಣಾಮವಾಗಿ 24 ಜನರು ಪ್ರಾಣವನ್ನು ಕಳೆದುಕೊಂಡಿದ್ದು ದುರದೃಷ್ಟಕರ.

ಐದು ಹೆಲಿಕಾಪ್ಟರ್ ಮತ್ತು ಬೋಟುಗಳ ಮೂಲಕ ಸೇನೆ, ಎನ್‌ಡಿಆರ್‌ಎಫ್, ಎಸ್‌ಆರ್‌ಡಿಎಫ್, ಪೊಲೀಸ್, ಅಗ್ನಿಶಾಮಕ ದಳ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ತಮ್ಮ ಪ್ರಾಣದ ಹಂಗು ತೊರೆದು ನಡುಗಡ್ಡೆಯಂತಾಗಿದ್ದ ಗ್ರಾಮಗಳಲ್ಲಿ ಸಿಲುಕಿದ್ದ ಸುಮಾರು 599 ಜನರ ಜೀವರಕ್ಷಣೆ ಮಾಡಿದುದು ದೊಡ್ಡ ಸಾಧನೆ. ಜನರನ್ನು ಮಾತ್ರವಲ್ಲದೇ ಸಾವಿರಾರು ಜಾನುವಾರುಗಳನ್ನು ಕೂಡ ಸುರಕ್ಷಿತವಾಗಿ



ಕರೆತಂದ ಕೀರ್ತಿ ಈ ಎಲ್ಲ ಸಿಬ್ಬಂದಿಗೆ ಸಲ್ಲುತ್ತದೆ.

ರಾತ್ರೋರಾತ್ರಿ ಉಟ್ಟಬಟ್ಟೆಯಲ್ಲಿಯೇ ಬಂದ ಜನರಿಗೆ ಊಟೋಪಹಾರ ಹಾಗೂ ವಸತಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಬೆಳಗಾವಿ ಜಿಲ್ಲೆಯಲ್ಲಿ 493 ಪರಿಹಾರ ಕೇಂದ್ರಗಳನ್ನು ಆರಂಭಿಸಿ, 1.81 ಲಕ್ಷ ಜನರಿಗೆ ಆಶ್ರಯ ನೀಡಲಾಗಿತ್ತು, ಅದೇ ರೀತಿಯಲ್ಲಿ ಜಾನುವಾರುಗಳಿಗೂ ಪರಿಹಾರ ಕೇಂದ್ರಗಳ ಪಕ್ಕದಲ್ಲಿಯೇ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಿ, ಉಚಿತ ಮೇವು ಪೂರೈಸಲಾಯಿತು.

ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಮತ್ತು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಭೇಟಿ ನೀಡಿ ಪ್ರವಾಹದ ತೀವ್ರತೆಯನ್ನು ಪರಿಶೀಲಿಸಿ, ಸಂತ್ರಸ್ತರ ಸಮಸ್ಯೆಯನ್ನು ಆಲಿಸಿದರು.



ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದೆಂದೂ ಕಂಡರಿಯದ ಭಾರೀ ಮಳೆಯಿಂದಾಗಿ ಜಿಲ್ಲೆಯ 12 ತಾಲೂಕುಗಳ 113 ಗ್ರಾಮಗಳು ಮುಳುಗಡೆಯಾಗಿದ್ದವು. ಈ ಗ್ರಾಮಗಳಲ್ಲಿ ಸಿಲುಕಿಕೊಂಡ 6200 ಜನರನ್ನು ನೌಕಾನೆಲೆಯ ರಕ್ಷಣಾತಂಡ, ಕರಾವಳಿ ಭದ್ರತಾಪಡೆ, ಅಗ್ನಿಶಾಮಕ ತಂಡ, ಜಿಲ್ಲಾ ಕಡಲತೀರ ಪ್ರದೇಶಾಭಿವೃದ್ಧಿ ಸಮಿತಿಯ ದೋಣಿಗಳು ಹಾಗೂ ಸ್ಥಳೀಯ ಮೀನುಗಾರರ ದೋಣಿಗಳನ್ನು ಬಳಸಿಕೊಂಡು ರಕ್ಷಣೆ ಮಾಡಿ ಸುರಕ್ಷಿತ ಸ್ಥಳಗಳಿಗೆ ತಲುಪಿಸುವಲ್ಲಿ ಉತ್ತರಕನ್ನಡ ಜಿಲ್ಲಾಡಳಿತ ಯಶಸ್ವಿಯಾಯಿತು.

ಯಲ್ಲಾಪುರ ತಾಲೂಕಿನ ಗುಳ್ಳಾಪುರ ಹಾಗೂ ಅಂಕೋಲ ತಾಲೂಕಿನ ಕೆಲ ಭಾಗಗಳಲ್ಲಿನ ನೆರೆಯಲ್ಲಿ ಸಿಲುಕಿದ್ದ ಸಂತ್ರಸ್ತರಿಗೆ ನೌಕಾನೆಲೆಯ ಹೆಲಿಕ್ಯಾಪ್ಟರ್ ಮೂಲಕ ಆಹಾರ ಸಾಮಗ್ರಿ, ಔಷಧಿ ಮುಂತಾದ ಅವಶ್ಯಕ ಸಾಮಗ್ರಿಗಳನ್ನು ಸರಬರಾಜು ಮಾಡಲಾಯಿತು.

ಕಾಳಿ ನದಿಪಾತ್ರದಲ್ಲಿ ವಾಸವಿದ್ದ ಜನರನ್ನು ಮುನ್ನೆಚ್ಚರಿಕಾ ಕ್ರಮವಾಗಿ ಮೊದಲೇ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿತ್ತು. ಜಿಲ್ಲೆಯಲ್ಲಿ ತೆರೆಯಲಾಗಿದ್ದ ಒಟ್ಟು 134 ಪುನರ್ವಸತಿ ಕೇಂದ್ರಗಳಲ್ಲಿ 16,391 ಜನರು ಆಶ್ರಯ ಪಡೆದಿದ್ದರು.

ಜಿಲ್ಲೆಯಲ್ಲಿ ನೆರೆಹಾವಳಿಯಿಂದಾಗಿ ತೊಂದರೆಗೊಳಗಾದ 7776 ಕುಟುಂಬಗಳಿಗೆ ವಿಶೇಷ ಆಹಾರಕಿಟ್‌ಗಳನ್ನು ವಿತರಿಸಲಾಗಿದೆ. ನೆರೆಹಾವಳಿಯಿಂದ ಮೃತಪಟ್ಟ 4 ಮಂದಿಯ ವಾರಸುದಾರರಿಗೆ ತಲಾ ರೂ. 5 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ. 9925.20 ಹೆಕ್ಟೇರ್ ಕೃಷಿ ಬೆಳೆ ಹಾಗೂ 3076.53 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಬೆಳೆ ತಂತ್ರಾಂಶದ ಮೂಲಕ ಸಮೀಕ್ಷೆ ನಡೆಯುತ್ತಿದ್ದು, ಪರಿಹಾರ ಕಾರ್ಯ ಪ್ರಗತಿಯಲ್ಲಿದೆ.



ನೆರೆಹಾವಳಿಯಿಂದಾಗಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳು ಸೇರಿದಂತೆ ಒಟ್ಟು ರೂ. 718.44 ಕೋಟಿ ಹಾನಿಯಾಗಿದೆ. ಪ್ರಸ್ತುತ 12 ತಾಲೂಕುಗಳಿಗೆ ತಲಾ ಒಂದು ಕೋಟಿ ರೂಪಾಯಿ ಅನುದಾನವನ್ನು ನೆರೆ ಪರಿಹಾರಗಳಿಗೆ ಬಿಡುಗಡೆ ಮಾಡಲಾಗಿದೆ.

ಕೈಗಾರಿಕಾ ಸಚಿವರಾದ ಜಗದೀಶ್ ಶೆಟ್ಟರ್ ಅವರು ಉತ್ತರಕನ್ನಡ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೀಷ್ ಮೌದ್ಗಿಲ್, ಜಿಲ್ಲಾಧಿಕಾರಿ ಡಾ.ಹರೀಶ್‌ಕುಮಾರ್.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ರೋಷನ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜ್ ಹಾಗೂ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡು ಪ್ರವಾಹ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು.



downloaded from: www.kpscvaani.com



ಜಿಲ್ಲೆಯಲ್ಲಿ ನದಿ, ಸರೋವರಗಳು ಹರಿದಿಲ್ಲವಾದರೂ ಕಳೆದ ಆಗಸ್ಟ್ 3 ರಿಂದ 10 ರವರೆಗೆ ವಾಡಿಕೆ 33 ಮಿ.ಮೀ.ಗಿಂತ ಅಧಿಕವಾಗಿ 289 ಮಿ.ಮೀ ಮಳೆ ಸುರಿದ ಪರಿಣಾಮ ಬೆಣ್ಣೆ ಹಳ್ಳ, ತುಪ್ಪರಿ ಹಳ್ಳ ಉಕ್ಕಿ ಹರಿದಿದ್ದರಿಂದ ಹುಬ್ಬಳ್ಳಿ, ಕುಂದಗೋಳ, ನವಲಗುಂದ ಹಾಗೂ ಅಣ್ಣಿಗೇರಿಯ ಜನತೆ, ಜಾನುವಾರುಗಳು ತೀವ್ರ ಸಂಕಷ್ಟಕ್ಕೀಡಾದರು. ಡೌಗಿ ನಾಲಾ ಹಾಗೂ ಹೂಲಿಕೇರಿ ಗ್ರಾಮದ ಇಂದಿರಮ್ಮನ ಕೆರೆ ತುಂಬಿ ಹರಿದ ಪರಿಣಾಮ ಅಳ್ನಾವರ ಪಟ್ಟಣದ ತಗ್ಗು ಪ್ರದೇಶದ ಬಡಾವಣೆಗಳ ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡರು.

ಅತಿವೃಷ್ಟಿಗೆ ಜಿಲ್ಲೆ ನಾಲ್ಕು ಮಂದಿ ಮತ್ತು 212 ಜಾನುವಾರುಗಳ ಜೀವ ಹಾನಿಯಾಯಿತು. ಸುಮಾರು 672 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸಾರ್ವಜನಿಕ ಆಸ್ತಿ ಪಾಸ್ತಿಗಳ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಅತಿವೃಷ್ಟಿ ಆರಂಭವಾದ ಮೊದಲ ದಿನದಿಂದಲೇ ಜಿಲ್ಲಾಡಳಿತ ಜಾಗೃತವಾಗಿ ಹಗಲಿರುಳೆನ್ನದೇ ಶ್ರಮಿಸಿ ಜನರ ಸಂಕಷ್ಟಕ್ಕೆ ಸ್ಪಂದಿಸಿತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಮಂಜುಳ, ಜಿಲ್ಲಾಧಿಕಾರಿ ದೀಪಾ ಚೋಳನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಬಿ. ಸಿ.ಸತೀಶ್, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ. ಸುರೇಶ ಇಟ್ನಾಳ, ಅಪರ ಜಿಲ್ಲಾಧಿಕಾರಿ ಇಬ್ರಾಹಿಂ ಮೈಗೂರ್, ಸೇರಿದಂತೆ ಜಿಲ್ಲೆಯ ಉಪ ವಿಭಾಗಾಧಿಕಾರಿಗಳು, ವಿವಿಧ



ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗ, ಪೌರ ಕಾರ್ಮಿಕರು ಸಮಯ ಪ್ರಜ್ಞೆಯಿಂದ ಮಾನವೀಯ ನೆಲೆಯಲ್ಲಿ ಕರ್ತವ್ಯ ನಿರ್ವಹಿಸಿದರು.

ಅತಿವೃಷ್ಟಿ ಅವಧಿಯಲ್ಲಿ ಜಿಲ್ಲೆಯಾದ್ಯಂತ ಸರಾಸರಿ 5 ದಿನಗಳವರೆಗೆ ಸುಮಾರು 2 ಕೋಟಿ ರೂ ವೆಚ್ಚದಲ್ಲಿ ಜಿಲ್ಲೆಯಾದ್ಯಂತ 127 ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿ 38931 ಸಂತ್ರಸ್ತರಿಗೆ ಆಶ್ರಯ ಕಲ್ಪಿಸಲಾಗಿತ್ತು. 2743 ಕುಟುಂಬಗಳಿಗೆ ಹತ್ತು ಸಾವಿರದಂತೆ ಪರಿಹಾರವನ್ನು ವಿತರಿಸಲಾಗಿದೆ. ಜಿಲ್ಲಾಡಳಿತದ ವತಿಯಿಂದ 10ಕೆ.ಜಿ. ಅಕ್ಕಿ, 01 ಕೆ.ಜಿ. ತೊಗರಿ ಬೇಳೆ, 01 ಕೆಜಿ ಸಕ್ಕರೆ, 01 ಕೆ.ಜಿ. ಅಯೋಡಿನ್‌ಯುಕ್ತ ಉಪ್ಪು, 01ಲೀಟರ್ ತಾಳೆ ಎಣ್ಣೆ ಹಾಗೂ ಪ್ರತ್ಯೇಕವಾಗಿ 05 ಲೀಟರ್ ಸೀಮೆಎಣ್ಣೆಯ ಕ್ಯಾನ್ ಒಳಗೊಂಡ 33852 ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಗಿದೆ.



## ಹಾವೇರಿ



"ನಾನೊಬ್ಬ ರೈತನ ಮಗ. ನಿಮಗೆ ಅನ್ಯಾಯ ಆಗುವುದಕ್ಕೆ ಬಿಡುವುದಿಲ್ಲ, ರಾಜ್ಯದಲ್ಲಿನ ಬೇರೆಲ್ಲಾ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿಯಾದರೂ ನಿಮಗೆ ಬದುಕು ಕಟ್ಟಿಕೊಡುತ್ತೇನೆ ನಿಶ್ಚಿಂತರಾಗಿರಿ". ಎಂದು ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಅವರು ಹಾವೇರಿ ಪ್ರವಾಹಪೀಡಿತ ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂತ್ರಸ್ತರನ್ನು ಉದ್ದೇಶಿಸಿ ಹೇಳಿದ ಈ ಮಾತುಗಳು ಕುಗ್ಗಿಹೋದ ಮನಸ್ಸುಗಳಿಗೆ ಭರವಸೆ ಮೂಡಿಸಿದೆ.

ಪ್ರವಾಹದಿಂದ ತತ್ತರಿಸಿದ ಹಾವೇರಿ ಜಿಲ್ಲೆಯ ನಾಗನೂರು, ಕೂಡಲ, ಕುಣಿಮೆಳ್ಳಹಳ್ಳಿ, ಕರ್ಜಗಿ ಗ್ರಾಮಗಳಿಗೆ ಭೇಟಿ ನೀಡಿ ಮನೆಗಳ ಹಾನಿ, ಬೆಳೆಹಾನಿ, ಮೂಲ ಸೌಕರ್ಯಗಳ ಹಾನಿಯ ಪರಿಶೀಲನೆ ನಡೆಸಿದ ಯಡಿಯೂರಪ್ಪ ಅವರು, ಜೀವಮಾನವಿಡಿ ಗಳಿಸಿದ ಗಳಿಕೆ ಕಣ್ಣೆದುರೆ ನೀರುಪಾಲಾಗಿ ಕುಗ್ಗಿ ಹೋಗಿರುವ ಸಂತ್ರಸ್ತರ ಸಮಸ್ಯೆಗಳನ್ನು ಸಮಾಧಾನಚಿತ್ತರಾಗಿ ಆಲಿಸಿದರು. ಹೊಸ ಮನೆ, ಹೊಸ ಬದುಕು ಆರಂಭಿಸಲು ನಿಮ್ಮೊಂದಿಗೆ ನಾನಿದ್ದೇನೆ ಎಂದು ಹೇಳುವ ಮೂಲಕ ಆತ್ಮವಿಶ್ವಾಸ ತುಂಬಿ ನೆರೆಯಿಂದ ಕಂಗಾಲಾದವರಿಗೆ ಹೊಸ ಬದುಕು ಕಟ್ಟಿಕೊಳ್ಳಲು ವಿಶ್ವಾಸ ತುಂಬಿದರು.





ನೆರೆ ಹಾವಳಿಯಿಂದ ಅತಂತ್ರಗೊಂಡಿದ್ದ ಜಿಲ್ಲೆಯ 131 ಹಳ್ಳಿಗಳ ಜನರಿಗಾಗಿ 159 ಪರಿಹಾರ ಕೇಂದ್ರಗಳನ್ನು ತೆರೆದು 17,415 ಸಂತ್ರಸ್ತರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು, ನೆರೆ ಇಳಿದ ಮೇಲೆ ಮನೆಗೆ ತೆರಳಿದ ನಾಲ್ಕು ಸಾವಿರ ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಯಿತು. ನೆರೆಯಿಂದ ಒಬ್ಬ ವ್ಯಕ್ತಿ ನದಿಯಲ್ಲಿ ಕೊಚ್ಚಿಹೋಗಿ ಮೃತರಾದರೆ, 131 ಜಾನುವಾರುಗಳು ಸಾವನ್ನಪ್ಪಿದವು. ನೆರೆಯಿಂದಾಗಿ ಜಿಲ್ಲೆಯಲ್ಲಿ ಅಂದಾಜು 131967 ಲಕ್ಷ ರೂ. ನಷ್ಟ ಉಂಟಾಗಿದೆ.

ಮನೆ ಕಳೆದುಕೊಂಡ 59 ಕುಟುಂಬಗಳಿಗೆ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿಕೊಡಲಾಗಿದೆ. 4489 ಕುಟುಂಬಗಳಿಗೆ ಜೀವನೋಪಾಯ ಸಾಮಗ್ರಿ ಖರೀದಿಸಲು ಹತ್ತು ಸಾವಿರ ರೂ. ತುರ್ತು ಪರಿಹಾರ ನೀಡಿದೆ. ಪ್ರವಾಹಕ್ಕೆ ಒಳಗಾಗುವ ವರದಾ ಹಾಗೂ ಧರ್ಮಾ ನದಿ ಪಾತ್ರದ 19 ಗ್ರಾಮಗಳಿಗೆ ತಡೆಗೋಡೆ ನಿರ್ಮಾಣ ಕಾರ್ಯ ಹಾಗೂ 19 ಗ್ರಾಮಗಳ ಶಾಶ್ವತ ಸ್ಥಳಾಂತರಕ್ಕೆ ನೀಲಿ ನಕ್ಷೆ ಸಿದ್ಧಪಡಿಸಲಾಗುತ್ತಿದೆ. ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ, ಜಿಲ್ಲಾಧಿಕಾರಿ ಕೃಷ್ಣ ಬಾಜಪೇಯಿ, ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ನೆರೆಯಿಂದಾಗಿ ಬದುಕು ಕಳೆದುಕೊಂಡವರಿಗೆ ಬದುಕು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿದ್ದರು.



downloaded from: www.kpscvaani.com

## ಮಡಿಕೇರಿ





ಕೊಡಗು ಎಂದರೆ ಮಳೆ, ಮಳೆ ಎಂದರೆ ಕೊಡಗು ಎನ್ನುವಂತೆ ಆಗಸ್ಟ್ 6, 7, 8 ಮತ್ತು 9 ರಂದು ಬಿಡುವು ನೀಡದೇ ಸುರಿದ ಮಹಾಮಳೆಗೆ ಈ ಬಾರಿ ಭಾಗಮಂಡಲ, ತೋರ ಮತ್ತು ವಿರಾಜಪೇಟೆಗಳಲ್ಲಿ ಭೂಕುಸಿತ ಹಾಗೂ ಕುಂಬಾರ ಗುಂಡಿ, ಕರಡಿಗೋಡು, ಗುಹ್ಯ ಮತ್ತಿತರ ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿ ಇಡೀ ಜನಜೀವನವೇ ಕಣ್ಣೀರಿನಲ್ಲಿ ಕೈತೊಳೆಯುವಂತಾಯಿತು.

ವಿರಾಜಪೇಟೆ–ಮಾಕುಟ್ಟ ಹೆದ್ದಾರಿ ಮಾರ್ಗ ಸೇರಿದಂತೆ ಹಲವು ಗ್ರಾಮೀಣ ರಸ್ತೆಗಳಲ್ಲಿ ಭೂಕುಸಿತ ಮತ್ತು ಪ್ರವಾಹದಿಂದಾಗಿ ರಸ್ತೆ ಸಂಪರ್ಕವೇ ಕಡಿದು ಹೋಯಿತು. ಹಲವು ಕುಟುಂಬಗಳು, ಮನೆ–ಮಠ, ಆಸ್ತಿ–ಪಾಸ್ತಿ, ಕಳೆದುಕೊಂಡರು. ಭೂ ಕುಸಿತ ಹಾಗೂ ಪ್ರವಾಹಕ್ಕೆ ಸಿಲುಕಿ 14 ಮಂದಿ ಪ್ರಾಣ ಕಳೆದುಕೊಂಡರು. ಈ ಪ್ರಕರಣಗಳ ಪೈಕಿ 11 ಪ್ರಕರಣಗಳಿಗೆ ತಲಾ 5 ಲಕ್ಷಗಳಂತೆ ಪರಿಹಾರ ನೀಡಲಾಗಿದೆ. ಬಾಕಿ 3 ಪ್ರಕರಣಗಳಿಗೆ ಕುಟುಂಬದ ವ್ಯಕ್ತಿಯನ್ನು ಗುರುತಿಸಿ ಪರಿಹಾರ ಪಾವತಿಸಲು ಕ್ರಮ ವಹಿಸಲಾಗುತ್ತಿದೆ. ಸಾವನ್ನಪ್ಪಿರುವ 84 ಜಾನುವಾರುಗಳಿಗೆ 9.97 ಲಕ್ಷ ರೂ. ಪರಿಹಾರವನ್ನು ಪಾವತಿಸಲಾಗಿದೆ.

ಕಳೆದ ಬಾರಿ ಉಂಟಾದ ಅತಿವೃಷ್ಟಿ ಹಾಗೂ ಭೂಕುಸಿತದಿಂದ ಸಾಕಷ್ಟು ತೊಂದರೆ ಸಿಲುಕಿದ್ದ ಪರಿಣಾಮ ಜಿಲ್ಲಾಡಳಿತ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡಿತ್ತು, ಜಿಲ್ಲಾಡಳಿತವು ಏಪ್ರಿಲ್–ಮೇ ತಿಂಗಳಲ್ಲಿಯೇ ತಾಲ್ಲೂಕು ಕಚೇರಿ, ನಗರಸಭೆ ಹಾಗೂ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ದಿನದ 24 ಗಂಟೆಯೂ ಕಂಟ್ರೋಲ್ ರೂಂ ಸ್ಥಾಪಿಸಿ ಮಳೆ ಸಂಬಂಧ ಮಾಹಿತಿ ನೀಡುವುದು ಹಾಗೂ ದೂರುಗಳಿಗೆ ಸ್ಪಂದಿಸುವಲ್ಲಿ ವಾಟ್ಸ್ ಆ್ಯಪ್ ಮೂಲಕ ಕಂಟ್ರೋಲ್ ರೂಂನ್ನು ಪ್ರತ್ಯೇಕವಾಗಿ ಸ್ಥಾಪಿಸಿ, ಮಾಹಿತಿ ನೀಡುತ್ತಿದ್ದುದು ಸಾರ್ವಜನಿಕರಿಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸಾಧ್ಯವಾಯಿತು.



ಪ್ರಕೃತಿ ವಿಕೋಪ ಉಂಟಾಗುವ ಮೊದಲೇ ಸಂತ್ರಸ್ತರನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿತ್ತು. ಹವಾಮಾನ ವರದಿಯನ್ನು ಆಗಾಗ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಸುದ್ದಿ ಮಾಧ್ಯಮಗಳಲ್ಲಿ ಸಾರ್ವಜನಿಕರ ಗಮನಕ್ಕಾಗಿ ಮುಂಚಿತವಾಗಿಯೇ ಮಾಹಿತಿ ನೀಡಿ ಜಾಗೃತಿ ಮೂಡಿಸಲಾಗಿತ್ತು.

ವಿವಿಧ ಅನುಷ್ಠಾನಾಧಿಕಾರಿಗಳಿಗೆ ತುರ್ತು ಪರಿಹಾರ ಕಾಮಗಾರಿಗಳಿಗೆ ರೂ.2.92 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇದುವರೆಗೆ ಒಟ್ಟು 4,146 ಕುಟುಂಬಗಳಿಗೆ ತಲಾ ರೂ. 10 ಸಾವಿರಗಳಂತೆ ಪರಿಹಾರ ಪಾವತಿಸಲಾಗಿದೆ. 929 ಮನೆ ಹಾನಿ ಪ್ರಕರಣಗಳಿಗೆ (15–25%) ಸಂಬಂಧಿಸಿದಂತೆ ತಲಾ ರೂ.25 ಸಾವಿರಗಳಂತೆ ಪರಿಹಾರ ಪಾವತಿಸಲಾಗಿದೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಚಿವರಾದ ಎಸ್.ಸುರೇಶ್ ಕುಮಾರ್, ಕೇಂದ್ರ ಸಚಿವರಾದ ಡಿ.ವಿ.ಸದಾನಂದ ಗೌಡ, ಶಾಸಕರಾದ ಕೆ.ಜಿ.ಬೋಪಯ್ಯ, ಲೋಕಸಭಾ ಸದಸ್ಯರಾದ ಅಪ್ಪಚ್ಚುರಂಜನ್,ಸುನಿಲ್ ಸುಬ್ರಮಣಿ, ವೀಣಾ ಅಚ್ಚಯ್ಯ, ಜಿ.ಪಂ.ಅಧ್ಯಕ್ಷರಾದ ಬಿ.ಎ.ಹರೀಶ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರಕೃತಿ ವಿಕೋಪ ಪ್ರದೇಶಗಳಿಗೆ ಭೇಟಿ ನೀಡಿದ್ದರು.

ಮುಖ್ಯಮಂತ್ರಿ ಅವರು ಕೊಡಗು ಪುನರ್ ನಿರ್ಮಾಣಕ್ಕೆ 536 ಕೋಟಿ ರೂ. ವಿಶೇಷ ಹಣ ಘೋಷಿಸಿದ್ದು, ಈಗಾಗಲೇ 100 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿದ್ದಾರೆ.

## ಚಿಕ್ಕಮಗಳೂರು



ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಗಸ್ಟ್ 2 ರಿಂದ 14 ರವರೆಗೆ ಸುರಿದ ಭಾರೀ ಮಳೆಯು 10 ಮಂದಿಯನ್ನು ಬಲಿ ತೆಗೆದುಕೊಂಡಿತು. ಜಿಲ್ಲಾಡಳಿತ ಅಂದಾಜು ಮಾಡಿರುವ ಪ್ರಕಾರ ರಸ್ತೆ, ಸೇತುವೆ, ಸರ್ಕಾರಿ ಕಟ್ಟಡಗಳು, ಬೆಳೆ ಸೇರಿದಂತೆ ಸುಮಾರು ರೂ.732.28 ಕೋಟಿ ಹಾನಿಯಾಗಿದೆ.

ಮಹಾ ಮಳೆಗೆ ಸಿಲುಕಿದ್ದ ಸುಮಾರು 1,600ಕ್ಕೂ ಹೆಚ್ಚು ಜನರಿಗಾಗಿ ಜಿಲ್ಲಾಡಳಿತ ಪುನರ್ ವಸತಿ ಕೇಂದ್ರಗಳನ್ನು ತೆರೆದು ರಕ್ಷಣೆ ನೀಡಿತು. ಹಾಗೂ ಮಳೆಯಿಂದ ಮನೆ ಸಾಮಾಗ್ರಿಗಳನ್ನು ಕಳೆದುಕೊಂಡಿದ್ದ 910 ಕುಟುಂಬಗಳಿಗೆ ತಲಾ 10 ಸಾವಿರ ರೂಗಳನ್ನು ಈಗಾಗಲೇ ಎನ್.ಡಿ.ಆರ್.ಎಫ್ ಮಾರ್ಗಸೂಚಿಯ ಪ್ರಕಾರ ಜಿಲ್ಲಾಡಳಿತ ಪಾವತಿಸಿದೆ.

ಮಲೆನಾಡು ಪ್ರದೇಶಗಳಲ್ಲಿ ಧರೆಗುರುಳಿದ್ದ ವಿದ್ಯುತ್ ಕಂಬಗಳನ್ನು ತೆರವು ಮಾಡಿ ಹೊಸ ಕಂಬಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಮೂಲಕ ಹೆಚ್ಚಿನ ಅವಘಡ ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಯಿತು. ಹಾನಿಗೊಳಗಾಗಿದ್ದ ರಸ್ತೆ, ಸೇತುವೆಗಳ ದುರಸ್ತಿ ಕಾರ್ಯ ಕೈಗೊಂಡು ಸುಗಮ ಸಂಚಾರಕ್ಕೆ ಜಿಲ್ಲಾಡಳಿತ ಅನುವು ಮಾಡಿಕೊಟ್ಟಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಆಗಸ್ಟ್ 27 ರಂದು ಅತಿವೃಷ್ಟಿಯಿಂದ ಹಾನಿಗೊಳಗಾದ ಮೂಡಿಗೆರೆ ತಾಲ್ಲೂಕಿನ ಮಲೇಮನೆಗೆ ಆಗಮಿಸಿ ಅಲ್ಲಿನ ಜನರ ಅಹವಾಲುಗಳನ್ನು ಆಲಿಸಿ ಸರ್ಕಾರದಿಂದ ಪರಿಹಾರ ನೀಡಲಾಗುವುದೆಂದು ಸಂತ್ರಸ್ತರಿಗೆ ಅಭಯ ನೀಡಿದರು.



ಆಗಸ್ಟ್ ಕೊನೆಯ ವಾರದಲ್ಲಿ, ಪ್ರವಾಹ ತಗ್ಗಿದ ಪರಿಣಾಮ ಪುನರ್‌ವಸತಿ ಕೇಂದ್ರಗಳಿಂದ ತಮ್ಮ ಮನೆಗಳಿಗೆ ಮರಳಿದ ಸಂತ್ರಸ್ತರು ಇನ್ನೇನು ಹೊಸ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವಷ್ಟರಲ್ಲೇ ಸೆಪ್ಟೆಂಬರ್ 8 ರಂದು ಮಲಪ್ರಭಾ ಹಾಗೂ ಘಟಪ್ರಭಾ ನದಿ ಪಾತ್ರದಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದ್ದರಿಂದ ಒಂದೇ ತಿಂಗಳಲ್ಲಿ ಮತ್ತೆ ಪ್ರವಾಹದ ಭೀತಿಯನ್ನು ಎದುರಿಸುವಂತಾಯಿತು.

## ಹಾಸನ



ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಹಾನಿ ಸಂಭವಿಸಿದ್ದು, ಎಲ್ಲಾ ಸಂತ್ರಸ್ತರ ನೆರವಿಗೆ ಸಕಾಲದಲ್ಲಿ ಸ್ಪಂದಿಸಿದ ಜಿಲ್ಲಾಡಳಿತವು ಪ್ರಶಂಸೆಗೆ ಪಾತ್ರವಾಗಿದೆ. ಕಳೆದ ವರ್ಷ ಕೊಡಗು ಮತ್ತು ನೆರೆಯ ರಾಜ್ಯ ಕೇರಳದಲ್ಲಿ ಸಂಭವಿಸಿದ ಭೀಕರ ಪ್ರವಾಹ ಮತ್ತು ಅಲ್ಲಿನ ಜನ ಜೀವನ ಪರಿಸ್ಥಿತಿಯ ಬಗ್ಗೆ ತಿಳಿದಿದ್ದರಿಂದ ಹಾಗೂ ಜಿಲ್ಲಾಧಿಕಾರಿಯವರ ಮುನ್ನೆಚ್ಚರಿಕೆಯ ಕ್ರಮಗಳು, ಸಮಯೋಚಿತ ನಿರ್ಧಾರಗಳಿಂದ, ಅಧಿಕಾರಿಗಳ ಸಹಭಾಗಿತ್ವದ ಪರಿಣಾಮ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿಯನ್ನ ಸಮರ್ಥವಾಗಿ ಎದುರಿಸಲು ಸಾಧ್ಯವಾಯಿತು.

ಜಿಲ್ಲೆಯ ನೂರಾರು ಮನೆಗಳಿಗೆ ನೀರು ನುಗ್ಗಿದ್ದರಿಂದ ಸಂತ್ರಸ್ತರ ನೆರವಿಗೆ ಜಿಲ್ಲೆಯಲ್ಲಿ 12 ಆಶ್ರಯ ಕೇಂದ್ರಗಳನ್ನು ತೆರೆಯಲಾಗಿತ್ತು. ಈ ಆಶ್ರಯ ಕೇಂದ್ರಗಳಲ್ಲಿ ಒಟ್ಟು 2670 ಜನರು ಆಶ್ರಯ ಪಡೆದಿದ್ದರು. ಅದಕ್ಕಾಗಿ ಜಿಲ್ಲಾಡಳಿತವು 8 ಲಕ್ಷದ 60 ಸಾವಿರ ಹಣವನ್ನು ವಿನಿಯೋಗ ಮಾಡಿತ್ತು. 1543 ಕುಟುಂಬಗಳಿಗೆ ತಲಾ 10 ಸಾವಿರ ರೂಗಳಂತೆ ತಾತ್ಕಾಲಿಕ ಪರಿಹಾರ ಹಣ ನೀಡಲಾಗಿದೆ. ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ನಾಲ್ವರು ಜೀವ ಕಳೆದುಕೊಂಡಿದ್ದು ಅವರ ಕುಟುಂಬಗಳಿಗೆ ತಲಾ 5 ಲಕ್ಷ ರೂಗಳನ್ನು ಮತ್ತು ಸಾವನ್ನಪ್ಪಿದ 6 ಜಾನುವಾರುಗಳಿಗೆ ಪರಿಹಾರ ಹಣ ನೀಡಲಾಗಿದೆ. ಎಲ್ಲಾ ತಾಲ್ಲೂಕುಗಳಲ್ಲೂ ಗೋಶಾಲೆಗಳನ್ನು ತೆರೆಯುವ ಮೂಲಕ ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಮಾಡುವ ಜೊತೆಗೆ ಆಶ್ರಯ ಕೇಂದ್ರಗಳಲ್ಲಿ ಸಂತ್ರಸ್ತರಿಗೆ ಆಹಾರ, ಶುದ್ಧ ಕುಡಿಯುವ ನೀರು ಮತ್ತು ಚುಚ್ಚುಮದ್ದು ಸೌಲಭ್ಯವನ್ನು ಒದಗಿಸಲಾಗಿತ್ತು.

ಮಳೆಯಿಂದ ಜಿಲ್ಲೆಯಲ್ಲಿ ಒಟ್ಟು 2337 ಮನೆಗಳು ಹಾನಿಗೊಳಗಾಗಿದ್ದು, ಅದರಲ್ಲಿ 264 ಮನೆಗಳು ಸಂಪೂರ್ಣವಾಗಿ ಹಾನಿಯಾಗಿವೆ. ಹಾನಿಗೊಳಗಾದ ಮನೆಗಳಿಗೆ ಪರಿಹಾರ ಸೌಲಭ್ಯ ಕಲ್ಪಿಸಲು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಲಾಗುತ್ತಿದೆ.

ರೈತರ ಸಾವಿರಾರು ಎಕರೆಯ ಬೆಳೆಯು ಹಾನಿಗೊಳಗಾಗಿದ್ದು, ಪರಿಹಾರಕ್ಕಾಗಿ ಈಗಾಗಲೇ 7000 ಅರ್ಜಿಗಳು ನೊಂದಣಿಯಾಗಿದೆ. ಮತ್ತಷ್ಟು ರೈತರು ಅರ್ಜಿಗಳನ್ನು ನೊಂದಾಯಿಸುತ್ತಿದ್ದಾರೆ.

**ಗ್ರಾಮಗಳ ಸ್ಥಳಾಂತರಕ್ಕೆ ಸರ್ಕಾರ ಸಿದ್ಧ:**

ಮಲಪ್ರಭಾ ನದಿ ದಂಡೆಯ ತಡೆಗೋಡೆ ಒಡೆದ ಪರಿಣಾಮ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ದೊಡ್ಡ ಹಂಪಿಹೊಳಿ ಹಾಗೂ ಚಿಕ್ಕ ಹಂಪಿಹೊಳಿ ಗ್ರಾಮಗಳು ಸಂಪೂರ್ಣವಾಗಿ ಮುಳುಗಡೆಯಾದವು. ಹಾಗಾಗಿ ಎರಡನೇ ಬಾರಿಗೆ ಬೆಳಗಾವಿಗೆ ಭೇಟಿ ನೀಡಿ ಮುಖ್ಯಮಂತ್ರಿಗಳು ಮಲಪ್ರಭಾ ನದಿ ದಂಡೆಯ ತಡೆಗೋಡೆ ನಿರ್ಮಾಣಕ್ಕೆ ಕೂಡಲೇ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಗ್ರಾಮಸ್ಥರು ಲಿಖಿತವಾಗಿ ಒಪ್ಪಿಗೆ ನೀಡಿದರೆ ಎರಡೂ ಗ್ರಾಮಗಳನ್ನು ಎತ್ತರದ ಪ್ರದೇಶಕ್ಕೆ ಸಂಪೂರ್ಣವಾಗಿ ಸ್ಥಳಾಂತರಿಸಿ ನವ ಗ್ರಾಮಗಳಲ್ಲಿ ಶಾಲೆ, ಆಸ್ಪತ್ರೆ ಸೇರಿದಂತೆ ಎಲ್ಲಾ ಬಗೆಯ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಸಿದ್ಧವಿದೆ ಎಂದು ಅವರು ಗ್ರಾಮಸ್ಥರಿಗೆ ಭರವಸೆ ನೀಡಿದ್ದಾರೆ. ಈ ಗ್ರಾಮಗಳಲ್ಲದೆ ಉಳಿದ ಜಿಲ್ಲೆಗಳಲ್ಲಿ ಪದೇ ಪದೇ ನೆರೆ ಹಾವಳಿಯಿಂದ ಮುಳುಗಡೆಯಾಗುತ್ತಿರುವ ಗ್ರಾಮಗಳೆಲ್ಲವನ್ನು ಗ್ರಾಮಸ್ಥರು ಒಪ್ಪಿಗೆ ನೀಡಿದರೆ ಸ್ಥಳಾಂತರಿಸಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ.

**ಸರ್ಕಾರದಿಂದ ಸ್ವಚ್ಛತೆಗೆ ಮೊದಲ ಆದ್ಯತೆ:**

ಒಟ್ಟಿನಲ್ಲಿ ಸಕಾಲದಲ್ಲಿ ಸಂತ್ರಸ್ತರಿಗೆ ನೆರವಾದ ಸರ್ಕಾರ, ಪ್ರವಾಹ ಇಳಿದ ನಂತರ ಕೈಗೊಳ್ಳಬೇಕಾದ ಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ. ಹಾಗಾಗಿ ಪ್ರವಾಹ ಪೀಡಿತ ಗ್ರಾಮಗಳ ಸ್ವಚ್ಛತೆಗೆ ಸರ್ಕಾರ ಮೊದಲ ಆದ್ಯತೆಯನ್ನು ನೀಡಿದೆ. ಪ್ರವಾಹ ಇಳಿದ ಪ್ರದೇಶಗಳಲ್ಲಿ ನೀರು ನಿಂತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳು ಇರುವುದರಿಂದ ಆಯಾ ಗ್ರಾಮ ಪಂಚಾಯತ್, ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದಾರೆ. ಮಲೇರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾ, ವಾಂತಿಬೇಧಿ ಮುಂತಾದ ರೋಗಗಳು ಉಲ್ಬಣಿಸುವ ಸಾಧ್ಯತೆ ಇರುವುದರಿಂದ ಬ್ಲೀಚಿಂಗ್ ಪೌಡರ್ ಹಾಗೂ ಫಾಗಿಂಗ್ ಮಾಡಿಸಲಾಗುತ್ತಿದೆ. ಹಾಗೂ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಅಲ್ಲದೆ ಜನರಿಗೆ ಕಾದಾರಿಸಿದ ನೀರನ್ನೇ ಕುಡಿಯುವಂತೆ ಸೂಚಿಸಲಾಗುತ್ತಿದೆ.







downloaded from: www.kpscvaani.com



**ಸರ್ಕಾರದಿಂದ ಗೋ ಶಾಲೆಗಳ ಸ್ಥಾಪನೆ:**

ಪ್ರವಾಹದಿಂದ ಜನಸಾಮಾನ್ಯರು ಮಾತ್ರವಲ್ಲ, ಜಾನುವಾರುಗಳು ಸಂಕಷ್ಟವನ್ನು ಎದುರಿಸಿದವು. ಪ್ರವಾಹದ ಪರಿಣಾಮ ಜಾನುವಾರುಗಳಿಗೂ ಮೇವು ಇಲ್ಲದಂತಾಗಿದೆ. ಹಾಗಾಗಿ ರೈತರ ಜಾನುವಾರುಗಳಿಗೂ ರಕ್ಷಣೆಯನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಗೋ ಶಾಲೆಗಳನ್ನು ಸ್ಥಾಪಿಸಿ, ಮೇವನ್ನು ಒದಗಿಸುತ್ತಿದೆ.

ದಾಖಲೆಗಳನ್ನು ಕೇಳದಂತೆ ಸೂಚನೆ:

ಪ್ರವಾಹದಿಂದ ಮನೆ-ಮಠ, ಆಸ್ತಿ-ಪಾಸ್ತಿಯನ್ನು ಕಳೆದುಕೊಂಡಿರುವ ಜೊತೆಗೆ ಜನರು ತಮ್ಮ ಗುರುತಿನ ದಾಖಲೆಗಳನ್ನು ಕಳೆದುಕೊಂಡಿದ್ದಾರೆ. ಹಾಗಾಗಿ ಪರಿಹಾರ ವಿತರಣೆ ಸಂದರ್ಭದಲ್ಲಿ ಸಂತ್ರಸ್ತರಿಂದ ಮತ್ತು ಶಾಲಾ ಮಕ್ಕಳಿಂದ ಯಾವುದೇ ರೀತಿಯ ಗುರುತಿನ ದಾಖಲೆಯನ್ನು ಒದಗಿಸುವಂತೆ ಕೇಳಬಾರದೆಂದು ಸರ್ಕಾರವು ವಿವಿಧ ಇಲಾಖೆಗಳಿಗೆ ಸೂಚನೆ ನೀಡಿದೆ. ಸಂತ್ರಸ್ತರು ಕಳೆದುಕೊಂಡಿರುವ ಗುರುತಿನ ಚೀಟಿಗಳನ್ನು ಆದಷ್ಟು ಬೇಗ ಮಾಡಿಸಿಕೊಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಈಗಾಗಲೇ ಜಿಲ್ಲಾಡಳಿತ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿದೆ. ನೆರೆ ಪೀಡಿತ ಪ್ರದೇಶಗಳ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ಮತ್ತೊಂದು ಜೊತೆ ಸಮವಸ್ತ್ರಗಳನ್ನು ವಿತರಿಸುವಂತೆ ಕೂಡ ಸರ್ಕಾರ ಆದೇಶಿಸಿದೆ.

**ಸಂತ್ರಸ್ತರಿಗೆ ಉದ್ಯೋಗ:**

ಪ್ರವಾಹದಿಂದ ಎಲ್ಲವನ್ನೂ ಕಳೆದುಕೊಂಡು ಮುಂದೆ ಜೀವನ ನಡೆಸುವುದು ಹೇಗೆ ಎಂದು ಕಂಗಾಲಾಗಿರುವ ಸಂತ್ರಸ್ತರಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ನೀಡಿ ಕಡಿಮೆ ಅವಧಿಯಲ್ಲಿ ಕೂಲಿ ಪಾವತಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ.ಎಸ್. ಈಶ್ವರಪ್ಪ ಅವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ. ಸರ್ಕಾರದ ಸೂಚನೆಯಂತೆ ಜಿಲ್ಲಾಡಳಿತವು ಸಂತ್ರಸ್ತರಿಗೆ ಉದ್ಯೋಗವನ್ನು ಒದಗಿಸಿಕೊಡುವ ಮೂಲಕ ಅವರು ಮತ್ತೆ ಜೀವನವನ್ನು ಕಟ್ಟಿಕೊಳ್ಳಲು ನೆರವಾಗುತ್ತಿದೆ.

ಒಟ್ಟಿನಲ್ಲಿ ನೆರ ಸಂದರ್ಭದಲ್ಲಿ ಸರ್ಕಾರವು ಜನರ ರಕ್ಷಣೆ ಮತ್ತು ಸಂತ್ರಸ್ತರಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ಎಲ್ಲಿಯೂ ಲೋಪವಾಗದಂತೆ ಬಹಳ ಮುತುವರ್ಜಿಯಿಂದ ಕಾರ್ಯನಿರ್ವಹಿಸಿರುವುದು ಜನರ ಶ್ಲಾಘನೆಗೆ ಪಾತ್ರವಾಗಿದೆ. ಅಲ್ಲದೆ ಪದೇ ಪದೇ ನೆರೆಗೆ ಒಳಗಾಗುತ್ತಿರುವ ಗ್ರಾಮಗಳನ್ನು ಸ್ಥಳಾಂತರಿಸಿ ಅವರಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಮೂಲಕ ಶಾಶ್ವತ ಪರಿಹಾರವನ್ನು ಕೈಗೊಳ್ಳಲು ಸರ್ಕಾರ ಸಿದ್ಧವಾಗಿದೆ. ಅದಕ್ಕೆ ಸ್ಥಳೀಯ ಜನರ ಒಪ್ಪಿಗೆ ಬೇಕಾಗುವುದರಿಂದ ಸರ್ಕಾರವು ಸ್ಥಳೀಯ ಜನರೊಂದಿಗೆ ಈ ಕುರಿತು ಸಮಾಲೋಚನೆಯನ್ನು ನಡೆಸಿದೆ. ■





# ಮಹಾರಾಷ್ಟ್ರಕ್ಕೆ ಭೇಟಿ

## ಮಹತ್ವದ ತೀರ್ಮಾನಕ್ಕೆ ಮುಂದಾದ ಮುಖ್ಯಮಂತ್ರಿಗಳು

**ಬೆ**ಳಗಾವಿ ಜಿಲ್ಲೆಯ ಭೀಮಾಗಢದಲ್ಲಿ ಹುಟ್ಟಿ, ಕರ್ನಾಟಕದಲ್ಲಿ 4.35 ಕಿ.ಮೀ ನಷ್ಟು ಮತ್ತು 52 ಕಿ.ಮೀ ನಷ್ಟು ದೂರ ಗೋವಾದಲ್ಲಿ ಹರಿದು ಅರಬೀಸಮುದ್ರವನ್ನು ಸೇರುವ ಮಹದಾಯಿ ನದಿ ನೀರು ಹಂಚಿಕೆ ವಿವಾದವು ಮೂರು ದಶಕಗಳಿಂದಲೂ ನಡೆದು ಬಂದಿದ್ದು, ಕುಡಿಯುವ ನೀರಿಗಾಗಿ ರಾಜ್ಯದಲ್ಲಿ ದಶಗಳಿಂದ ಮಾರ್ದನಿಸುತ್ತಿದ್ದ ಉತ್ತರ ಕರ್ನಾಟಕದ ಮಹದಾಯಿ ಹೋರಾಟಕ್ಕೆ ಕೊನೆಗೂ ನ್ಯಾಯಸಿಕ್ಕಂತಾಗಿದೆ.

ಕಳಸಾ ಮತ್ತು ಬಂಡೂರಿ ನಾಲೆಗಳ ಮೂಲಕ ಮಹದಾಯಿ ನದಿಯಿಂದ ಮಲಪ್ರಭಾ ಕಣಿವೆಗೆ ನೀರು ಹರಿಸಬಹುದೆಂದು ನ್ಯಾಯಮೂರ್ತಿ ಜೆ.ಎಂ.ಪಾಂಚಾಲ್ ನೇತೃತ್ವದ ತ್ರಿಸದಸ್ಯ ನ್ಯಾಯಾಧಿಕರಣ ಐತಿಹಾಸಿಕ ತೀರ್ಪನ್ನು ನೀಡಿದೆ. ತೀರ್ಪಿನಲ್ಲಿ ಬಂಡೂರಿ ನಾಲೆಯಿಂದ 2.18 ಟಿಎಂಸಿ, ಕಳಸಾ ನಾಲೆಯಿಂದ 1.72 ಟಿಎಂಸಿ ನೀರನ್ನು ಮಲಪ್ರಭಾಕ್ಕೆ ತಿರುಗಿಸಲು ಅವಕಾಶ ನೀಡಲಾಗಿದೆ. ಇದು ಹುಬ್ಬಳ್ಳಿ-ಧಾರವಾಡ, ಗದಗ ಜಿಲ್ಲೆಯ ಸುತ್ತಮುತ್ತಲಿನ ಭಾಗದ ಜನರಿಗೆ ಕುಡಿಯುವ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅವಕಾಶವಿದೆ.

ರಾಜ್ಯದ ಯಾವುದೇ ಭಾಗದಲ್ಲಿ ಒಂದು ನದಿಯಿಂದ ಮತ್ತೊಂದು ನದಿಗೆ ನೀರು ತಿರುಗಿಸುವ ಯೋಜನೆಗೆ ಇದುವರೆಗೆ ಅನುಮತಿ ಸಿಕ್ಕಿರಲಿಲ್ಲ. ಹಾಗಾಗಿ ಇದೊಂದು ಐತಿಹಾಸಿಕ ತೀರ್ಪಾಗಿದೆ. ಈ ತೀರ್ಪಿನಿಂದ ಮಹದಾಯಿ ಉಪಕಾಲುವೆಗಳಾದ ಕಳಸಾ, ಬಂಡೂರಿ ಜೋಡಣೆಯಿಂದ ಉತ್ತರ ಕರ್ನಾಟಕದ 12 ತಾಲೂಕುಗಳ ಜನರ ಕುಡಿಯುವ ನೀರಿನ ಸಮಸ್ಯೆಗೆ ತೆರೆ ಬೀಳಲಿದೆ. ಹಾಗೆಯೇ ಜಲ ವಿದ್ಯುತ್ ಯೋಜನೆಗೆ 8.02 ಟಿಎಂಸಿ ನೀರು ಹಂಚಿಕೆ ಆಗಿರುವುದರಿಂದ



downloaded from: www.kpscvaani.com



> ರಾಜ್ಯದ ಯಾವುದೇ ಭಾಗದಲ್ಲಿ ಒಂದು ನದಿಯಿಂದ ಮತ್ತೊಂದು ನದಿಗೆ ನೀರು ತಿರುಗಿಸುವ ಯೋಜನೆಗೆ ಇದುವರೆಗೆ ಅನುಮತಿ ಸಿಕ್ಕಿರಲಿಲ್ಲ. ಹಾಗಾಗಿ ಇದೊಂದು ಐತಿಹಾಸಿಕ ತೀರ್ಪಾಗಿದೆ. ಈ ತೀರ್ಪಿನಿಂದ ಮಹದಾಯಿ ಉಪಕಾಲುವೆಗಳಾದ ಕಳಸಾ, ಬಂಡೂರಿ ಜೋಡಣೆಯಿಂದ ಉತ್ತರ ಕರ್ನಾಟಕದ 12 ತಾಲೂಕುಗಳ ಜನರ ಕುಡಿಯುವ ನೀರಿನ ಸಮಸ್ಯೆಗೆ ತೆರೆ ಬೀಳಲಿದೆ.

ಅಣೆಕಟ್ಟು ನಿರ್ಮಾಣಕ್ಕೆ ಒಪ್ಪಿಗೆ ಹಾಗೂ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ.

ಸಮುದ್ರಕ್ಕೆ ವ್ಯರ್ಥವಾಗಿ ಸೇರುತ್ತಿದ್ದ ನದಿ ನೀರಿನಲ್ಲಿ 7.56 ಟಿಎಂಸಿ ನೀರನ್ನು ಕುಡಿಯುವ ಉದ್ದೇಶಕ್ಕೆ ಕರ್ನಾಟಕಕ್ಕೆ ನೀಡಬೇಕೆಂಬುದು ರಾಜ್ಯದ ಬೇಡಿಕೆಯಾಗಿತ್ತು, ಆದರೆ ಜಲ ವಿದ್ಯುತ್‌ಗೆ ಸೇರಿದಂತೆ ಕರ್ನಾಟಕಕ್ಕೆ 13.42, ಟಿಎಂಸಿ, ಗೋವಾ ರಾಜ್ಯಕ್ಕೆ 24 ಟಿಎಂಸಿ ಮತ್ತು ಮಹಾರಾಷ್ಟ್ರಕ್ಕೆ 1.30 ಟಿಎಂಸಿ ನೀರನ್ನು ನ್ಯಾಯಾಧಿಕರಣ ಹಂಚಿಕೆ ಮಾಡಿದೆ. ನ್ಯಾಯಾಧಿಕರಣ ತೀರ್ಪಿಗೆ ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆ ಹೊರಡಿಸಿದರೆ ಆಯಾ ರಾಜ್ಯವು ನ್ಯಾಯಾಧಿಕರಣ ಹಂಚಿಕೆ ಮಾಡಿರುವಷ್ಟು ನೀರನ್ನು ಬಳಸಿಕೊಳ್ಳಬಹುದು.

ಹಾಗಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ನ್ಯಾಯಾಧಿಕರಣ ನೀರು ಹಂಚಿಕೆ ಮಾಡಿ ನೀಡಿರುವ ತೀರ್ಪಿಗೆ ಕೇಂದ್ರದಿಂದ ಗೆಜೆಟ್ ನೋಟಿಫಿಕೇಷನ್ ಹೊರಡಿಸುವಂತೆ ಒತ್ತಡ ತರುವ ಸಲುವಾಗಿ ಇತ್ತೀಚೆಗೆ ಮಹಾರಾಷ್ಟ್ರಕ್ಕೆ ಭೇಟಿ ನೀಡಿ ಗೋವಾ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ನಂತರ ಶೀಘ್ರದಲ್ಲಿ ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ನಿರ್ಧರಿಸಿದ್ದಾರೆ.

ಅಲ್ಲದೆ ಕೃಷ್ಣಾ ನ್ಯಾಯಾಧಿಕರಣದ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಸುಪ್ರೀಂ ಕೋರ್ಟ್‌ನಲ್ಲಿ ಜಂಟಿಯಾಗಿ ಅಫಿಡವಿಟ್ ಸಲ್ಲಿಸಿ ನೀರು ಹಂಚಿಕೆ ಆದೇಶವನ್ನು ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ಕೂಡ ನಿರ್ಧರಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಕೂಡ ಚರ್ಚೆ ನಡೆಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಉತ್ತರ ಕರ್ನಾಟಕದ ಪ್ರವಾಹ ಪರಿಸ್ಥಿತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂಗಾರು ಪ್ರಾರಂಭವಾದ ಕೂಡಲೇ ಕೊಯ್ನಾ ಜಲಾಶಯದಿಂದ ಹಂತ ಹಂತವಾಗಿ ನೀರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ. ಹೀಗೆ ಮಾಡುವುದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರವಾಹ ಆಗುವುದನ್ನು ತಡೆಗಟ್ಟಬಹುದೆಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಅವರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಅಲ್ಲದೆ ಈ ಪ್ರಕ್ರಿಯೆಯ ಮೇಲ್ವಿಚಾರಣೆಗೆ ಉನ್ನತ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲು ಕೂಡ ಉಭಯ ರಾಜ್ಯಗಳು ತೀರ್ಮಾನಿಸಿವೆ. ಇದರಿಂದ ಇನ್ನು ಮುಂದೆ ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳು ಪ್ರವಾಹಕ್ಕೆ ಒಳಗಾಗುವುದು ತಪ್ಪುವ ಸಾಧ್ಯತೆಗಳಿರುತ್ತದೆ.

ಹಾಗೆಯೇ ಇತ್ತೀಚೆಗೆ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸಂಭವಿಸಿದ ಪ್ರವಾಹ ಪರಿಸ್ಥಿತಿಯ ನಿರ್ವಹಣೆ ಮತ್ತು ಪರಿಹಾರ ಕಾರ್ಯಗಳಿಗೆ ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಅನುದಾನ ಒದಗಿಸುವಂತೆಯೂ ಎರಡು ರಾಜ್ಯಗಳಿಂದ ಜಂಟಿಯಾಗಿ ಮನವಿ ಸಲ್ಲಿಸಲು ಕೂಡ ತೀರ್ಮಾನಿಸಲಾಯಿತು.

ಮುಖ್ಯಮಂತ್ರಿ ಅವರೊಂದಿಗೆ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಗೃಹ ಸಚಿವರಾದ ಬಸವರಾಜ್ ಬೊಮ್ಮಾಯಿ ಅವರು ತೆರಳಿದ್ದರು. ಈ ಸಭೆಯಲ್ಲಿ ಮಹಾರಾಷ್ಟ್ರ ರಾಜ್ಯದ ನೀರಾವರಿ ಸಚಿವರಾದ ಗಿರೀಶ ದತ್ತಾತ್ರೇಯ ಮಹಾಜನ್ ಮತ್ತು ಇಂಧನ ಸಚಿವರಾದ ಚಂದ್ರಶೇಖರ್ ಕಿಶನ್ ರಾವ್ ಅವರು ಉಪಸ್ಥಿತರಿದ್ದರು.

ಒಟ್ಟಿನಲ್ಲಿ ಮಹಾರಾಷ್ಟ್ರಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಭೇಟಿ ನೀಡಿದ್ದರಿಂದ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಇದು ರಾಜ್ಯಕ್ಕೆ ಬಹಳಷ್ಟು ಪ್ರಯೋಜನವನ್ನು ಉಂಟು ಮಾಡಲಿದೆ. ■





# ರಾಜ್ಯದಲ್ಲೂ ಫಿಟ್ ಇಂಡಿಯಾ ಕಾರ್ಯಕ್ರಮಕ್ಕೆ ಚಾಲನೆ

ಕ್ರೀಡಾ ದಿನದ ಅಂಗವಾಗಿ ಆಗಸ್ಟ್ 29 ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಧಾನಸೌಧದ ಮುಂಭಾಗದಲ್ಲಿ ರಾಷ್ಟ್ರೀಯ ಕ್ರೀಡೆಯಾದ ಹಾಕಿಯನ್ನು ಸಾಂಕೇತಿಕವಾಗಿ ಆಡುವ ಮೂಲಕ ರಾಜ್ಯದಲ್ಲೂ **"ಸದೃಢ ಭಾರತ" (ಫಿಟ್ ಇಂಡಿಯಾ)** ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ತಂತ್ರಜ್ಞಾನ ಯುಗದಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗಿ, ಮಕ್ಕಳಲ್ಲಿ ಮಧುಮೇಹ ಮತ್ತು 30 ರಿಂದ 35 ವರ್ಷದವರಿಗೆ ಹೃದಯಾಘಾತವಾಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಹಾಗಾಗಿ ಶೂನ್ಯ ಬಂಡವಾಳದಲ್ಲಿ ಜನತೆಯ ಜೀವನ ಶೈಲಿ ಸುಧಾರಿಸಿ 'ಫಿಟ್ ಇಂಡಿಯಾ'ವನ್ನು ಆಂದೋಲನವನ್ನಾಗಿಸಬೇಕು ಎಂಬುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹಾತ್ವಾಕಾಂಕ್ಷೆ ಕಾರ್ಯಕ್ರಮವನ್ನು ರಾಜ್ಯದಲ್ಲೂ ಜಾರಿಗೊಳಿಸಲಾಗಿದೆ.



downloaded from: www.kpscvaani.com

ರಾಜ್ಯದಲ್ಲಿ ಕ್ರೀಡೆಯ ಉತ್ತೇಜನಕ್ಕಾಗಿ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಅಭಿಯಾನವಾದ ಫಿಟ್ ಇಂಡಿಯಾವನ್ನು ಎಲ್ಲರೂ ಯಶಸ್ವಿಗೊಳಿಸುವ ಮೂಲಕ ಪ್ರತಿಯೊಬ್ಬ ನಾಗರಿಕರು ಆರೋಗ್ಯವಂತರಾಗಬೇಕು.

–ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು

ಕ್ರೀಡಾಪಟುಗಳನ್ನು ಹೊರತು ಪಡಿಸಿ ದೇಶದ ಪ್ರತಿಯೊಬ್ಬ ನಾಗರಿಕರೂ ಆರೋಗ್ಯವಂತರಾಗಲು ಉತ್ತಮ ದೈಹಿಕ ವ್ಯಾಯಾಮ ಅಗತ್ಯ ಎಂಬುದನ್ನು ಸಾರುವ 'ಫಿಟ್ ಇಂಡಿಯಾ' ಅಭಿಯಾನಕ್ಕೆ ಆಗಸ್ಟ್ 29 ರಂದು ದೇಶದಾದ್ಯಂತ ಚಾಲನೆ ನೀಡಲಾಯಿತು.

ಹಾಕಿ ಕ್ರೀಡೆಯ ಮಾಂತ್ರಿಕ ಆಟಗಾರ ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನವಾದ ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ಹಬ್ಬವಾಗಿ ಆಚರಿಸುವ ಮೂಲಕ, ಇದೇ ಮೊದಲ ಬಾರಿಗೆ ಕ್ರೀಡಾ ದಿನವನ್ನು ರಾಜ್ಯದಲ್ಲಿ ಆಚರಿಸಲಾಯಿತು. ಮೇಜರ್ ಧ್ಯಾನ್‌ಚಂದ್ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ರಾಜ್ಯ ಸರ್ಕಾರ ಕ್ರೀಡಾಪಟುಗಳಿಗೆ ಅಗತ್ಯವಿರುವ ಆರ್ಥಿಕ ನೆರವು ನೀಡುವ ಮೂಲಕ ಅವರು ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಲು ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ಕ್ರೀಡಾಪಟುಗಳಿಗೆ ಭರವಸೆ ನೀಡಿದರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾದ ಫಿಟ್ ಇಂಡಿಯಾದಡಿಯಲ್ಲಿ ರಾಜ್ಯದಲ್ಲಿ ಕ್ರೀಡೆಯ ಉತ್ತೇಜನಕ್ಕಾಗಿ ಸರ್ಕಾರವು ಹಲವು ಕಾರ್ಯಗಳನ್ನು ಜಾರಿಗೊಳಿಸಲಿದೆ ಎಂದ ಮುಖ್ಯಮಂತ್ರಿ ಅವರು ವಿಶ್ವ ಪ್ಯಾರಾ



ಬ್ಯಾಡ್ಮಿಂಟನ್‌ನಲ್ಲಿ ಚಿನ್ನದ ಪದಕ ಗಳಿಸಿದ ಮಾನಸಾ ಜೋಶಿ ಹಾಗೂ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್ ಆದ ಪಿ.ವಿ.ಸಿಂಧು ಅವರು ವಿಶ್ವ ಮಟ್ಟದಲ್ಲಿ ಅಭೂತಪೂರ್ವ ಸಾಧನೆಗೈದು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರ ಸಾಧನೆ ಮತ್ತು ಪರಿಶ್ರಮ ಇತರರಿಗೆ ಸ್ಫೂರ್ತಿಯಾಗಲಿದೆ ಎಂದರು.

"ಸದೃಢ ಭಾರತ" (ಫಿಟ್ ಇಂಡಿಯಾ)ಕ್ಕೆ ಚಾಲನೆ ನಿಡಿದ ನಂತರ ಮುಖ್ಯಮಂತ್ರಿ ಅವರು ಸಾಂಕೇತಿಕವಾಗಿ ಹಾಕಿ ಆಡುವ ಮೂಲಕ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿದರೆ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಸಿ.ಟಿ.ರವಿ ಅವರು ರಾಕ್ ಕ್ಲೈಂಬಿಂಗ್ ಅನ್ನು ಸರಾಗವಾಗಿ ಹತ್ತಿ ಕ್ರೀಡಾ ಸಾಹಸವನ್ನು ಪ್ರದರ್ಶಿಸಿ ನೆರೆದಿದ್ದವರು ಹುಬ್ಬೇರುವಂತೆ ಮಾಡಿದರು. ಆ ನಂತರ ಆಯೋಜಿಸಲಾಗಿದ್ದ ಯೋಗ, ಜುಡೋ, ಬಾಕ್ಸಿಂಗ್, ಅಥ್ಲೆಟಿಕ್ಸ್ ಪ್ರದರ್ಶಿಸಿದ ಕ್ರೀಡಾಪಟುಗಳ ಸಾಹಸವನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು ಕ್ರೀಡಾಪಟುಗಳ ಸಾಮರ್ಥ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಅವರ ಮುಂದಿನ ಭವಿಷ್ಯಕ್ಕೆ ಹಾರೈಸಿದರು.

ಈ ಸಂದರ್ಭದಲ್ಲಿ ಕ್ರೀಡಾಪಟುಗಳಾದ ಪ್ರಕಾಶ್ ನಂಜಪ್ಪ, ಸಲ್ಮಾನ್ ಪಾಷಾ, ಅರ್ಚನಾ ಕಾಮತ್, ಸಚಿವರಾದ ಬಸವರಾಜ್ ಬೊಮ್ಮಾಯಿ, ಆರ್.ಅಶೋಕ್, ಶಶಿಕಲಾ ಜೊಲ್ಲೆ ಉಪಸ್ಥಿತರಿದ್ದು, ಯುವ ಕ್ರೀಡಾಪಟುಗಳಿಗೆ ಉತ್ಸಾಹ ತುಂಬಿದರು.

> "ಶೂನ್ಯ ಬಂಡವಾಳದಲ್ಲಿ ದೈಹಿಕ ವ್ಯಾಯಾಮದ ಮೂಲಕ ದೇಶದ ಪ್ರತಿಯೊಬ್ಬ ನಾಗರಿಕರ ಜೀವನಶೈಲಿಯನ್ನು ಸುಧಾರಿಸಬೇಕೆಂಬ ಅಭಿಯಾನವೇ "ಫಿಟ್ ಇಂಡಿಯಾ"."



downloaded from: www.kpscvaani.com

ಮೈಸೂರು ದಸರಾ

# ಮಹಾವೈಭವದ ಮೈಸೂರು ದಸರಾ


ಬನ್ನೂರು ಕೆ ರಾಜು

**"ಮೈಸೂರು ದಸರಾ"** ಎಂದರೆ, ಅದು ತುದಿ ಮೊದಲಿಲ್ಲದ ಸಂಭ್ರಮೋಲ್ಲಾಸದ ನವರಾತ್ರಿಯ ಬೆಳಕಿನ ಮಹಾಪರ್ವ. ಅಜ್ಞಾನದ ಕತ್ತಲನ್ನು ದಹಿಸುವ ಸುಜ್ಞಾನದ ಮಹಾಮಾರ್ಗ. ಕವಿ ದಿನಕರದೇಸಾಯಿ ಅವರ "ಮಾನವ ಧರ್ಮದ ದಸರೆಯ ಮಾಡಿ......" ಎಂಬ ಮಾತುಗಳ ಹಿನ್ನೆಲೆಯಲ್ಲೇ ಹೇಳುವುದಾದರೆ ಮೈಸೂರು ದಸರಾ ಭಾವೈಕ್ಯತೆಯ ಪ್ರಭಾವಳಿಯಲ್ಲಿ ಅರಳುತ್ತಾ ಬಂದಿರುವ ಈ ನೆಲದ ಮಹಾಹಬ್ಬ. ಸರ್ವ ಧರ್ಮೀಯರೂ, ಸರ್ವ ಜನಾಂಗದವರೂ ಸಂಗಮಿಸಿ ಸಂಭ್ರಮಿಸುವ ಸಂತಸದ ರಸಸಾಗರ.

ದಸರೆ, ದಸರಾ, ದಶಹರ, ದಶಹರ್...... ಮುಂತಾಗಿ ಕರೆಯಲ್ಪಡುವ ಹತ್ತು ದಿನಗಳ ಕಾಲ ಬಹು ವೈಭವೋಪೇತವಾಗಿ ಆಚರಿಸಲ್ಪಡುವ ಮಹಾ ಮಹೋತ್ಸವವಿದು. ನಾಡಷ್ಟೇ ಅಲ್ಲದೆ ರಾಷ್ಟ್ರವ್ಯಾಪಿ ಅಷ್ಟೇ ಏಕೆ ವಿಶ್ವವ್ಯಾಪಿ ಜನಾಕರ್ಷಣೆ ಹೊಂದಿರುವ ಮೈಸೂರು ದಸರಾಕ್ಕೆ ಎರಡು ಭಾಗ ಉಂಟು. ಮೊದಲನೆಯದು ಒಂಬತ್ತು ದಿನಗಳ 'ನವರಾತ್ರಿ'ಯಾದರೆ ಎರಡನೆಯದು ಹತ್ತು ದಿನಗಳ 'ವಿಜಯದಶಮಿ'. ಮೊದಲನೆಯದು ರಾಜವಂಶಸ್ಥರ ಅರಮನೆಯೊಳಗಿನ ಸಾಂಪ್ರದಾಯಕ ವಿಧಿ–ವಿಧಾನವಾದರೆ ಎರಡನೆಯದು ಸರ್ವರಿಗೂ ಮುಕ್ತವಾಗಿ ಅನಾವರಣಗೊಳ್ಳುವ ಸಾರ್ವಜನಿಕರದು. ನಮ್ಮ ಸಾಂಸ್ಕೃತಿಕ–ಧಾರ್ಮಿಕ ಪರಂಪರೆಯ ಶಕ್ತಿರೂಪದ ಸಂಕೇತವಾದ ಈ ನವರಾತ್ರಿ ಉತ್ಸವ,



ದಸರೆ, ದಸರಾ, ದಶಹರ, ದಶಹರ್....... ಮುಂತಾಗಿ ಕರೆಯಲ್ಪಡುವ ಹತ್ತು ದಿನಗಳ ಕಾಲ ಬಹು ವೈಭವೋಪೇತವಾಗಿ ಆಚರಿಸಲ್ಪಡುವ ಮಹಾ ಮಹೋತ್ಸವವಿದು. ನಾಡಷ್ಟೇ ಅಲ್ಲದೆ ರಾಷ್ಟ್ರವ್ಯಾಪಿ ಅಷ್ಟೇ ಏಕೆ ವಿಶ್ವವ್ಯಾಪಿ ಜನಾಕರ್ಷಣೆ ಹೊಂದಿರುವ ಮೈಸೂರು ದಸರಾಕ್ಕೆ ಎರಡು ಭಾಗ ಉಂಟು. ಮೊದಲನೆಯದು ಒಂಬತ್ತು ದಿನಗಳ 'ನವರಾತ್ರಿ'ಯಾದರೆ ಎರಡನೆಯದು ಹತ್ತು ದಿನಗಳ 'ವಿಜಯದಶಮಿ'. ಮೊದಲನೆಯದು ರಾಜವಂಶಸ್ಥರ ಅರಮನೆಯೊಳಗಿನ ಸಾಂಪ್ರದಾಯಿಕ ವಿಧಿ-ವಿಧಾನವಾದರೆ ಎರಡನೆಯದು ಸರ್ವರಿಗೂ ಮುಕ್ತವಾಗಿ ಅನಾವರಣಗೊಳ್ಳುವ ಸಾರ್ವಜನಿಕರದು.



ವಿಜಯದಶಮಿಯೂ ಹೌದಾದರೂ "ಮೈಸೂರು ದಸರಾ" ಎಂದೇ ಲೋಕಪ್ರಸಿದ್ಧಿ.

ಧರೆಗಿಳಿದ ದೇವಲೋಕದಂತೆ ಮೈಸೂರು ದಸರಾ. ದೇವೇಂದ್ರನ ಅಮರಾವತಿಯಂತೆ ಮೈಸೂರಿಗೆ ಮೈಸೂರೇ ಮಿರಮಿರನೆ ಮಿಂಚುವ ಮಹಾನಗರ. ಮೈಮನ ಪುಳಕಿತವಾಗುವಂತೆ ನಿತ್ಯ ಬದುಕಿನ ಜಂಜಡ ಮರೆಸುವ ಸಂತಸದ ಆಗರ. ಕಣ್ಣು ಕೋರೈಸುವಂತೆ ಮೈಸೂರೆಂಬೋ ಸ್ವರ್ಗದ ಬಾಗಿಲು ತೆರೆದುಕೊಳ್ಳುವ ಸಂಭ್ರಮದ ಚಿತ್ತಾರ. ಮೈಸೂರು ದಸರೆಯೇ ಹಾಗೆ. ಇದಕ್ಕಾಗಿ ಇಡೀ ಮೈಸೂರು ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು ನಿಲ್ಲುವ ಪರಿ ಇದೆಯಲ್ಲ ವಾಹ್ಹ್, ಮಹದದ್ಭುತ. ಇದಕ್ಕಿಲ್ಲ ಮತ್ತೊಂದು ಸರಿಸಮ. ಅದಕ್ಕೇನೆ ಇದು ಅಷ್ಟೊಂದು ಜಗದ್ವಿಖ್ಯಾತ. ದೇಶದ ಹಲವು ಕಡೆ ದಸರಾ ಉತ್ಸವಗಳು ನಡೆಯುವುದುಂಟು. ಆದರೆ, ಮೈಸೂರು ದಸರಾದ ವೈಭವವೇ ಬೇರೆ. ಇಡೀ ವಿಶ್ವವೇ ಇತ್ತ ತಿರುಗಿ ನೋಡುವಂಥದ್ದು. ಯಾರೇ ಆಗಲಿ ಈ ಕ್ಷಣಕ್ಕೂ ಮೈಸೂರು ದಸರಾ ಎಂದಾಕ್ಷಣ ಏನೋ ಒಂಥರಾ ಆನಂದ. ಮೈಮನವೆಲ್ಲಾ ರೋಮಾಂಚನ. ಕಣ್ಮುಂದೆ ಚೆಂದದ ಮೈಸೂರು, ಅಂದದ ಅರಮನೆ, ಸುಂದರ ಚಿನ್ನದ ಅಂಬಾರಿ, ಮನಸೆಳೆವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ಮಹಾರಾಜರ ವೈಭವ-ವೈಭೋಗಗಳೆಲ್ಲವೂ ನೆನಪುಗಳ ಮೆರವಣಿಗೆಯಾಗಿ ತೇಲಿ ಬರುತ್ತದೆ. ಇದರ ಜೊತೆಗೆ ಮೈಸೂರು ದಸರೆಯ ಜಂಬೂ ಸವಾರಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿದಂತೆ ನೆನಪಿನ ಪರದೆಯಲ್ಲಿ ಹಾದು ಹೋಗುತ್ತದೆ. ಇದೇ ನೋಡಿ ಮೈಸೂರು ದಸರಾದ ವೈಶಿಷ್ಟ್ಯತೆ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದು ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯ ದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು. ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯ ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಅವರ ಕಾಲದಲ್ಲಿ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯ ದಶಮಿಯ ದಸರಾ ಹಬ್ಬಕ್ಕೆ ಇನ್ನೂ ಹೆಚ್ಚಿನ ವೈಭವದ ವರ್ಣಮಯ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀ ಕೃಷ್ಣದೇವರಾಯರು. ಆಗ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ಈ ಮಹೋತ್ಸವದ ಕೇಂದ್ರಗಳಾಗಿದ್ದವು. ತಮ್ಮ ಸಾಮ್ರಾಜ್ಯದ ಶಕ್ತಿ-ಸಾಮರ್ಥ್ಯ, ಸಂಪತ್ತು-ಸಮೃದ್ಧಿ, ವೈಭವ-ವೈಭೋಗ, ವೀರತ್ವ-ಧೀರತ್ವ, ಕಲೆ-ಸಾಹಿತ್ಯ, ಸಂಗೀತ-ನೃತ್ಯ, ಸಂಸ್ಕೃತಿ-ಸಂಪನ್ನತೆ ....... ಹೀಗೆ ಸಕಲ ವಿಧಗಳಲ್ಲೂ ತಮ್ಮ ಹಿರಿಮೆ-ಗರಿಮೆಗಳನ್ನು ತೋರ್ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ಈ ದಸರಾ ಮಹೋತ್ಸವವನ್ನು ವಿಜಯನಗರ ಅರಸರು ಆಚರಿಸುತ್ತಿದ್ದರು. ಈ ಉತ್ಸವವನ್ನು ವೀಕ್ಷಿಸಲು ದೇಶ-ವಿದೇಶಗಳ ಗಣ್ಯಾತಿಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ದಾಖಲೆಗಳುಂಟು. ಅಷ್ಟೇ ಅಲ್ಲ 11ನೇ ಶತಮಾನದಲ್ಲೇ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15-16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ (1520-1522) ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಇಂತಹ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ



ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಇವರಲ್ಲಿನ 9ನೇ ಆಳ್ವಿಕೆಯ ರಾಜ ಒಡೆಯರು










downloaded from: www.kpscvaani.com



ಮಹಾರಾಜರೇ ಕೂರುತ್ತಿದ್ದರೆ ಇಂದು ಮೈಸೂರಿನ ಅಧಿದೇವತೆ ನಾಡದೇವಿ ಶ್ರೀ ಚಾಮುಂಡೇಶ್ವರಿ ಅಂಬಾರಿಯಲ್ಲಿ ಅಲಂಕೃತವಾಗಿ ಪೂಜಿಸಲ್ಪಡುತ್ತಾಳೆ. 750 ಕೆ.ಜಿ. ಭಾರದ ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಸುಂದರ ಮೂರ್ತಿಯನ್ನು ಹೊತ್ತ ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ ಮೈಸೂರು ರಾಜ ಬೀದಿಯಲ್ಲಿ ಸಾಗುವ ಮೈಸೂರು ದಸರೆಯ ಜಂಬೂ ಸವಾರಿಯನ್ನು ನೋಡುವುದೇ ಒಂದು ಮಹಾಹಬ್ಬ. ಹಾಗಾಗಿ ಈ ಮಹಾದೃಶ್ಯ ಕಾವ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಯರೆಲ್ಲಾ ಸಾಗರದೋಪಾದಿಯಲ್ಲಿ ಮೈಸೂರಿನತ್ತ ಹರಿದು ಬರುತ್ತಾರೆ. ವಿಜಯದಶಮಿಯಂದು ಈ ಚಿನ್ನದ ಅಂಬಾರಿಯನ್ನು ದರ್ಶಿಸುವುದು ಮಹಾ ಪುಣ್ಯವೆಂಬ ಭಾವನೆ ಇಲ್ಲಿ ಬೇರೂರಿರುವುದರಿಂದ ಇದಕ್ಕೆ ದೈವೀಕ ಶಕ್ತಿಯದ್ದೆಂದು ಹೆಚ್ಚಿನ ಮಹತ್ವವುಂಟು.

ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂ ಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡನ್ನಾಳಿದ ರಾಜ ಪರಂಪರೆಯ ಅನಾವರಣ. ಮೈಸೂರು ದಸರಾ ಉತ್ಸವದ ಉದ್ದಕ್ಕೂ ಇದರದ್ದೇ ಮಹಾದರ್ಶನ. ಅಶ್ವಯುಜ ಶುದ್ಧ ಪ್ರಥಮೆಯಂದು ದೇವಿ ಚಾಮುಂಡಿ ಪೂಜೆಯೊಡನೆ ಚಾಮುಂಡಿ ಬೆಟ್ಟದಲ್ಲಿ ನವರಾತ್ರಿ ಉತ್ಸವ ಆರಂಭಗೊಳ್ಳುವ ಮೊದಲ ದಿನದಿಂದ ಹಿಡಿದು ಮಹಾನವಮಿಯ ಒಂಭತ್ತು ದಿನಗಳೂ ದಸರಾ ಸಂಗೀತೋತ್ಸವ, ದಸರಾ ಚಲನಚಿತ್ರೋತ್ಸವ, ದಸರಾ ಕಾವ್ಯೋತ್ಸವ, ದಸರಾ ರಂಗೋತ್ಸವ, ದಸರಾ ಕ್ರೀಡೋತ್ಸವ, ಯುವ ದಸರಾ, ಯೋಗ ದಸರಾ, ಗ್ರಾಮೀಣ ದಸರಾ, ಜನಪದ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ದಸರಾ ಗೊಂಬೆ ಪ್ರದರ್ಶನ, ದಸರಾ ವೈಮಾನಿಕ ಪ್ರದರ್ಶನ, ದಸರಾ ಆಹಾರ ಮೇಳ...... ಹೀಗೆ ಮೈಸೂರಿನ ತುಂಬಾ ವಿವಿಧ ದಸರಾ ಉತ್ಸವಗಳ, ಮೇಳಗಳ, ಪ್ರದರ್ಶನಗಳ ಮಹಾ ಸುಗ್ಗಿಯೇ ಜರುಗುತ್ತದೆ. ನವರಾತ್ರಿಯ ಸಮಾರೋಪವಾಗಿ ವಿಜಯ ದಶಮಿಯಂದು ರಾಜ್ಯದ ಮುಖ್ಯಮಂತ್ರಿಯಿಂದ ನಂದಿ ಕಂಬ ಪೂಜೆಯೊಡನೆ ಆನೆ ಮೇಲಿನ ಅಂಬಾರಿಯಲ್ಲಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಚಾಲನೆಗೊಂಡು ನಡೆಯುವ ಜಂಬೂ ಸವಾರಿಯ ಮಹಾ ಮೆರವಣಿಗೆಯಲ್ಲಂತೂ ಇಡೀ ನಾಡಿನ ಸಾಂಸ್ಕೃತಿಕ ಸಂಪತ್ತು ತೆರೆದುಕೊಳ್ಳುತ್ತದೆ.

ನಂದೀಧ್ವಜ ಕುಣಿತ, ನಾದಸ್ವರ ವಾದನ, ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ಆನೆ ಸಾರೋಟು, ಕುದುರೆ ಸಾರೋಟು, ಫಿರಂಗಿಗಳು, ಬೆಳ್ಳಿ ರಥ, ವಿವಿಧ ಪಲ್ಲಕ್ಕಿಗಳು, ಭಜನೆ ಮೇಳ, ಕರಗ, ವೀರಭದ್ರನ ಕುಣಿತ, ಕೀಲು ಕುದುರೆ, ಮಲ್ಲಗಂಬ, ವೇಷಗಾರರು, ಅಲಾವಿ ಕುಣಿತ, ವೀರಗಾಸೆ, ಝೂಂಜ್ ಪಥಕ್, ಗೊರವರ ಕುಣಿತ, ಜಗ್ಗಲಗೆ ಮೇಳ, ಹೆಜ್ಜೆ ಮೇಳ, ಗಾರುಡಿಗೊಂಬೆ, ಟಿಬೇಟಿಯನ್ ನೃತ್ಯ, ಚಿಟ್ ಮೇಳ, ಕೋಲಾಟ, ಮಲೆನಾಡು ಸುಗ್ಗಿಕುಣಿತ, ಕೊಡವ ಕುಣಿತ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಮರಗಾಲು ಕುಣಿತ, ಸೋಮನಕುಣಿತ, ಚಂಡೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ, ನಗಾರಿ ಮೇಳ, ಪಟಾ ಕುಣಿತ, ಕೊಂಬು ಕಹಳೆ, ಕರಡಿ ಮಜಲು, ಪಾಳೇಗಾರರ ವೇಷ, ದೊಣ್ಣೆವರಸೆ, ಕಂಗಿಲು ಕುಣಿತ, ಯಕ್ಷಗಾನ ವೇಷಧಾರಿಗಳು, ಜಡೆಕೋಲಾಟ, ಧ್ವಜ ಕುಣಿತ, ಚಿಟಿಕೆ ಭಜನೆ, ಒನಕೆ ನೃತ್ಯ, ಭೂತ ನೃತ್ಯ ಇವುಗಳೆಲ್ಲದರ ಮಹಾ ಸಂಗಮವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನೂ ಪ್ರತಿನಿಧಿಸುವ 30ಕ್ಕೂ ಹೆಚ್ಚು ವೈವಿಧ್ಯಮಯ ಸ್ತಬ್ಧಚಿತ್ರಗಳೊಡನೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ಸಾಗುವ 'ಮೈಸೂರು ದಸರಾ' ಎಂಬ ಈ ಮಹಾ ಮೆರವಣಿಗೆ ಲಕ್ಷಾಂತರ ಜನರ ಕಣ್ಮನ ಸೆಳೆಯುತ್ತಾ ನಗರದಿಂದ ನಾಲ್ಕೈದು ಕಿ.ಮೀ. ದೂರವಿರುವ ಬನ್ನಿಮಂಟಪ ತಲುಪುತ್ತದೆ.

**ಆಕರ್ಷಕ ಟಾರ್ಚ್‌ಲೈಟ್ ಪೆರೇಡ್**

ಆಗ ಅಲ್ಲಿ ಪೊಲೀಸ್ ದಳದಿಂದ ಮನಮೋಹಕ, ಬಹುರೋಚಕವಾದ ಟಾರ್ಚ್‌ಲೈಟ್ ಪೆರೇಡ್ (ಪಂಜಿನ ಕವಾಯತು) ಆರಂಭವಾಗುತ್ತದೆ. ಹಿಂದೆ ಮಹಾರಾಜರು ಸೈನಿಕರಿಂದ ಧ್ವಜ ವಂದನೆ ಸ್ವೀಕರಿಸುತ್ತಿದ್ದ ಮಾದರಿಯಲ್ಲೇ ಈಗ ಟಾರ್ಚ್‌ಲೈಟ್ ಪೆರೇಡ್‌ನಲ್ಲಿ ರಾಜ್ಯದ ರಾಜ್ಯಪಾಲರು ಧ್ವಜವಂದನೆ ಗೌರವ ಸ್ವೀಕರಿಸುತ್ತಾರೆ. ಟಾರ್ಚ್‌ಲೈಟ್ ಪೆರೇಡ್‌ನ ಚಿತ್ತಾಕರ್ಷಕ ಸಾಹಸಮಯ ವರ್ಣ ದೃಶ್ಯಗಳಂತೂ ವರ್ಣಿಸಲಸಾಧ್ಯ. ಲೇಸರ್ ಪ್ರದರ್ಶನ, ಅಶ್ವಾರೋಹಿಗಳ ಸಾಹಸ ಕಸರತ್ತು, ಹೊನಲು ಬೆಳಕಿನ ಮಾಯಾಲೋಕ, ಬಣ್ಣ ಬಣ್ಣದ ಬಾಣ ಬಿರುಸುಗಳ ಯಕ್ಷಲೋಕಗಳೆಲ್ಲವೂ ಒಮ್ಮೆಗೇ ಸೃಷ್ಟಿಗೊಂಡು ಇವುಗಳೊಂದಿಗೆ ಹತ್ತು ದಿನಗಳ ಒಟ್ಟಾರೆ ದಸರಾ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಗುತ್ತದೆ. ಈ ದಸರಾ ಸಂದರ್ಭದಲ್ಲಿ ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿ ಸೃಷ್ಟಿಗೊಳ್ಳುವ 'ದಸರಾ ವಸ್ತು ಪ್ರದರ್ಶನ' ಕೂಡ ಪ್ರವಾಸಿಗರನ್ನು ಆಕರ್ಷಿಸುವ ಕಿನ್ನರ ಲೋಕವಾಗಿ ಕಂಗೊಳಿಸುತ್ತದೆ.

**ರತ್ನ ಖಚಿತ ಸ್ವರ್ಣ ಸಿಂಹಾಸನ**

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಉದ್ದೇಶಿಸಲಾದ ಒಂದು ಶಾಸನದ ಪ್ರಕಾರ ಮೈಸೂರು ಅರಸರಿಗೆ ಪರಂಪರಾಗತವಾಗಿ ಬಂದ ಈ ರತ್ನ ಖಚಿತ ಸುವರ್ಣ ಸಿಂಹಾಸನವೊಂದು ಅಪೂರ್ವ ಕಲಾಕೃತಿ. ದಸರೆಯ ಸಂದರ್ಭದಲ್ಲಿ ಮಾತ್ರ ಸಾರ್ವಜನಿಕರ ವೀಕ್ಷಣೆಗೆ ತೆರೆದಿಡುವ ಬಂಗಾರದ ಈ ದಿವ್ಯ ಮತ್ಕಳಿಯನ್ನು ಮಿಕ್ಕ ದಿನಗಳಲ್ಲಿ ಕಾಣಲಾಗುವುದಿಲ್ಲ. ದಸರಾ ಸಮಯದಲ್ಲಿ ಕೆಲವು ಸಾಂಪ್ರದಾಯಿಕ ಪೂಜೆ ಪುನಸ್ಕಾರದೊಂದಿಗೆ ಜೋಡಿಸುವ ಈ ಸಿಂಹಾಸನವನ್ನು ಆ ನಂತರ ಕಳಚಿ ಸಕಲ ಭದ್ರತೆಗಳೊಂದಿಗೆ ಸಂರಕ್ಷಿಸಿಡಲಾಗುವುದು. ಪ್ರಪಂಚದಲ್ಲೇ ಕಾಣಸಿಗದಂತಹ ಅಪರೂಪದ ಸಿಂಹಾಸನವಿದು. ಒಂದು ನಂಬಿಕೆಯ ಪ್ರಕಾರ ಇದು ಮಹಾಭಾರತದ ಪಾಂಡವರಿಗೆ ಸೇರಿದ್ದೆಂದು ಹೇಳಲಾಗುತ್ತದೆ.

ಈ ಸಿಂಹಾಸನವನ್ನು ದಂತದ ಕುಸುರಿ ಕಲೆಯಿಂದ ಅಲಂಕರಿಸಿ ಚಿನ್ನದ ತಗಡುಗಳನ್ನು ತೊಡಿಸಲಾಗಿದೆ. ಇದಕ್ಕೆ ಆಮೆಯ ಆಕಾರದ ಆಸನವಿದ್ದು ಯಾಳಿಗಳು, ಬಳ್ಳಿಗಳು, ಬಾಳೆಯ ಕಂಬ, ಮಾವಿನ ಎಲೆ, ಆನೆ, ಕುದುರೆ, ರಥ, ಚತುರಂಗದಳ, ತ್ರಿಮೂರ್ತಿಗಳು, ಅಷ್ಟದಿಕ್ಪಾಲಕರು, ನಾಗದೇವತೆ ಮುಂತಾದವೆಲ್ಲವನ್ನು ಚಿನ್ನದ ಚಿತ್ತಾರದಲ್ಲಿ ಬಿಡಿಸಲಾಗಿದೆ. ಸಿಂಹಾಸನ ಏರಲು ಏಳು ಮೆಟ್ಟಿಲುಗಳಿದ್ದು ಎರಡೂ ಕಡೆಗಳಲ್ಲೂ ರಮಣೀಯ ಸ್ತ್ರೀಪುತ್ಥಳಿಗಳಿದ್ದು ಸಿಂಹಾಸನದ ಮೇಲೆ ಮೈಸೂರು ರಾಜಲಾಂಛನವಾದ ಗಂಡಭೇರುಂಡವನ್ನು ಮುತ್ತಿನ ಹರಳುಗಳಿಂದ ನಿರ್ಮಿಸಿದ್ದು ಚಿನ್ನದ ಛತ್ರಿಯೊಂದನ್ನು ತುದಿಯಲ್ಲಿ ಅಳವಡಿಸಲಾಗಿದೆ. 1859 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಬರೆದಿರುವ "ದೇವತಾನಾಮ ಕುಸುಮಾಂಜರಿ" ಕೃತಿಯಲ್ಲಿ ಈ ಭವ್ಯ ಸಿಂಹಾಸನದ ವಿವರಗಳಿವೆ.

**ಶಮಿವೃಕ್ಷ ಮತ್ತು ವಿಜಯ ದಶಮಿ**





ಮೈಸೂರು ದಸರಾ ಎಂದರೆ ಅದು ಮಹಾಸಂಭ್ರಮದ ನಾಡಹಬ್ಬ, ಧರ್ಮ ಸಂಸ್ಕೃತಿಗಳು ಸಂಗಮಿಸಿ ಮೆರೆಯುವ





downloaded from: www.kpscvaani.com



# ಇಂದಿಗೂ ನಮಗಾಗಿ ಗಾಂಧೀಜಿ



ಯು. ವಿನೀತ್ ರಾವ್



ಮಹಾತ್ಮ ಗಾಂಧೀಜಿ ಅಂದರೆ ನಮ್ಮ ದೇಶದಲ್ಲಿ ಎಲ್ಲಾ ತಲೆಮಾರುಗಳ ಜನರಿಗೆ ಬಹು ಪರಿಚಿತವಾಗಿರುವಂತಹ ಹೆಸರು. ಈ ಕಾಲದಲ್ಲಿ ನಾವಂದುಕೊಂಡಿರುವಂತೆ ಅವರು ಅಲ್ಲಲ್ಲಿ ಕಾಣಿಸುವ ಬರೀಯ ಪ್ರತಿಮೆ ಅಥವಾ ಸಂಕೇತವಾಗಿ ಸೀಮಿತರಲ್ಲ. ಶಾಲೆಗಳ ಗೋಡೆಯ ಮೇಲಿನ ಪಟವಾಗಿ, ಶಾಲಾ ಪಠ್ಯವಾಗಿ ಅಥವಾ ನೋಟಿನ ಮೇಲೆ ಚಿತ್ರವಾಗಿದ್ದಾರೆ ಎಂಬ ಮಾತ್ರಕ್ಕೆ ನೆನಪಿನಲ್ಲಿ ಉಳಿದವರೂ ಅಲ್ಲ. ರಾಷ್ಟ್ರಪಿತ, ಯುಗಪುರುಷ, ಪುಣ್ಯಾವತಾರ, ಕರ್ಮವೀರ, ಮಹಾತ್ಮ ಮುಂತಾದ ಸ್ಥಾನಮಾನ ಮತ್ತು ಬಿರುದುಗಳ ಎಲ್ಲಾ ವೈಭವ – ಆಡಂಬರಗಳಾಚೆಗಿನ ಸರಳತೆ, ಅಹಿಂಸೆ, ಸತ್ಯ, ಶಾಂತಿ, ಪ್ರೀತಿ, ಸಮತೆಗಳ ಸಾಕಾರ ಮಾದರಿಯಾಗಿ ಬದುಕಿದ್ದವರು ಗಾಂಧೀಜಿ. ಅವರು ಭಾರತವನ್ನು ಮತ್ತು ಭಾರತೀಯರನ್ನು ಪ್ರೀತಿಸಿದ್ದಲ್ಲದೆ ವಿಶ್ವವನ್ನು, ಮಾನವತೆಯನ್ನು, ಸಮಸ್ತ ಜೀವಿಗಳನ್ನು ಹಾಗೂ ಪರಿಸರವನ್ನು ಪ್ರೀತಿಸಿದ್ದವರು. ಇಂತಹ ಹಲವು ಕಾರಣಗಳಿಂದಲೇ ಗಾಂಧೀಜಿ ಇಂದಿಗೂ ಅನುಸರಿಸಬಲ್ಲ ಆದರ್ಶವೆಂದು ವಿಶ್ವದಾದ್ಯಂತ ಗೌರವಿಸಲ್ಪಡುವ ಮಹಾ ಚೇತನರಾಗಿದ್ದಾರೆ.

ಈ ವಾಸ್ತವದ ನುಡಿಗಳನ್ನು ಓದುತ್ತಿದ್ದಂತೆಯೇ ನೂರೈವತ್ತು ವರ್ಷಗಳ ಹಿಂದೆ ಜನಿಸಿ, ಸುಮಾರು ಎಪ್ಪತ್ತೆಂಟು–ಎಪ್ಪತ್ತೊಂಬತ್ತು ವರ್ಷಗಳ ಕಾಲ ಜೀವಿಸಿದ್ದ ವ್ಯಕ್ತಿಯೊಬ್ಬರು ತನ್ನ ಮರಣಾನಂತರದ ಏಳು ದಶಕಗಳಾಚೆಗೂ ಹೇಗೆ





downloaded from: www.kpscvaani.com



> ಗಾಂಧಿ ಭಾರತವನ್ನು ಮತ್ತು ಭಾರತೀಯರನ್ನು ಪ್ರೀತಿಸಿದ್ದಲ್ಲದೆ ವಿಶ್ವವನ್ನು, ಮಾನವತೆಯನ್ನು, ಸಮಸ್ತ ಜೀವಿಗಳನ್ನು ಹಾಗೂ ಪರಿಸರವನ್ನು ಪ್ರೀತಿಸಿದ್ದವರು. ಇಂತಹ ಹಲವು ಕಾರಣಗಳಿಂದಲೇ ಗಾಂಧೀಜಿ ಇಂದಿಗೂ ಅನುಸರಿಸಬಲ್ಲ ಆದರ್ಶವೆಂದು ವಿಶ್ವದಾದ್ಯಂತ ಗೌರವಿಸಲ್ಪಡುವ ಮಹಾ ಚೇತನರಾಗಿದ್ದಾರೆ.

ತಾನೇ ಪ್ರಸ್ತುತರಾಗಬಲ್ಲರು ಎಂಬ ಪ್ರಶ್ನೆಯು ನಮ್ಮ ಸಮಕಾಲೀನ ಮನಸ್ಸಿನಲ್ಲಿ ಸಹಜವಾಗಿಯೇ ಮೂಡುತ್ತದೆ. ಇದೇ ಹೊತ್ತಿನಲ್ಲಿ ಹಲವು ಕಡೆಗಳಿಂದ ಅವರ ಬಗ್ಗೆ ಬರುವ ಅಪಸ್ವರಗಳು ಆಧಾರ ರಹಿತವಾಗಿದ್ದರೂ ಒಂದು ಬಗೆಯ ಗೊಂದಲವನ್ನು ಮೂಡಿಸುತ್ತಲೇ ಇರುತ್ತವೆ. ಆ ಹಿನ್ನೆಲೆಯಲ್ಲಿ ಬಹು ಚರ್ಚಿತವಾದ ಬಹುರೂಪಿ ಗಾಂಧೀಜಿಯ ಜೀವಪರ ನಡೆ-ನುಡಿಗಳನ್ನು ಹಾಗೂ ಬಹುತ್ವದ ಬಗ್ಗೆ ಅವರ ವಿಚಾರಧಾರೆಯನ್ನು ಗ್ರಹಿಸಿಕೊಳ್ಳಲು ಬೇಕಾದ ತೆರೆದ ಮನಸ್ಸಿರುವುದೂ ಮುಖ್ಯವಾಗುತ್ತದೆ. ಇಲ್ಲವಾದರೆ ನಾವು ನಮ್ಮ ಮಾತುಕತೆಗಳಲ್ಲಿ ಗಾಂಧೀಜಿ ಬಗ್ಗೆ ಒಮ್ಮೊಮ್ಮೆ ಪೂಜ್ಯವಾಗಿ ಮಾತನಾಡುವುದಕ್ಕಿಂತಲೂ ಹೆಚ್ಚಾಗಿ ಅವರ ವಿರುದ್ಧ ಹರಡಿಸಲ್ಪಡುತ್ತಿರುವ ಸುಳ್ಳುಗಳನ್ನೇ ಪರಮ ಸತ್ಯವೆಂದು ನಂಬಿ ಜರೆಯುವ ಅಪಾಯವಿರುತ್ತದೆ. ಇದರಿಂದಾಗಿ ಈಗೀಗ ಗಾಂಧೀಜಿಯ ಪ್ರಸ್ತುತತೆಯ ಬಗ್ಗೆ ನಡೆಯುವ ಚರ್ಚೆಗಳೆಲ್ಲವೂ ಹಾದಿ ತಪ್ಪುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಏಕೆ ಹೀಗೆ?...

ಈಗಿನ ಕಾಲವನ್ನು ಆಧುನಿಕೋತ್ತರ ಹಾಗೂ ಸತ್ಯೋತ್ತರ ಯುಗವೆಂದು ಕರೆಯುವುದುಂಟು. ಇಲ್ಲಿ ಎಲ್ಲವೂ ಕ್ಷಣ ಕ್ಷಣಕ್ಕೆ ಹಳತಾಗುವ ವಿಚಾರಗಳು ಹಾಗೂ ವ್ಯವಸ್ಥೆಗಳು ಇರುವಂತಹದ್ದೆಂಬ ಕಲ್ಪನೆಯಿದೆ. ಎಲ್ಲವೂ ಆಧುನಿಕತೆಯ ಧಾವಂತಕ್ಕೆ ಬದಲಾಗುತ್ತಲೇ ಇರುವಾಗ ಯಾವ ವಿಚಾರಗಳೂ ಸಾರ್ವಕಾಲಿಕವಲ್ಲ ಎಂಬ ನಿಲುವೂ ಇದೆ. ಕೈಬೆರಳ ತುದಿಯಲ್ಲೇ ಎಲ್ಲವೂ ಸಾಧ್ಯ, ಹಾಗಾಗಿ ಜಗತ್ತೇ ನಮ್ಮ ಅಂಗೈಯಲ್ಲಿದೆ, ನಮ್ಮ ಅಂಗೈಯಾಚೆಗೆ ಏನೂ ಇಲ್ಲ ಎಂಬ ಭ್ರಮೆಯಲ್ಲಿದ್ದೇವೆ ನಾವು. ದಿನದ ಬಹುತೇಕ ಸಮಯ ಫೇಸ್ಬುಕ್, ವಾಟ್ಸಪ್, ಟ್ವಿಟರ್‌ಗಳ ಮೂಲಕ ಬರುವ ಮಿಥ್ಯ ವಿಚಾರಗಳ ಭರಾಟೆಯಿಂದ ಎಲ್ಲವೂ ಉದ್ವೇಗದಲ್ಲೇ ಮುಗಿದೇಳುವ ಕಾಲದಲ್ಲಿ ಗಾಂಧೀಜಿ, ಅವರ ವಿಚಾರಧಾರೆ, ಅವರ ಕಾರ್ಯಗಳನ್ನು ಚರ್ಚಿಸುವುದು ತುಸು ಕಷ್ಟವೆ. ಏಕೆಂದರೆ ಒಬ್ಬೊಬ್ಬರು ಒಂದೊಂದು ವಿಚಾರವನ್ನು ಹಿಡಿದು, ಸಲ್ಲದ್ದನ್ನು ಆರೋಪಿಸುತ್ತಾ... ಗಾಂಧಿ ಮೇಲೆ ಮುಗಿಬೀಳುತ್ತಿರುವ ಸನ್ನಿವೇಶದಲ್ಲಿ ಗಾಂಧೀಜಿಯನ್ನು ಅರ್ಥಮಾಡಿಕೊಳ್ಳಲು ಬೇಕಿರುವುದು ವ್ಯವಧಾನ ಮತ್ತು ಮುಕ್ತ ಮನಸ್ಸು ಮಾತ್ರ. ಗಾಂಧೀಜಿ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕಲ್ಪಡುತ್ತಿರುವ ಪ್ರತೀ ಹತ್ತು ಬರಹಗಳಲ್ಲಿ ಏಳು ಗಾಂಧೀಜಿಯವರ ಬಗ್ಗೆ ಅಪಪ್ರಚಾರ ಮಾಡಿ ತೆಗಳುವ ಉದ್ದೇಶದಿಂದ ಹಾಕಲ್ಪಡುವವು ಎಂಬುವುದು ಉಡುಪಿ ಎಂಜಿಎಂ ಕಾಲೇಜಿನ ಗಾಂಧಿ ಕೇಂದ್ರ ಕೈಗೊಂಡ ಅಧ್ಯಯನದಲ್ಲಿ ಕಂಡುಬಂದಿದೆ. ಇಷ್ಟಾದರೂ ಗಾಂಧೀಜಿಯ ಹೆಸರನ್ನು ಹೇಳದೆಯೇ ಅವರ ಸರ್ವೋದಯ ವಿಚಾರಗಳ ಬಗ್ಗೆ ಜನರಿಗೆ ಆಶಾಭಾವನೆಯೂ ಹೆಚ್ಚಾಗಿದೆ ಎಂಬುವುದನ್ನೂ ಆ ಅಧ್ಯಯನವು ಕಂಡುಕೊಂಡಿದೆ.

**ಬಹುರೂಪಗಳಿಂದ ಪ್ರಸ್ತುತರು ಗಾಂಧೀಜಿ**

ಗಾಂಧೀಜಿಯ ಜೀವನವನ್ನು ಅವಲೋಕಿಸಿದರೆ ನಮಗೆ ಉತ್ತಮವೆನಿಸುವ ಹಲವು ಪಾಠಗಳು ದೊರೆಯುತ್ತವೆ. ಬಾಲಕ ಗಾಂಧಿಯ ಜೀವನಾದರ್ಶ, ವಿದ್ಯಾರ್ಥಿ ಗಾಂಧಿ, ವಕೀಲ ಗಾಂಧಿ, ಸೌತ್ ಆಫ್ರಿಕಾದಲ್ಲಿ ಸತ್ಯಾಗ್ರಹೀ ಗಾಂಧಿ, ಲೇಖಕ ಗಾಂಧಿ, ಪತ್ರಕರ್ತ / ಪತ್ರಿಕೋದ್ಯಮಿ ಗಾಂಧಿ, ವಿದೇಶೀ ನೆಲದಲ್ಲಿ ಬೆಳಗಿದ ಸತ್ಯಶೋಧಕ ಗಾಂಧಿ ಹೀಗೆ... ಯುವಕ ಗಾಂಧಿಯ ಸಾಧನಾ ಪಥದ ಪರಿಚಯ ನಮಗಾದರೆ ಅವರು ಯುವಕರಿಗೂ ರೋಲ್ ಮಾಡೆಲ್ ಅಥವಾ ಯೂಥ್ ಐಕಾನ್ ಆಗಿ ಕಾಣಿಸ ಬಲ್ಲರು. 1915ರಲ್ಲಿ ಸೌತ್ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದು ರೈಲಿನ ಅತೀ ಸಾಮಾನ್ಯ ದರ್ಜೆಯಲ್ಲಿ ದೇಶಸುತ್ತಿ ಜನಸಾಮಾನ್ಯನ ನಾಡಿಮಿಡಿತ ಗ್ರಹಿಸಿದ ಗಾಂಧಿ, ನಂತರ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಕ್ರಾಂತಿಕಾರಿ ಭಾಷಣ ಮಾಡಿದ ಗಾಂಧಿ, ರೌಲೆಟ್ ಸತ್ಯಾಗ್ರಹದಿಂದಾರಂಭಿಸಿ ಅಸಹಕಾರ ಚಳವಳಿ, ದಂಡೀ ಯಾತ್ರೆ, ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳವಳಿಗಳ ಸಹಿತವಾಗಿ ಖಾದೀ ಪ್ರಚಾರ ಯಾತ್ರೆ ಹಾಗೂ ಅಸ್ಪೃಶ್ಯತಾ ನಿವಾರಣೆಗಾಗಿನ ಯಾತ್ರೆಗಳ ಮೂಲಕ ಹಳ್ಳಿ



downloaded from: www.kpscvaani.com

> **ಗಾಂಧೀಜಿ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕಲ್ಪಡುತ್ತಿರುವ ಪ್ರತೀ ಹತ್ತು ಬರಹಗಳಲ್ಲಿ ಏಳು ಗಾಂಧೀಜಿಯವರ ಬಗ್ಗೆ ಅಪಪ್ರಚಾರ ಮಾಡಿ ತೆಗಳುವ ಉದ್ದೇಶದಿಂದ ಹಾಕಲ್ಪಡುವವು ಎಂಬುವುದು ಉಡುಪಿ ಎಂಜಿಎಂ ಕಾಲೇಜಿನ ಗಾಂಧಿ ಕೇಂದ್ರ ಕೈಗೊಂಡ ಅಧ್ಯಯನದಲ್ಲಿ ಕಂಡುಬಂದಿದೆ. ಇಷ್ಟಾದರೂ ಗಾಂಧೀಜಿಯ ಹೆಸರನ್ನು ಹೇಳದೆಯೇ ಅವರ ಸರ್ವೋದಯ ವಿಚಾರಗಳ ಬಗ್ಗೆ ಜನರಿಗೆ ಆಶಾಭಾವನೆಯೂ ಹೆಚ್ಚಾಗಿದೆ ಎಂಬುವುದನ್ನೂ ಆ ಅಧ್ಯಯನವು ಕಂಡುಕೊಂಡಿದೆ.**



ಹಳ್ಳಿಗಳನ್ನು, ಊರು ಊರುಗಳನ್ನು ಸಂದರ್ಶಿಸಿ ಭಾರತವನ್ನು ಬೆಸೆದವರು. ಮಾತೃಭಾಷೆ, ಪ್ರಾಂತೀಯ ಭಾಷೆ ಹಾಗೂ ರಾಷ್ಟ್ರೀಯ ಭಾಷೆಗೂ ಮಹತ್ವವನ್ನು ನೀಡಿ ಮನಸ್ಸು, ಹೃದಯ, ಮತ್ತು ಕೈಗಳಿಗೆ ಹತ್ತಿರದ ಕ್ರಿಯಾಶೀಲ ಶಿಕ್ಷಣ ವಿಧಾನವನ್ನು ರೂಪಿಸಿದ್ದು ಅವರ ದೊಡ್ಡ ಕೊಡುಗೆಯೇ ಸರಿ.

ಸ್ವಾತಂತ್ರ್ಯ ಚಳುವಳಿಗೆ ರಚನಾತ್ಮಕ ಆಯಾಮವನ್ನು ನೀಡಿ ಮಹಿಳೆಯರು ಮತ್ತು ಮಕ್ಕಳೂ ಭಾಗವಹಿಸಬಹುದಾಗಿದ್ದ ರೀತಿಯಲ್ಲಿ ಸಂಘಟಿಸಿ, ಜನಸಾಮಾನ್ಯರ ಹೆದ್ದೆರೆಯನ್ನು ಸೇರಿಸಿ ಹೊಸದಿಕ್ಕನ್ನು ಕೊಟ್ಟ ನೇತಾರ ಗಾಂಧಿಯಿಂದ ಹಿಡಿದು 1946ರ ನವೆಂಬರಲ್ಲಿ ಬಂಗಾಳದ ನೌಕಾಲಿಯ ಕೋಮು ಹಿಂಸಾಚಾರವನ್ನು ಒಬ್ಬಂಟಿಯಾಗಿ ನಿಲ್ಲಿಸಿ "ಸಬ್‌ಕೋ ಸನ್ಮತಿ ದೇ ಭಗವಾನ್" ಎನ್ನುತ್ತಾ ಬರಿಗಾಲಿನಲ್ಲಿ ಏಳು ವಾರಗಳ ಕಾಲ 47 ಹಳ್ಳಿಗಳಿಗೆ 116 ಮೈಲುಗಳು ನಡೆದ ಎಪ್ಪತ್ತೇಳರ ಹಿರಿಯ ಗಾಂಧಿ, ಸ್ವತಂತ್ರ ಭಾರತವು ಸರ್ವೋದಯ ಭಾರತವಾಗಬೇಕೆಂಬ ಕನಸನ್ನು ಕಂಡ ಸರ್ವಜನಪ್ರಿಯ ಗಾಂಧಿ. ಹೀಗೆ ಅವರ ಜೀವನ, ಮಾತುಗಳು ಮತ್ತು ಕೃತಿಗಳು ನಮ್ಮ ಒಳಿತಿಗಾಗಿ ಇಂದಿಗೂ ಏನನ್ನೋ ಹೇಳುತ್ತಿವೆ.

ಗಾಂಧೀಜಿಯ ಪ್ರಸ್ತುತತೆಯನ್ನು ನಾವಿಂದು ವೈಯುಕ್ತಿಕ, ಸಾಮುದಾಯಿಕ, ಮತ್ತು ಸಾಮಾಜಿಕ ನೆಲೆಗಳಲ್ಲಿ ಗ್ರಹಿಸಬಹುದು. ಮೊದಲನೆಯದಾಗಿ ಅವರು ಸ್ವಚ್ಛ ಚಾರಿತ್ರ್ಯ, ಶಿಸ್ತು, ಆತ್ಮಸಂಯಮ, ಕಾಯಕ ಮತ್ತು ನೈರ್ಮಲ್ಯಕ್ಕೆ ಕೊಡುತ್ತಿದ್ದ ಮಹತ್ವವು ನಮಗಿಂದಿಗೂ ಪಾಠವಾಗಿದೆ. ಅವರು ಸ್ವತಃ ಪಾಲಿಸುತ್ತಾ ಆಶ್ರಮವಾಸಿಗಳಿಗೆ ಬೋಧಿಸುತ್ತಿದ್ದ ಪ್ರತಿಜ್ಞೆ ಹೀಗಿದೆ...

> **"ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮಸಮಾನತ್ವ, ಸ್ವದೇಶೀ, ಸ್ಪರ್ಶಭಾವನಾ, ಹನ್ನೊಂದೀ ವ್ರತಗಳ ಕೈಗೊಳ್ವೆ ನಮ್ರ ನಿಶ್ಚಯ ಭಾವದಿ"**

ಗಾಂಧೀ ಅಧ್ಯಯನದ ಪರಿಭಾಷೆಯಲ್ಲಿ ಹೇಳುವುದಾದರೆ ಇವು ಗಾಂಧೀ ವಿಚಾರಧಾರೆಯ ಮೂಲ ತತ್ವಗಳು. ಇವುಗಳಲ್ಲಿ ಕೆಲವು ವಯಕ್ತಿಕ ನೆಲೆಯಲ್ಲಿ ಮತ್ತೆ ಕೆಲವು ವೈಯಕ್ತಿಕ, ಸಾಮುದಾಯಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪೂರ್ಣಸ್ವರಾಜ್ಯ ಮತ್ತು ಸರ್ವೋದಯ ಸಾಧನೆಗೆ ಸಹಕಾರಿಯಾದ ಕಾರ್ಯಶೈಲಿ ಅಥವಾ ಜೀವನ ವಿಧಾನವಾಗಿ ರೂಪು ಗೊಂಡವು. ಅದರಲ್ಲೂ ಇಂದಿನ ಪರಿಸ್ಥಿತಿಯಲ್ಲಿ ಭಾರತವು ಭಾರತವಾಗಿ ಉಳಿಯಬೇಕಾದರೆ ಮುಖ್ಯವಾಗಿ ಬೇಕಿರುವುದು "ಸರ್ವಧರ್ಮ ಸಮಾನತ್ವ, ಸ್ವದೇಶಿ, ಮತ್ತು ಸ್ಪರ್ಶಭಾವನಾ" ಎಂಬ 3 ತತ್ವಗಳು. ನಮ್ಮ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಗಾಂಧೀಜಿ 1920 ಆಗಸ್ಟ್ 19ರಂದು ಅಸಹಕಾರ ಚಳವಳಿ ಸಮಯದಲ್ಲಿ, ಮತ್ತೆ 1927 ಅಕ್ಟೋಬರ್ 26ರಂದು ಖಾದಿ ಪ್ರಚಾರ ಯಾತ್ರೆಯಲ್ಲಿ, 1934ರ ಫೆಬ್ರವರಿ 24ರಿಂದ 27ರ ತನಕ ಅಸ್ಪೃಶ್ಯತಾ ನಿವಾರಣಾ ಯಾತ್ರೆಯಲ್ಲಿ, ಉಪದೇಶಿಸಿದ್ದು ಇವನ್ನೆ. ಇವು ಇಂದಿಗೂ ಪ್ರಸ್ತುತವಾಗಿವೆಯಲ್ಲವೆ?.

**ಅಹಿಂಸೆ ಮತ್ತು ಸಮಭಾವದ ಬೆಳಕಾಗಿ**

ಈಗಿನ ಸನ್ನಿವೇಶದಲ್ಲಿ ಹಿಂಸೆ, ಕೋಮು ವೈಷಮ್ಯ ಹಾಗೂ ಜಾತೀಯತೆ ಸಮಾಜವನ್ನು ಕಾಡುತ್ತಿರುವ ಪಿಡುಗುಗಳಾಗಿವೆ. ಪ್ರಸ್ತುತ ಅತ್ಯಂತ ಅಗತ್ಯವಾಗಿ ನಮಗೆಲ್ಲರಿಗೂ ಅರ್ಥವಾಗಬೇಕಿರುವುದು ಗಾಂಧೀಜಿ ಬೋಧಿಸಿದ ಅಹಿಂಸೆ ಹಾಗೂ ಸರ್ವಧರ್ಮಸಮಭಾವದ ಮಾರ್ಗವಾಗಿದೆ. ಗಾಂಧೀಜಿಯವರ ದೃಷ್ಟಿಯಲ್ಲಿ ಎಲ್ಲಾ ಮತ-ಧರ್ಮ-ಪಂಥಗಳು ನದಿ-ತೊರೆಗಳಿದ್ದಂತೆ. ನದಿಗಳು ಬೇರೆ ಬೇರೆ ಹೆಸರುಗಳನ್ನು ಹೊಂದಿದ್ದರೂ ನೀರು ಒಂದೆ. ಎಲ್ಲಾ ನದಿಗಳ ನೀರೂ ಶೀತಲವಾಗಿಯೇ ಇರುವುದು. ನೀರಿನ ಗುಣ ಲಕ್ಷಣಗಳು ಒಂದೇ ತೆರನಾದವು. ಹಾಗೆಯೇ ಎಲ್ಲಾ ಧರ್ಮಗಳ ಸತ್ವವೂ ಕೂಡಾ ಭಗವಂತ, ಸತ್ಯ, ಶಾಂತಿ, ದಯೆಗಳಿಂದ ಕೂಡಿರುವ ನೀರಿನಂತೆ. ಕೊನೆಗೆ ಎಲ್ಲಾ ನದಿ-ತೊರೆಗಳ ನೀರು ಸಾಗರವನ್ನು ಸೇರುವಂತೆ ಮತ ಧರ್ಮಗಳು ಆಧ್ಯಾತ್ಮದ ಮತ್ತು ಮಾನವೀಯತೆಯ ಸಾಗರವನ್ನು ಸೇರುತ್ತವೆ.

ಎಲ್ಲಾ ಧರ್ಮಗಳು ಮಾನವತೆ ಎಂಬ ಸುಂದರ ತೋಟದಲ್ಲಿರುವ ಸುಂದರವಾದ ಬಹುವಿಧದ ಪುಷ್ಪಗಳು. ಯಾವ ಒಂದು ಧರ್ಮವೂ ಇನ್ನೊಂದಕ್ಕಿಂತ ಕೀಳೂ ಅಲ್ಲ ಮೇಲೂ ಅಲ್ಲ. ನಮ್ಮ ಧರ್ಮ ನಮಗೆ ಶ್ರೇಷ್ಠವಾದರೂ ಬೇರೆ ಧರ್ಮಗಳು ಕನಿಷ್ಠವಲ್ಲ ಎಂಬ ಅರಿವು ಅತ್ಯಗತ್ಯ. ಎಲ್ಲಾ ಧರ್ಮಗಳೂ ದೈವದತ್ತವೇ ಮತ್ತು ಒಳ್ಳೆಯದೇ ಆಗಿರುತ್ತವೆ. ಆದರೆ ಬರಬರುತ್ತಾ ನಾವೇ ನಮ್ಮ ಸ್ವಾರ್ಥದಿಂದ ಧರ್ಮಗಳನ್ನು ನಮಗೆ ಬೇಕಾದಂತೆ ಹಾಳು ಮಾಡಿರುವುದರಿಂದ ಸಮಸ್ಯೆಗಳು

ಉಂಟಾಗಿವೆ ಎಂಬ ಪ್ರಶ್ನೆಯೂ ಗಾಂಧೀಜಿಯಿಂದ ದೊರೆಯುವ ಕಾರಣ ಸತ್ಯ ಮತ್ತು ಅಹಿಂಸಾ ಮಾರ್ಗದಿಂದ ಸಮಭಾವವನ್ನು ಸಾಧಿಸಬಹುದು.

ಸತ್ಯ ಮತ್ತು ಅಹಿಂಸೆ ಮನಸ್ಸು, ಯೋಚನೆ, ಮಾತು ಮತ್ತು ಕೆಲಸಗಳಲ್ಲಿ ಸ್ಥಿರವಾಗಿರುವಾಗ ನಾವು ಏನನ್ನಾದರೂ ಸಾಧಿಸಬಹುದು. ಅಂತಹ ಸಾಧನೆಯೂ ಲೋಕಕ್ಕೆ ಉಪಯೋಗಿಯಾಗಿ ಸುಸ್ಥಿರವಾಗಿ ಬಹುಕಾಲ ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಗಾಂಧೀಜಿಯ ಅಹಿಂಸಾ ತತ್ವವನ್ನು ಪರಾಮರ್ಶೆ ಮಾಡಿದಲ್ಲಿ ಹಿಂಸೆಯು ಎಂದಿಗೂ ಗೆದ್ದಿಲ್ಲ ಮತ್ತು ಅಹಿಂಸೆಯು ಎಂದಿಗೂ ಸೋತಿಲ್ಲ ಎಂಬ ವಿಚಾರವು ಅರ್ಥವಾಗುತ್ತದೆ. ಅಹಿಂಸಾ ಮಾರ್ಗವನ್ನು ಟೀಕಿಸುವವರೂ ಹಿಂಸೆಯು ಹುಟ್ಟು ಹಾಕುವ ಹಿಂಸೆ-ಪ್ರತಿಹಿಂಸೆಗಳ ಸರಣಿಗಳನ್ನು ಶಮನ ಮಾಡಲು ಬೇಕಿರುವುದು ಪ್ರೀತಿ, ವಿಶ್ವಾಸ, ದಯೆ, ಸಹಕಾರಗಳ ಸಹಿತವಾದ ಅಹಿಂಸೆ ಎಂಬ ವಿಚಾರವನ್ನು ಮನಗಾಣುತ್ತಾರೆ. ತಂಟೆ, ತಕರಾರು, ಗಲಾಟೆ, ಹೊಡೆದಾಟ, ನೋವು, ಆಕ್ರಂದನ, ಆರ್ಥನಾದ, ಹಸಿವು, ಕಣ್ಣೀರು, ರಕ್ತಪಾತಗಳಿಂದ ಮುಕ್ತವಾದ ಸಮಾಜದ ನಿರ್ಮಾಣವು ಅಹಿಂಸೆಯಿಂದ ಮಾತ್ರ ಸಾಧ್ಯವೆಂದು ಎಲ್ಲರಿಗೂ ಒಂದಲ್ಲ ಒಂದು ಸಲವಾದರೂ ಅನ್ನಿಸಿರುತ್ತದೆ. ಇದು ಗಾಂಧೀ ವಿಚಾರಧಾರೆ ಹಾಗೂ ಗಾಂಧೀ ಮಾರ್ಗದ ಬಹುದೊಡ್ಡ ಶಾಂತಿ ಸಂದೇಶವಾಗಿದೆ.

**ರಚನಾತ್ಮಕ ಕಾರ್ಯತಂತ್ರ**

ಅರ್ಥಪೂರ್ಣವಾದ ಸ್ವಾತಂತ್ರ್ಯಕ್ಕಾಗಿ ಮತ್ತು ಸರ್ವೋದಯ ಸಮಾಜಕ್ಕಾಗಿ ಗಾಂಧೀಜಿ 1941ರಲ್ಲಿ ರೂಪಿಸಿದ್ದ 18 ಅಂಶಗಳ ರಚನಾತ್ಮಕ ಕಾರ್ಯಕ್ರಮವು ಇಂದು ವಿಶ್ವಸಂಸ್ಥೆ ಹೇಳುತ್ತಿರುವ ಸುಸ್ಥಿರ ಅಭಿವೃದ್ಧಿಗಾಗಿನ ಸಹಸ್ರ ಮಾನದ ಯೋಜನೆಗಳಿಗಿಂತಲೂ ಉತ್ತಮವೆನಿಸಿವೆ. ಈ 18 ಅಂಶಗಳಲ್ಲಿ ಮೊದಲಿನದ್ದು ಕೋಮುಸೌಹಾರ್ದ ಮತ್ತು ಭಾವೈಕ್ಯತೆ, ನಂತರ ಕ್ರಮವಾಗಿ : ಅಸ್ಪೃಶ್ಯತೆಯ ನಿವಾರಣೆ ಮತ್ತು ಸಾಮಾಜಿಕ ಸಮಾನತೆ, ಮದ್ಯವರ್ಜನ, ಮಾದಕ ವ್ಯಸನಗಳಿಂದ ಮುಕ್ತಿ, ಖಾದೀ ಮತ್ತು ಸ್ವಸಹಾಯ, ಗ್ರಾಮೀಣ ಕೈಗಾರಿಕೆ, ಗ್ರಾಮೀಣ ಅಭಿವೃದ್ಧಿ, ನೈರ್ಮಲ್ಯ, ನಯಿತಾಲೀಮ್, ಬುನಿಯಾದಿ ಶಿಕ್ಷಣ, ವಯಸ್ಕರ ಶಿಕ್ಷಣ, ಮಹಿಳಾ ಸಬಲೀಕರಣ, ಸ್ವಚ್ಛತೆ ಮತ್ತು ಸ್ವಾಸ್ಥ್ಯ ಶಿಕ್ಷಣ, ಪ್ರಾದೇಶಿಕ ಭಾಷೆ ಮತ್ತು ಮಾತೃ ಭಾಷಾಭಿವೃದ್ಧಿ, ರಾಷ್ಟ್ರೀಯ ಭಾಷಾಭಿವೃದ್ಧಿ, ಆರ್ಥಿಕ ಸಮಾನತೆ, ರೈತರ ಕಲ್ಯಾಣ, ಕಾರ್ಮಿಕರ ಕಲ್ಯಾಣ, ಆದಿವಾಸಿಗಳ ಕಲ್ಯಾಣ, ಕುಷ್ಠ ರೋಗಿಗಳ ಸೇವೆ (ರೋಗಿಗಳ ಸೇವೆ), ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಇವೇ ಮುಂತಾದ ಬಹು ಆಯಾಮಗಳ ಯೋಜನೆಗಳಿಗೆ ಆ ಕಾಲದಲ್ಲೇ ವೈಚಾರಿಕ ಸ್ಪಷ್ಟತೆಯೂ ಇತ್ತು. ನಂತರ 1946ರಲ್ಲಿ ಕೃಷಿಗೆ ಪೂರಕವಾದ ಗೋ ಸೇವೆಯನ್ನೂ ಗಾಂಧೀಜಿ ಸೇರಿಸಿದ್ದರು. ವಿಶೇಷವಾಗಿ ಈ ಕಾರ್ಯಕ್ರಮಗಳ ಅಡಿಯಲ್ಲಿ ಅವರು ವಿದ್ಯಾರ್ಥಿಗಳಿಗೆ ಕೊಟ್ಟಿದ್ದ ಪ್ರಮುಖ ಸೂಚನೆಗಳು ಇಲ್ಲಿವೆ.

- ನಮ್ಮ ತ್ರಿವರ್ಣಧ್ವಜದ ಸಂದೇಶವನ್ನು ಅರಿತುಕೊಂಡು ಕೋಮು ದ್ವೇಷವನ್ನು ಮತ್ತು ಅಸ್ಪೃಶ್ಯತೆಯನ್ನು ಹೃದಯದಿಂದಲೇ ತೆಗೆದು ಹಾಕುವಂತಹ ಮಾನವೀಯತೆಯನ್ನು ಬೆಳೆಸಿಕೊಳ್ಳಿ.
- ನಿಮ್ಮನ್ನು ನೀವು ಅನ್ಯರಿಗಿಂತ ಮೇಲೆಂದು ಅಥವಾ



ಕೀಳೆಂದು ಭಾವಿಸಿಕೊಳ್ಳಬೇಡಿ. ಹಾಗೆಯೆ ನಿಮ್ಮ ಧರ್ಮವೂ ಇತರ ಧರ್ಮಗಳಿಗಿಂತ ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಸಮಾನತೆಯ ವಿಶ್ವಪ್ರಜ್ಞೆ ಬೆಳೆಸಿಕೊಳ್ಳಿ, ಮತ್ತೆ ಆ ಅರಿವಿನ ಪ್ರಸಾರ ಮಾಡಿ.
- ನೆರೆಹೊರೆಯವರು ಕಷ್ಟದಲ್ಲಿದ್ದಾಗ ಸ್ಪಂದಿಸಿ. ಗಾಯವಾಗಿದ್ದರೆ ಅಥವಾ ಅನಾರೋಗ್ಯವಿದ್ದರೆ ಸೂಕ್ತ ಪ್ರಥಮ ಚಿಕಿತ್ಸೆ ಕೊಟ್ಟು, ವೈದ್ಯಕೀಯ ಉಪಚಾರ ಕೊಡಿಸಿ ಆರೈಕೆ ಮಾಡಿ.
- ಸ್ವಚ್ಛತಾ ಕೆಲಸವನ್ನು ಮಾಡಿ, ನೈರ್ಮಲ್ಯವನ್ನು ಕಾಪಾಡಿ.
- ಹಳ್ಳಿ-ಹಳ್ಳಿಗಳಲ್ಲಿ, ಕೇರಿ-ಕೇರಿಗಳಲ್ಲಿ, ಪಟ್ಟಣಗಳಲ್ಲಿ ಸದ್ಭಾವನೆಯನ್ನು ಮೂಡಿಸಿ.
- ಶರೀರ ಶ್ರಮವು ಬಲು ಶ್ರೇಷ್ಠವಾದದ್ದು. ಕಾಯಕ ಪ್ರಜ್ಞೆಯನ್ನು ರೂಢಿಸಿಕೊಳ್ಳಿ, ಶರೀರಶ್ರಮದಿಂದ ಆಹಾರವನ್ನು ಸಂಪಾದಿಸಿ. ಅನ್ನದ ಸಾರ್ಥಕ್ಯವನ್ನು ಕಂಡುಕೊಳ್ಳಿ.
- ಮಕ್ಕಳಿಗೆ ಮತ್ತು ಶಿಕ್ಷಣವಂಚಿತ ವಯಸ್ಕರಿಗೆ ಶಿಕ್ಷಣ ಕೊಡಿಸಿ. ಕಲಿತದ್ದನ್ನು ಕಲಿಸಿ.
- ಏನೇ ಹೊಸತನ್ನು ಕಲಿತರೂ ಅದನ್ನು ಮಾತೃಭಾಷೆಗೆ ಸರಳವಾಗಿ ಅನುವಾದ ಮಾಡಿ ಹಳ್ಳಿಗಳಿಗೂ ತಲುಪಿಸಿ.
- ಗುಣ ನಡತೆಯನ್ನು ಉತ್ತಮ ಪಡಿಸಿಕೊಳ್ಳಿ, ಮಹಿಳೆಯರನ್ನು ಗೌರವಿಸಿ, ಮತ್ತು ಸಹಪಾಠಿ ವಿದ್ಯಾರ್ಥಿನಿಯರಿಗೆ ತೊಂದರೆ ಕೊಡದೆ ಸರಿಯಾಗಿ ವರ್ತಿಸಿ.


**ಈ ಉಪದೇಶಗಳು ಇಂದಿಗೆ ಹೆಚ್ಚು ಪ್ರಸ್ತುತವಾಗಿವೆಯಲ್ಲವೆ?**

ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ಅನ್ನ, ಬಲ, ಜ್ಞಾನ, ಪ್ರೇಮ ಮತ್ತು ಅರ್ಥದ ಸಾರ್ಥಕ್ಯವನ್ನು ಎಲ್ಲರ ಅಭ್ಯುದಯವೇ ಪರಮ ಗುರಿಯಾಗಿರುವ ಸರ್ವೋದಯದ ಅರಿವಿನೊಂದಿಗೆ ಸಾಧಿಸಬೇಕಾದದ್ದು ಇಂದಿನ ಅಗತ್ಯವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಯಾವುದೇ ರೀತಿಯ ವೈಭವೀಕರಣವಿಲ್ಲದೆ ಗಾಂಧಿ ಉಪದೇಶಗಳ ಬೆಳಕಲ್ಲಿ ಗಾಂಧೀ ಮಾರ್ಗವನ್ನು ಇಂದಿನ ಅಗತ್ಯತೆಗಳಿಗನುಸಾರವಾಗಿ ಅನ್ವೇಷಿಸಿ, ಅನ್ವಯಮಾಡಿಕೊಂಡು ಅನುಸರಿಸಿದರೆ ಗಾಂಧೀಜಿಯ ಪ್ರಸ್ತುತತೆ ನಮ್ಮೆಲ್ಲರ ಅನುಭವಕ್ಕೆ ನಿಲುಕೀತು ಎಂಬ ಅನಿಸಿಕೆ ನನ್ನದು.





# ಮತ್ತೆ ನೆನಪಾಗುತ್ತಿರುವ ಗಾಂಧಿ



ಡಿ.ಎಸ್. ನಾಗಭೂಷಣ್

**"ನಮ್ಮ ನಡುವಿನ ಪ್ರಖರ ಚಿಂತಕರೂ ಹಾಗೂ ವಿಮರ್ಶಕರೂ ಆಗಿರುವ ಡಿ.ಎಸ್.ನಾಗಭೂಷಣ ಅವರು ಕಳೆದ ನಲವತ್ತು ವರ್ಷಗಳಿಂದ ಲೋಹಿಯಾ, ಗಾಂಧಿ, ಅಂಬೇಡ್ಕರ್ ಮತ್ತು ಮಾರ್ಕ್ಸ್ ಮುಂತಾದವರನ್ನು ಅರ್ಥೈಸುತ್ತಾ; ವಿಶ್ಲೇಷಿಸುತ್ತಾ ಬಂದವರು. ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲಾ ಬಿಕ್ಕಟ್ಟು ಮತ್ತು ಸಂಕಟಗಳಿಗೆ ಗಾಂಧಿ ಚಿಂತನೆಗಳಿಂದ ಮಾತ್ರ ಪರಿಹಾರ ಎಂದು ನಂಬಿರುವ ಅವರು ಗಾಂಧೀಜಿಯ ಪ್ರಸ್ತುತತೆಯ ಕುರಿತಾಗಿ ಹೆಚ್ಚು ಹೆಚ್ಚು ಮಾತನಾಡುತ್ತಾ ಬರೆವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ಗಾಂಧಿ ಕುರಿತ ಅವರ ಲೇಖನವೊಂದರ ಸಂಕ್ಷಿಪ್ತ ಭಾಗವನ್ನು ಇಲ್ಲಿ ನೀಡಲಾಗಿದೆ."**

ನಮ್ಮ ಪುರಾತನರೊಬ್ಬರು ನಮ್ಮ ಸದ್ಯದ ಬದುಕಿನ ರೀತಿ ನೀತಿಗಳನ್ನು ನೋಡುವ ಕುತೂಹಲದಿಂದ ಈಗ ನಮ್ಮ ಮಧ್ಯೆ ಬಂದಿಳಿದರೆನ್ನಿ. ಅವರು ಆಶ್ಚರ್ಯ ಪಡುವುದು, ಇವುಗಳಲ್ಲಿ ಯಾವುದನ್ನು ಕಂಡು?, ನಮ್ಮ ದಂತ ವೈದ್ಯರ ಕೌಶಲ್ಯ-ಪರಿಣಿತಿಗಳನ್ನೋ, ಅಥವಾ ನಮ್ಮ ಹಲ್ಲುಗಳ ವ್ಯಾಪಕ ಹುಳುಕುತನವನ್ನೋ? ನಮ್ಮ ಸಾರಿಗೆ-ಸಾಧನಗಳ ವೇಗ ವೈವಿಧ್ಯವನ್ನೋ ಅಥವಾ ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗಿ ಬರಲು ತೆಗೆದುಕೊಳ್ಳುವ ಕಾಲ ಹಾಗೂ ಪಡುವ ಪಾಡನ್ನೋ?", ನಮ್ಮ ಔಷಧ ಪದ್ಧತಿಯ ವೈವಿಧ್ಯಮಯ ಆವಿಷ್ಕಾರಗಳನ್ನೋ?, ಅಥವಾ ಆಸ್ಪತ್ರೆಗಳಲ್ಲಿನ ಜನ-ಜಂಗುಳಿಯನ್ನೋ?, ಚಂದ್ರನ ಮೇಲೆ ಕಾಲಿಡುವಂತಹ ನಮ್ಮ ವೈಜ್ಞಾನಿಕ ಸಾಮರ್ಥ್ಯವನ್ನೋ?, ಅಥವಾ ಕೆಲಸ ಮಾಡಬಯಸುವ ಜನರಿಗೆ ಉದ್ಯೋಗ ಒದಗಿಸಿಕೊಡಲಾಗದ ನಮ್ಮ ತಾಂತ್ರಿಕ ಅಸಾಮರ್ಥ್ಯವನ್ನೋ? ನಮ್ಮ ಯಂತ್ರಗಳ ದಕ್ಷತೆಯನ್ನೋ? ಅಥವಾ ನಮ್ಮ ಇಡೀ ವ್ಯವಸ್ಥೆಯ ಅದಕ್ಷತೆಯನ್ನೋ?.

ಈ ಪ್ರಶ್ನೆಯನ್ನು ಕೇಳಿದಾತ ಶತಮಾನದ ಮಧ್ಯಭಾಗದಲ್ಲಿ ತನ್ನ 'ಸಣ್ಣದು ಸುಂದರ' (small is Beautiful) ಎಂಬ ಬಹು ಆಯಾಮಗಳ ಆರ್ಥಶಾಸ್ತ್ರೀಯ ಕೃತಿಯ ಮೂಲಕ ವಿಶ್ವದ ಗಮನ ಸೆಳೆದಿದ್ದ ಜರ್ಮನಿಯ ಅರ್ಥಶಾಸ್ತ್ರಜ್ಞ ಶೂಮಾಕರ್, ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳ ನಿರಂತರ ಅನ್ವಯಗಳನ್ನಾಧರಿಸಿದ ಬೃಹತ್ ಯಾಂತ್ರಿಕ ಉತ್ಪಾದನೆಯ ಮೂಲಕ ಸದಾ ಏರುತ್ತಲೇ ಹೋಗುವ ಜೀವನ ಮಟ್ಟದ



downloaded from: www.kpscvaani.com



ಆದರ್ಶವನ್ನು ತನ್ನ ಸ್ಫೂರ್ತಿ ಶಕ್ತಿಯನ್ನಾಗಿ ಮಾಡಿಕೊಂಡಿರುವ ಪ್ರಚಲಿತ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುತ್ತಾ, ಆತ ಕೇಳಿದ ಪ್ರಶ್ನೆಯಿದು. ಸುಮಾರು ಮೂವತ್ತೈದು ವರ್ಷಗಳ ಹಿಂದೆ ವಾರಣಾಸಿಯ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಶೂಮಾಕರ್ ನೀಡಿದ ಗಾಂಧಿ ಸ್ಮಾರಕ ಉಪನ್ಯಾಸದ ಭಾಗವಾಗಿ ಕೇಳಲಾದ ಈ ಪ್ರಶ್ನೆ ಇಂದೂ ಪ್ರಸ್ತುತವೆನಿಸುವುದಿಲ್ಲವೆ? ಅಥವಾ ಅಂದಿಗಿಂತ ಇಂದು ಪ್ರಸ್ತುತವೆನಿಸುವುದೋ?.

ಆಧುನಿಕತೆಯ ಅರ್ಥದ ಮೂಲ ನೆಲೆಗಳನ್ನು ಗಮನಿಸಿದರೆ, ಗಾಂಧೀಜಿ ಆಧುನಿಕರಲ್ಲಿ ಆಧುನಿಕರು, ಅತ್ಯಾಧುನಿಕರು ಎಂಬುದು ಗೊತ್ತಾಗುತ್ತದೆ. ಯುರೋಪಿನ ಹದಿನೈದನೆಯ ಶತಮಾನದ ಉಳಿಗಮಾನ್ಯ ವ್ಯವಸ್ಥೆ ಜನತೆಯ, ನಿರ್ದಿಷ್ಟವಾಗಿ ಭಾರತದ ಸಮಸ್ತ ಜನತೆಯ ಲೌಕಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗಳೆರಡಕ್ಕೂ ಮಾರಕವಾಗುವುದೆಂದು ಅವರು ವಿಶ್ಲೇಷಿಸಿದರು. ಅದಕ್ಕಾಗಿ ಅಲ್ಪ ಸಂಖ್ಯಾತ ಉಳ್ಳವರ, ಪ್ರತಿಷ್ಠರ ಅಧಿಕಾರ ಹಂಚಿಕೆಯ ಸಂಧಾನ ವೇದಿಕೆ ಮಾತ್ರವಾಗಿದ್ದ ಕಾಂಗ್ರೆಸ್ಸನ್ನು ರೈತ ಕೂಲಿಕಾರರು, ಅಸ್ಪೃಶ್ಯರು ಮತ್ತು ಮಹಿಳೆಯರನ್ನೂ ಕೂಡಿಸಿಕೊಂಡು ಸಮಸ್ತ ಭಾರತೀಯರ ಆತ್ಮ ಗೌರವದ ಆಳವು– ಉಳಿವುಗಳ ಪ್ರಶ್ನೆಯನ್ನಾಧರಿಸಿದ, ಜನತಾ ಆಂದೋಲನವನ್ನಾಗಿ ಪರಿವರ್ತಿಸಿದರು. ಈ ಪರಿವರ್ತನೆಯ ಪ್ರಯತ್ನದಲ್ಲಿ, ಜಡಗೊಂಡಿದ್ದ ಎಲ್ಲ ಆರ್ಥಿಕ ಸಾಮಾಜಿಕ– ಧಾರ್ಮಿಕ ನಿಲುವುಗಳನ್ನೂ, ಸಂರಚನೆಗಳನ್ನೂ ಪ್ರಶ್ನಿಸಿದರು ಮತ್ತು ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ಅವನ್ನು ಪುನರ್ರೂಪಿಸಿದರು. ಹೀಗೆ, ಆಧುನಿಕತೆಯ ಅರ್ಥವನ್ನು ಅದರ ಭೌತಿಕ ಆವರಣದಾಚೆಗೆ ತಂದು, ವಿಶ್ವದ ನೆಲೆಯಲ್ಲಿ ಒಂದು ಸಮಾನತೆಯ ಮೌಲ್ಯವಾಗಿ ಕಂಡರಿಸಿದರು.

ಪಶ್ಚಿಮದ ಯಂತ್ರ ನಾಗರೀಕತೆಯನ್ನು ಪ್ರತಿನಿಧಿಸುವ ಆಧುನಿಕತೆಯು ಸಾರ್ವತ್ರಿಕವಾಗಿ ಮನುಷ್ಯನ ಅಸ್ತಿತ್ವದ ಘನತೆಯನ್ನೇ, ನಿರ್ದಿಷ್ಟವಾಗಿ ಭಾರತೀಯನ ಅಸ್ಮಿತೆಯನ್ನೇ ಬುಡಮೇಲು ಗೊಳಿಸುವಂತಹುದು ಎಂಬುದನ್ನವರು ಅರಿತಿದ್ದರು. 1908 ಹೊತ್ತಿಗೇ, ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣಿಸುತ್ತಿದ್ದಾಗ ಬರೆದ ಗಾಂಧೀವಾದದ 'ಬೈಬಲ್' ಎಂದೇ ಪರಿಗಣಿಸಲ್ಪಟ್ಟಿರುವ 'ಹಿಂದ್ ಸ್ವರಾಜ್'ನಲ್ಲಿಯೇ ಅದನ್ನವರು ವಿವರಿಸಿದ್ದರು. ಆಗ ಅವರಿಗೆ ಭಾರತದ ಸ್ವಾತಂತ್ರ್ಯಾಂದೋಲನದ ಮಂಚೂಣಿಯಲ್ಲಿ ತಾವು ನಿಲ್ಲಬೇಕಾಗುತ್ತದೆ ಎಂಬುದರ ಕಲ್ಪನೆಯೂ ಇರಲಿಲ್ಲ. ಹಾಗಾಗಿಯೇ ಅವರು ಆ ಕೃತಿಯಲ್ಲಿ ನಾಗರೀಕತೆ ಎಂದರೇ, ಶರೀರ ಸುಖ ವರ್ಧನೆಯಷ್ಟೇ ಅದರ ಗುರಿಯಾಗಿರುವುದರಿಂದ ಅದೊಂದು ರೋಗವಾಗಿದೆ ಎಂದು ಗುರುತಿಸಿದ್ದರು. ಆದರೆ ಸ್ವಾತಂತ್ರ್ಯಾಂದೋಲನದ ಮಧ್ಯದಲ್ಲಿ, ದೇಶವನ್ನು ಅದರೆಲ್ಲ ನೆಲೆಗಳಲ್ಲಿ ಪುನಾರಚಿಸುವ ಅಗತ್ಯ ಜವಾಬ್ದಾರಿಗಳು ಮೂಡತೊಡಗಿದಾಗ, ಗಾಂಧೀಜಿ ಪುನಾರಚನೆಯ ಅವಕಾಶದಲ್ಲಿ ಹೊಸ ನಾಗರೀಕತೆಯೊಂದರ ಆಸ್ತಿವಾರದ ಹೊಳಹು ಕಂಡರು. ಅದೇ ಗ್ರಾಮ ಸ್ವರಾಜ್ಯದ ಮೂಲ ಕಲ್ಪನೆ. ಆ ಕಲ್ಪನೆಯ ವಿಕಾಸದ ಹಿನ್ನೆಲೆಯಲ್ಲೇ ಅವರು ತಮ್ಮ ಸಾವಿನ ದಿನಗಳ ಹೊತ್ತಿಗೆ, ಯಂತ್ರ ಪರಿಕಲ್ಪನೆ ಕುರಿತಂತೆ 'ಶರೀರವೆಂಬುದೇ ಒಂದು ಯಂತ್ರ, ಹಾಗಾಗಿ ನಾನು ಯಂತ್ರ ವಿರೋಧಿಯಲ್ಲ. ಮನುಷ್ಯ ಆತ್ಮ ಕಳೆದುಹೋಗುವಂತಹ ಯಂತ್ರ ವ್ಯವಸ್ಥೆಯನ್ನು ವಿರೋಧಿಸುತ್ತೇನೆ. ವಾಸ್ತವವಾಗಿ, ನಮ್ಮ ಹಳ್ಳಿಗಳ ಪ್ರತಿ ಮನೆಯಲ್ಲೂ ಹಬೆಯಿಂದಲೋ, ವಿದ್ಯುತ್ತಿನಿಂದಲೋ ಚಲಿಸಬಲ್ಲ ಯಂತ್ರಗಳ ಅನುರಣವನ್ನು ನಾನು ಕೇಳಬಯಸುತ್ತೇನೆ' ಎಂದು ಹೇಳುವಷ್ಟು ವಾಸ್ತವಾದಿಯಾಗಿದ್ದರು.

ಗಾಂಧೀಜಿ ಕಲ್ಪಿಸಿಕೊಂಡಿದ್ದ ಹೊಸ ನಾಗರೀಕತೆಗೆ ಭಾರತೀಯ ಸಂಸ್ಕೃತಿಯೇ ಮೂಲ ದ್ರವ್ಯವಾಗಿತ್ತು, ಅದನ್ನು ಅವರು 'ದೇಶಿ' ಎಂದು ಕರೆದರು. ಪ್ರತಿಯೊಂದು ಸಮುದಾಯವೂ ತಾನು ವಾಸಿಸುವ ಪ್ರದೇಶದ ಧಾರಣ ಶಕ್ತಿ (Carrying power)ಗೆ ತಕ್ಕಂತೆ ಬದುಕುವ ಕ್ರಮವದು. ಭಾರತೀಯರು ಬಹು ಪುರಾತನ ಕಾಲದಿಂದಲೂ, ಸುತ್ತಲಿನ ಜನ ಮತ್ತು ನಿಸರ್ಗದೊಂದಿಗೆ ಸಮರಸದಲ್ಲಿರುವ ಇಂತಹುದೊಂದು ಜೀವನ ಕ್ರಮವನ್ನು ರೂಪಿಸಿಕೊಂಡು, ತಮ್ಮ ನೆಮ್ಮದಿಯಲ್ಲಿ ತಾವಿದ್ದರು. ಅವರು ಪರಾಕ್ರಮಣಕ್ಕೆ ಒಳಗಾಗುತ್ತಾ ಬಂದಿದ್ದೇ ಈ ಜೀವನ ಕ್ರಮವನ್ನು ಉಲ್ಲಂಘಿಸಿ, ಪರಾಕರ್ಷಣೆಗಳಿಗೆ ತಮ್ಮನ್ನು ತಾವು ತೆತ್ತುಕೊಳ್ಳುತ್ತಾ ಹೋದುದರ ದೌರ್ಬಲ್ಯದಿಂದಾಗಿ. ಇದರ ಪರಿಣಾಮವಾಗಿಯೇ ಈ ಜೀವನ ಕ್ರಮದ ಆಧಾರಗಳಾಗಿದ್ದ ಉತ್ಪಾದನಾ ತಂತ್ರಕೌಶಲ್ಯಗಳು ಸಾಮಾಜಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಪ್ರತೀಕಗಳು ವಿಕೃತಿಗೊಂಡದ್ದು ಮತ್ತು ಆ ಮೂಲಕ ಎಲ್ಲ ಸಾಂಸ್ಥಿಕ ಸ್ವಾಯತ್ತತೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕಳೆದುಕೊಂಡದ್ದು. ಹಾಗಾಗಿ, ಈಗ ಸ್ವಾತಂತ್ರ್ಯವೆಂದರೆ ನಮ್ಮ ಅಗತ್ಯಗಳಿಗೆ ಒಂದು ಮಿತಿ ಹಾಕಿಕೊಳ್ಳುವುದು ಮತ್ತು ಆ ಮಿತಿಯನ್ನು ತನ್ನ ಸಮುದಾಯದ ಒಟ್ಟಾರೆ ಒಳಿತಿನ ಒರೆಗಲ್ಲಿನಲ್ಲಿ ನಿರ್ಧರಿಸಿಕೊಳ್ಳುವ ನೈತಿಕತೆಗೆ ಬದ್ಧವಾಗುವುದು ಎಂದೇ ಅರ್ಥ. ಮನುಷ್ಯನ ನೈತಿಕತೆ ವಿಕಾಸಗೊಳ್ಳಬೇಕಾದ್ದು ಈ ನೆಲೆಯಿಂದಲೇ ಎಂದು ಗಾಂಧೀಜಿ ನಂಬಿದ್ದರು. ಅವರ ಪ್ರಕಾರ ಇಂತಹ ನೈತಿಕತೆಯಿಂದ ಹುಟ್ಟಿಯುವ ಸ್ವಾತಂತ್ರ್ಯದ ಲೌಕಿಕ ರೂಪವೇ ಸ್ವರಾಜ್ಯ. "ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ, ಸ್ವಯಂ ನೀತಿಯನ್ನು ಪಾಲಿಸುವವನು, ಇತರರನ್ನು ವಂಚಿಸದವನು, ತಾಯಿ, ತಂದೆ, ಹೆಂಗಸರು, ಮಕ್ಕಳು, ಆಳುಕಾಳು, ನೆರೆಹೊರೆ ಎಲ್ಲರ ಬಗ್ಗೆಯೂ ತನ್ನ ಕರ್ತವ್ಯವನ್ನು ಪಾಲಿಸುವವನು. ಇಂಥವನಿಗೆ ಮಾತ್ರ ಅದು ಲಭ್ಯ. ಇಂತವನು ಎಲ್ಲೇ ಇರಲಿ, ಯಾವ ದೇಶದಲ್ಲೇ ಇರಲಿ, ಅವನು ಯಾವಾಗಲೂ ಸ್ವರಾಜ್ಯದ ಪ್ರಜೆಯೇ. ಇಂತವರು ಎಲ್ಲಿ ಎಷ್ಟು ಜನರಿದ್ದಾರೋ ಅಲ್ಲಿ ಅಷ್ಟು ಸ್ವರಾಜ್ಯ".

ಇಂತಹ ಸ್ವರಾಜ್ಯದ ಕಲ್ಪನೆಯ ಮೂಸೆಯಲ್ಲಿಯೇ ಅವರ 'ದೇಶೀ' ಆಶಯವು ಸ್ವಾತಂತ್ರಾಂದೋಲನವನ್ನು ಕಟ್ಟಿದ ಅಹಿಂಸಾತ್ಮಕ ಸತ್ಯಾಗ್ರಹ, ಹಿಂದೂ ಮುಸ್ಲಿಂ ಏಕತೆ, ಅಸ್ಪೃಶ್ಯತಾ ನಿವಾರಣೆ ಮುಂತಾದ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಒಂದು ಅತ್ಯಂತಿಕ ಗುರಿಯೆಡೆಗೆ ಸಂಘಟಿಸುವ 'ಸ್ವದೇಶಿ' ಎಂಬ ಒಂದು ಚಳುವಳಿಯಾಗಿ ರೂಪು ತಳೆದದ್ದು, ಅದರ ಪರಿಣಾಮ ಸ್ವರೂಪವಾಗಿಯೇ ಗ್ರಾಮ ಸ್ವರಾಜ್ಯದ ಚಿತ್ರ ಮೂಡಿ ನಿಂತದ್ದು, ಗಾಂಧೀಜಿ ಸ್ವದೇಶಿ ಎಂಬುದನ್ನು ಬ್ರಿಟಿಷ್ ವಸಾಹತುಶಾಹಿಯ ಚೇತನವನ್ನು, ಬ್ರಿಟಿಷ್ ಸಾಮಾಜ್ಯ ವಿಸ್ತರಣೆಯ ಪ್ರೇರಕ ಶಕ್ತಿಯಾಗಿದ್ದ ಅಲ್ಲಿನ ಆಧುನಿಕ ಕೈಗಾರಿಕೆಗಳ, ವಿಶೇಷವಾಗಿ ಹತ್ತಿ ಗಿರಣಿಗಳ ಗಣಿಯಾಚೆಯ ಮಾರುಕಟ್ಟೆಯನ್ನು ಅಡಗಿಸುವ ಆರ್ಥಿಕ ಅಸ್ತ್ರವನ್ನಾಗಿ ರೂಪಿಸಿದ್ದರು. ಇನ್ನು ಗ್ರಾಮ ಸ್ವರಾಜ್ಯವನ್ನು ವಸಾಹತುಶಾಹಿಯ ಮುಂದಿನ ಎಲ್ಲ ಅವತಾರಗಳ ಆಕರ್ಷಣೆಗಳಿಂದ ಸ್ವತಂತ್ರ ಭಾರತವನ್ನು ರಕ್ಷಿಸುವ, ಸ್ವಸಂಪೂರ್ಣ ರಾಜಕೀಯ ಅಸ್ತ್ರವನ್ನಾಗಿ ರೂಪಿಸಿದ್ದರು. ತನ್ನ ಅಗತ್ಯಗಳನ್ನು ಸಮುದಾಯದ ವ್ಯವಸ್ಥಿತ ಬದುಕಿಗೆ ಪೂರಕವಾಗಿರುವ ಮಟ್ಟಿಗೆ ಮಾತ್ರ ನಿರೂಪಿಸಿಕೊಂಡು, ಅವನ್ನು ಆದಷ್ಟೂ ಮಟ್ಟಿಗೆ ನೆರೆಹೊರೆಯ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಪೂರೈಸಿಕೊಳ್ಳುವ ಮತ್ತು ಅತ್ಯಗತ್ಯವಾದಾಗ ಮಾತ್ರ ಸಮುದಾಯದ ಹೊರ ಘಟಕಗಳೊಂದಿಗೆ ಹತ್ತಿರದ ಹಳ್ಳಿಯೋ, ಪಟ್ಟಣವೋ, ಸರಕು ಅಥವಾ ಸೇವೆಯನ್ನು ವ್ಯಾಪಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಬದ್ಧವಾದ ವ್ಯವಸ್ಥೆಯದು.

ಹಳ್ಳಿಯನ್ನು ಮೂಲ ಘಟಕವನ್ನಾಗಿ ಹೊಂದಿರುವ ಈ ವ್ಯವಸ್ಥೆ, ನಿಸರ್ಗವನ್ನು ಕೊಳ್ಳೆಹೊಡೆದು ಹೆಚ್ಚುವರಿ ಸರಕು ಉತ್ಪಾದನೆ ಮಾಡಿ, ಜನರ ಬಯಕೆಗಳನ್ನು ಕೆರಳಿಸುವ ಮೂಲಕ ಅನಗತ್ಯ ಮಾರುಕಟ್ಟೆ ಸೃಷ್ಟಿಸುವ, ಹಾಗೂ ಆ ಮೂಲಕ ಮನುಷ್ಯನ ಬದುಕನ್ನು ಅನಗತ್ಯವಾಗಿ ಜಟಿಲಗೊಳಿಸಿ ಅವನನ್ನು ಅಶಾಂತವನ್ನಾಗಿ ಮಾಡುವಂತಹ ಸರಕು ಆರ್ಥಿಕತೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಗಾಂಧೀಜಿ ನಂಬಿದ್ದರು. ಈ ಹಿನ್ನೆಲೆಯಲ್ಲಿ ಅವರು ಒಂದು ಸಮಾಜದ ಭೌತಿಕ ಅಗತ್ಯಗಳು ಹಾಗೂ ಅವುಗಳ ಉತ್ಪಾದನೆ ನಡುವಣ ತಾರ್ಕಿಕ ಸಂಬಂಧವನ್ನು ಕಡಿದು ಹಾಕಿ, ಹೆಚ್ಚುವರಿ ಉತ್ಪಾದನೆಗೆ ಅವಕಾಶ ಮಾಡಿಕೊಡುವ ಯಂತ್ರಗಳನ್ನು, ಸಾಮಾಜಿಕ ಅಗತ್ಯಗಳಗನುಸಾರ ಪುನರ್ವಿನ್ಯಾಸಗೊಳಿಸುವ ಅನಿವಾರ್ಯತೆಯನ್ನು ಮನಗಂಡರು. ಆಗ ಕಣ್ಮುಂದೆ ಬಂದದ್ದೇ ಚರಕ ಸಾಂಪ್ರದಾಯಿಕ ರಾಟೆಯ ಪರಿಷ್ಕೃತ ರೂಪ. ಸಮೂಹ ಉತ್ಪಾದನೆಯನ್ನಾಧರಿಸಿದ ಪಶ್ಚಿಮದ ಸರಕು ಅರ್ಥಶಾಸ್ತ್ರಕ್ಕೆ ಪ್ರತಿಯಾಗಿ, ಸಮೂಹದಿಂದ ಉತ್ಪಾದನೆಯನ್ನು ಆಧರಿಸಿ ಜನತಾ ಅರ್ಥಶಾಸ್ತ್ರವನ್ನು ರೂಪಿಸಲು ಆಧಾರವಾದ ಈ ಚರಕಾ, ಗಾಂಧೀಜಿ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮ ಸ್ವರಾಜ್ಯದ ಕಾರ್ಯಶೀಲತೆಗೆ ಒಂದು ಸಂಕೇತವಾಗುಳಿದಿದೆ. "ಚರಕದ ಮೂಲಕ ಭಾರತ ತನ್ನ ಸಂಕೋಲೆಗಳನ್ನು ಕಿತ್ತೊಗೆಯಲು ಪ್ರಯತ್ನ ಶೀಲವಾಗಿದೆ. ಈ ಪ್ರಯುತ್ನದಲ್ಲಿ ಮಾನವ ಕೋಟಿಯ ವಿಮೋಚನೆಯ ತಿಳುವಳಿಕೆಯೂ ಇದೆ. ಭಾರತದ ಆತ್ಮ ವಿಕಾಸವೂ ಆಗುತ್ತದೆ. ಚರಕದ ದಿವ್ಯ ಸಂಗೀತ, ಆತ್ಮಕ್ಕೆ ಸಾಂತ್ವಾನ, ಅಮೃತ, ನೂಲಲು ಪ್ರಾರಂಭಿಸಿ ನೋಡಿ, ಮನಃಶಾಂತಿಗೆ ಅದೆಷ್ಟು ಸಹಾಯಕ ಎಂದು ತಿಳಿದೀತು. ನಮ್ಮ ಜೀವನದ ಅಸ್ತವ್ಯಸ್ತತೆಗಳೆನ್ನೆಲ್ಲ ಹಾಸುಹೊಕ್ಕು ತಿಳಿಯಾಗಿಸುವ ಶಕ್ತಿ ಆ ನೂಲು ಮತ್ತು ಆ ನೂಲುವ ಕ್ರಿಯೆಯಲ್ಲಡಗಿದೆ. ಸಮಸ್ತ ಜೀವರಾಶಿಯೂ ಅಹಿಂಸೆಯ ಆಧಾರದ ಮೇಲೆಯೇ ನಿಂತಿದೆ. ಚರಕ ಆ ಬೃಹತ್ ಜೀವನಚಕ್ರದ ಸಂಕೇತ".

ಮನುಷ್ಯ ತನ್ನ ದೈವತ್ವವನ್ನು ಕಂಡುಕೊಳ್ಳುವುದೇ ಜೀವನದ ಪರಮೋದ್ದೇಶವೆಂದು ನಂಬಿದ್ದ ಗಾಂಧೀಜಿ, ಅವನು ಈ ದೈವತ್ವದ ಅರಿವಿನಲ್ಲೇ ಸೃಷ್ಟಿಯ ಏಕತೆ ಕಾಣಬಲ್ಲ ಹಾಗೂ ಸರ್ವಸಮತೆಯಲ್ಲಿರಬಲ್ಲನಾದ್ದರಿಂದ, ಅದಕ್ಕೆ ಪೂರಕವಾದ ದುಡಿಮೆಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದೇ ಮನುಷ್ಯ ಧರ್ಮವಾಗಿದೆ ಎಂದು ಪ್ರತಿಪಾದಿಸಿದರು.

ಈ ಹಿನ್ನೆಲೆಯಲ್ಲೇ ಅವರು ನಿಜವಾದ ಅರ್ಥಪೂರ್ಣ ಜೀವನಕ್ಕೆ, ವಿಶೇಷವಾಗಿ ಜನಬಲವೇ ಬಂಡವಾಳವಾಗಿರುವ ಭಾರತದ ಸಂದರ್ಭದಲ್ಲಿ ಯಾವ ಪ್ರಮಾಣದ ಕೈಗಾರಿಕೆ ಸೂಕ್ತ ಎಂಬ ಚರ್ಚೆಗೆ ಉತ್ತರ ನೀಡಿದ್ದು, 'ಮನುಷ್ಯ ಪ್ರಮಾಣ'ದ ಕೈಗಾರಿಕೆಯ ಪ್ರತಿಪಾದನೆಯ ಮೂಲಕ ಮನುಷ್ಯನ ದೇಹ ಮತ್ತು ಆತ್ಮಗಳೆರಡರೊಂದಿಗೆ ಸಮರಸದಲ್ಲಿರಬಹುದಾದ ಇಂತಹ ಯಂತ್ರಗಳಿಂದ ಸಾಮಾಜಿಕವಾಗಿ ಸಜ್ಜಾದ ಗ್ರಾಮಗಳು, ಭಾರತವನ್ನು ಒಂದು ಗ್ರಾಮ ಗಣರಾಜ್ಯವನ್ನಾಗಿ ರೂಪಿಸಿ, ಹೊರಗಿನ ಯಾವುದೇ ತೆರನ ದಾಳಿ, ಹಾಗೂ ಮಿಲಿಟರಿ ದಾಳಿಯೂ ಸೇರಿದಂತೆ, ಅದರ ವಿರುದ್ಧ ಸ್ವಯಂ ರಕ್ಷಣೆ ಒದಗಿಸಬಲ್ಲುದು ಎಂದು ಅವರು ನಂಬಿದ್ದರು. ಆರ್ಥಿಕ ಶಕ್ತಿ ಕೇಂದ್ರಗಳು ಭೌಗೋಳಿಕವಾಗಿ ಹರಡಿ ಹೋಗಿರುವುದರಿಂದ ಯಾವುದೇ ತೆರನ ಅಥವಾ ಪ್ರಮಾಣದ ಶಸ್ತ್ರಾಸ್ತ್ರ ದಾಳಿ ರಾಷ್ಟ್ರವನ್ನು ನಿಶ್ಚೇಷ್ಟಿತಗೊಳಿಸಲಾಗುವುದಿಲ್ಲ ಅಲ್ಲದೆ ಬಡತನವೆಂಬುದು ಸರಕು ಆಧಾರಿತ ಪಶ್ಚಿಮದ ಅರ್ಥಶಾಸ್ತ್ರದ ಆವಿಷ್ಕಾರವಾಗಿದ್ದು, ಜನತಾ ಅರ್ಥಶಾಸ್ತ್ರ ಅದನ್ನು ಕೆಲಸದಿಲ್ಲದಿರುವಿಕೆ ಎಂದು ನಿರೂಪಿಸಿಕೊಂಡು, ಅದರ ಪರಿಹಾರವನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಳ್ಳಬೇಕು, ಇಲ್ಲದೇ ಹೋದರೆ ದೇಶ, ಪರಿಹಾರವಾದಷ್ಟೂ, ಹೆಚ್ಚುತ್ತಾ ಹೋಗುವ ಸರಕು ಅರ್ಥಶಾಸ್ತ್ರದ ರಾಜಕಾರಣ ಸೃಷ್ಟಿಸುವ ನಿರಂತರ ಬಡತನದ ಚಕ್ರಕ್ಕೆ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

> **ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ, ಸ್ವಯಂ ನೀತಿಯನ್ನು ಪಾಲಿಸುವವನು, ಇತರರನ್ನು ವಂಚಿಸದವನು, ತಾಯಿ, ತಂದೆ, ಹೆಂಗಸರು, ಮಕ್ಕಳು, ಆಳುಕಾಳು, ನೆರೆಹೊರೆ ಎಲ್ಲರ ಬಗ್ಗೆಯೂ ತನ್ನ ಕರ್ತವ್ಯವನ್ನು ಪಾಲಿಸುವವನು. ಇಂಥವನಿಗೆ ಮಾತ್ರ ಅದು ಲಭ್ಯ. ಇಂತವನು ಎಲ್ಲೇ ಇರಲಿ, ಯಾವ ದೇಶದಲ್ಲೇ ಇರಲಿ, ಅವನು ಯಾವಾಗಲೂ ಸ್ವರಾಜ್ಯದ ಪ್ರಜೆಯೇ. ಇಂತವರು ಎಲ್ಲಿ ಎಷ್ಟು ಜನರಿದ್ದಾರೋ ಅಲ್ಲಿ ಅಷ್ಟು ಸ್ವರಾಜ್ಯ**





downloaded from: www.kpscvaani.com

ವೈವಿಧ್ಯಮಯ ಆಕರ್ಷಣೆಗಳೊಂದಿಗೆ ಮುನ್ನುಗ್ಗುತ್ತಿದ್ದ ಪಶ್ಚಿಮದ ಯಂತ್ರ ನಾಗರೀಕತೆಯ ಎದುರು, ಅದೂ ಶತಮಾನಗಳ ದಾರಿದ್ರ್ಯದಿಂದ ತಪ್ತವಾಗಿದ್ದ ಭಾರತೀಯ ಸಮಾಜದ ಮಧ್ಯೆ ಇಂತಹ ಅಭಿವೃದ್ಧಿ ಮಾದರಿಯನ್ನಿಡಲು ಯಾರಿಗಾದರೂ ಎಂಟೆದೆಯೇ ಬೇಕು. ಆದರೆ ಗಾಂಧೀಜಿಗೆ ಆಳದ ಸತ್ಯದ ಅರಿವಿತ್ತು. ಅದರ ಕೇಂದ್ರದಿಂದಲೇ ಹೊರಹೊಮ್ಮಿದ ನೈತಿಕ ಸ್ಥೈರ್ಯವೂ ಅವರ ಬೆಂಬಲಕ್ಕಿತ್ತು. ಹಾಗಾಗಿಯೇ ಅವರು ಪಶ್ಚಿಮದ ನಾಗರೀಕತೆ ಬಗ್ಗೆ ಖಚಿತ ಶಬ್ದಗಳಲ್ಲಿ ಹೀಗೆ ಹೇಳಲು ಸಾಧ್ಯವಾಯಿತು. " ಮನುಷ್ಯನಿಗೆ ಒಂದು ಮಟ್ಟದ ಸುಖ-ಸೌಲಭ್ಯಗಳು ಅಗತ್ಯವೇ ನಿಜ. ಆದರೆ ಒಂದು ನಿರ್ದಿಷ್ಟ ಮಟ್ಟದಾಚೆಗೆ ಅವು ಸೌಲಭ್ಯವಾಗುಳಿಯದೇ ಬಂಧನಗಳೇ ಆಗುತ್ತವೆ. ಹಾಗಾಗಿ ಮಿತಿಯಿಲ್ಲದ ಅಗತ್ಯಗಳನ್ನು ಸೃಷ್ಟಿಸಿಕೊಳ್ಳುತ್ತಾ ಮತ್ತು ಅವುಗಳನ್ನು ಪೂರೈಸಿಕೊಳ್ಳುತ್ತಾ ಹೋಗುವ ಆರ್ಥಿಕತೆಯ ಆದರ್ಶವು ಒಂದು ಭ್ರಮೆ ಹಾಗೂ ವ್ಯೂಹದಂತಷ್ಟೇ ನನಗೆ ತೋರುತ್ತದೆ. ಮನುಷ್ಯನ ಭೌತಿಕ ಅಗತ್ಯಗಳ ಪೂರೈಕೆ ವ್ಯವಸ್ಥೆಯ ಭೌತಿಕ ಅಶ್ಲೀಲತೆಯಾಗಿ ಅವನತಿಗೊಳ್ಳುವ ಮುನ್ನ, ಒಂದಲ್ಲ ಒಂದು ಹಂತದಲ್ಲಿ ಪೂರ್ಣಾಂತ್ಯಕ್ಕೆ ಬರಬೇಕು. ಯೂರೋಪಿಯನ್ನರು ತಾವು ಗುಲಾಮರಾಗುತ್ತಿರುವ ಐಷಾರಾಮಗಳ ಭಾರದಡಿಯಲ್ಲಿ ಕುಸಿದು ಹೋಗಬಾರದೆಂದಿದ್ದರೆ ಅವರು ತಮ್ಮ ಜೀವನ ದೃಷ್ಟಿಯನ್ನು ಪುನರ್‌ರೂಪಿಸಿಕೊಳ್ಳಬೇಕು".

ಈ ಮಾತುಗಳನ್ನು ಯೂರೋಪಿಯನ್ನರಾದರೂ ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿ ಸಹಾನುಭೂತಿಯಿಂದ ಕೇಳಿರಬಹುದು. ಆದರೆ ಗಾಂಧೀಜಿಯ ಆಪ್ತ ಶಿಷ್ಯರಲ್ಲೊಬ್ಬರಾದ ರಾಷ್ಟ್ರದ ಪ್ರಥಮ ಪ್ರಧಾನ ಮಂತ್ರಿಯಾದ ಜವಾಹರಲಾಲ್ ನೆಹರೂ ಅವರಿಗೆ, ಇದೆಲ್ಲ ಅಂದಿನ ಜಾಗತಿಕ ಸಂದರ್ಭದಲ್ಲಿ ಅಸಂಗತವೂ ಅಪ್ರಸ್ತುತವೂ ಆಗಿ ಕಂಡಿತು. ಅರ್ಥಶಾಸ್ತ್ರ ಹಾಗೂ ರಾಜಕಾರಣಗಳ ಗುರಿಗಳೆಂದರೆ, ಮನುಷ್ಯನ ಭೌತಿಕ ಅಗತ್ಯಗಳನ್ನು ಪೂರೈಸುತ್ತಾ ಜೀವನ ಮಟ್ಟವನ್ನು ಸುಧಾರಿಸುವುದೇ ಆಗಿದೆ ಎಂಬ 'ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್' ನ ಐರೋಪ್ಯ ಅರ್ಥಶಾಸ್ತ್ರೀಯ ನಂಬಿಕೆಗಳಿಗೆ ಮಾರು ಹೋಗಿದ್ದ ಅವರು, ಆಧುನಿಕ ತಂತ್ರಜ್ಞಾನದ ದಕ್ಷತೆ ಮಾತ್ರ ಭಾರತದ 'ಹಿಂದುಳಿದಿರುವಿಕೆ'ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದೆಂದು ದೃಢವಾಗಿ ನಂಬಿದ್ದರು. ಹಾಗಾಗಿಯೇ ಅವರು 1945 ರಲ್ಲಿ ಗಾಂಧೀಜಿ, ತಮ್ಮಿಬ್ಬರಲ್ಲಿ ದೇಶ ಕಟ್ಟುವ ವಿಷಯದಲ್ಲಿ ಭಿನ್ನಮತ ಹೆಚ್ಚುತ್ತಿದೆಯೆಂಬ ಆತಂಕದಿಂದ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಕಡೆ ಗಮನ ಸೆಳೆದು ತಮಗೆ ಬರೆದ ಪತ್ರಕ್ಕೆ ಉತ್ತರವಾಗಿ, ಸದಾ ಹಿಂದಕ್ಕೆ ನೋಡುವ ಮನೋಧರ್ಮದ ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ಆಧುನಿಕ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಆದರೆ ಐರೋಪ್ಯ ಮಾದರಿಯ ಆಧುನೀಕರಣದ ಅವಸರದಲ್ಲಿದ್ದ ನೆಹರೂಗೆ ತಮ್ಮ ಗುರು ಬಹು ಹಿಂದೆಯೇ, "ನನ್ನ ಆದರ್ಶ ಗ್ರಾಮದಲ್ಲಿ ಅತ್ಯಂತ ಬುದ್ಧಿವಂತ ಮಾನವ ಜೀವಿಗಳಿರುತ್ತಾರೆ. ಸ್ವತಂತ್ರ ಸ್ತ್ರೀ ಪುರುಷರಾಗಿ ಜಗತ್ತಿನ ಮಾನವರೆಲ್ಲರ ಸರಿಸಮಾನರಾಗಿ ಬಾಳುತ್ತಾರೆ. ಅಲ್ಲಿ ಆಧುನಿಕ ಸೌಕರ್ಯಗಳಾದ ಅಂಚೆ,ತಂತಿ, ಸಾರಿಗೆ ಮುಂತಾದವು ಇರುವ ಸಾಧ್ಯತೆಯನ್ನೂ ನಾನು ಊಹಿಸಿಕೊಳ್ಳಬಲ್ಲೆ. ನನ್ನ ಆದರ್ಶ ಗ್ರಾಮ ಅತ್ಯುತ್ತಮ ಸ್ವಚ್ಛತಾ ವ್ಯವಸ್ಥೆ ಹೊಂದಿರುತ್ತದೆ. ಗಾಳಿ ಬೆಳಕು ಧಾರಾಳವಾಗಿರುವಂತೆ ಸ್ಥಳೀಯ ಸಾಮಗ್ರಿಗಳಿಂದ ಕಟ್ಟಲ್ಪಟ್ಟ ಪ್ರತಿ ಕುಟೀರವೂ ಹಿತ್ತಲು, ಕೊಟ್ಟಿಗೆ, ತರಕಾರಿ ಬೆಳೆಯಲು ಜಾಗ ಹೊಂದಿರುತ್ತದೆ. ನಿರ್ಮಲವಾದ ಅಗಲ ರಸ್ತೆಗಳು, ಸರ್ವರಿಗೂ ತೆರದಿರುವ ಬಾವಿಗಳು, ಸರ್ವಧರ್ಮ, ಪ್ರಾರ್ಥನಾ ಮಂದಿರ, ಸಾರ್ವಜನಿಕ ಸಭಾಂಗಣ, ಗೋಮಾಳ, ಸಹಕಾರಿ ಗೋಶಾಲೆ, ಔದ್ಯೋಗಿಕ, ಶಿಕ್ಷಣ ನೀಡುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಸ್ಥಳೀಯ ನ್ಯಾಯ ಪಂಚಾಯ್ತಿ ಇರುತ್ತದೆ..." ಎಂದು ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆ ನಿಜವಾದ ಭಾರತದ ಅವಶೇಷ ಮಾತ್ರಗಳಂತಿರುವ ಸದ್ಯದ ಹಳ್ಳಿಗಳನ್ನು ಆಧರಿಸಿದ್ದಲ್ಲ. ಬದಲಿಗೆ ಈ ಹಳ್ಳಿಗಳು ಹೀಗೇಕಾದವು... ಎಂಬ ಧ್ಯಾನದಲ್ಲಿ ಹುಟ್ಟಿದುದು ಎಂದು ಸ್ಪಷ್ಟಪಡಿಸಿದ್ದರ ಕಡೆ ಗಮನವೇ ಇದ್ದಂತಿರಲಿಲ್ಲ.

ಇದೆಲ್ಲದರ ಪರಿಣಾಮ, ಇಂದು ಹಲವು ಹಿಂಸಾತ್ಮಕ ರೂಪಗಳಲ್ಲಿ ನಮ್ಮ ಕಣ್ಣೆದುರೇ ಇದೆ. ಭವಿಷ್ಯ ಭಾರತದ ಭವ್ಯ ದೇಗುಲಗಳೆಂದು ನೆಹರೂ ವರ್ಣಿಸಿ, ನಿರ್ಮಿಸಿದ ಭಾಕ್ರಾ-ನಂಗಲ್ ಬೃಹತ್ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶಗಳು, ಅವು ಒತ್ತಾಯಿಸಿದ ಕೃಷಿ ಪದ್ಧತಿಗಳು ಸೃಷ್ಟಿಸಿದ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ವಿರೋಧಾಭಾಸಗಳಿಂದಾಗಿ ಇಂದು ರೈತ ಸಮುದಾಯದ ಪಾಲಿಗೆ ಅಕ್ಷರಶಃ ರುದ್ರಭೂಮಿಗಳಾಗಿ ಪರಿವರ್ತಿತವಾಗುತ್ತಿವೆ. ಆಧುನೀಕರಣದ ಚಕ್ರ ಒಂದು ಸುತ್ತನ್ನು ಪೂರ್ಣಗೊಳಿಸುತ್ತಿರುವಂತಿದೆ. ಮತ್ತೆ ಗಾಂಧೀಜಿ ನೆನಪಾಗುತ್ತಿದ್ದಾರೆ. ನೆನಪಾಗುವುದೇನು, ರಾಷ್ಟ್ರ ಜೀವನದ ಸುಪ್ತ ಮನಸ್ಸಿನಲ್ಲಿ ಒಂದು ಕೈಗೂಡದ ಆಶಯದ ಪ್ರತೀಕವಾಗಿ ಎಂದೆಂದೂ ನೆಲೆಸಿಯೇ ಇದ್ದಾರೆಂದು ತೋರುತ್ತದೆ. ಹಾಗಾಗಿಯೇ ಈ ಆಧುನೀಕರಣದ ಗೌಜು ಗದ್ದಲಗಳ ನಡುವೆಯೂ ಮೌನದ ಮಣಿಗಳಂತೆ ಅಲ್ಲಲ್ಲಿ ಹಲವರು ತಮ್ಮದೇ ರೀತಿ ಹಾಗೂ ಮಿತಿಗಳಲ್ಲಿ ಗಾಂಧೀಜಿಯ ಪುನರನ್ವೇಷಣೆಯಲ್ಲಿ ತೊಡಗಿದ್ದಾರೆ. ಈಗ ತನ್ನ ಸ್ವಯಂ ವಿರೋಧಗಳನ್ನು ಮೀರಿ ಬೆಳೆಯಲಾಗದೆ, ಗಂಭೀರ ಬಿಕ್ಕಟ್ಟಿನಲ್ಲಿರುವಂತೆ ತೋರುತ್ತಿರುವ ಆಧುನಿಕ ನಾಗರೀಕತೆಯನ್ನು ಪ್ರತಿನಿಧಿಸುವ ನಗರೀಕರಣಕ್ಕೆ ಪರ್ಯಾಯವಾದ ರಾಷ್ಟ್ರ ನಿರ್ಮಾಣದ ಮಾದರಿಗಳ ಪ್ರಾಯೋಗಿಕತೆ, ಹಲವು ರೂಪಗಳಲ್ಲಿ ಸಂಶೋಧನೆ, ಸಂಘಟನೆ, ಪ್ರತಿಭಟನೆ ಇವರಿಂದ ನಡೆದಿವೆ. ಅವುಗಳಲ್ಲಿ ನಮ್ಮ ಹತ್ತಿರದ ಮತ್ತು ಕುತೂಹಲಕಾರಿ ಪ್ರಯೋಗವೆಂದರೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಭೀಮನಕೋಣೆಯಲ್ಲಿ ಪ್ರಸನ್ನ ಹೆಗ್ಗೋಡು ಸ್ಥಾಪಿಸಿರುವ ಚರಕ ಸಂಸ್ಥೆ.

ಸಮಾಜವಾದಿಗಳಿಗೆ ಇದು ಅರ್ಥವಾದಂತೆ ತೋರಲಿಲ್ಲ. ಹಾಗಾಗಿಯೇ ಅವರು ಕೆಟ್ಟದ್ದನ್ನು ಕೆಡವಲು ಯತ್ನಿಸಿದರೇ ಹೊರತು, ಒಳ್ಳೆಯದನ್ನು ಕಟ್ಟುವುದರ ಭಾಗವಾಗಿಯೇ ಕೆಟ್ಟದ್ದನ್ನು ಕೆಡವಬೇಕೆಂಬ ಅರಿವು ಅವರಲ್ಲಿ ಮೂಡಲಿಲ್ಲ. ನಮಗಾದರೂ ಇದು ಅರ್ಥವಾಗುತ್ತಿರುವುದು ಇಷ್ಟು ವರ್ಷಗಳ ನಂತರ. ಗಾಂಧಿ ಇದನ್ನು ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಹೇಳಿದ ನೂರು ವರ್ಷಗಳ ನಂತರ ನಮ್ಮ ಒಟ್ಟು ಬದುಕು, ಈ ಜಾಗತೀಕರಣದ ಹಲವು ಸುಖಗಳ ಮಧ್ಯೆಯೂ ಮೂಲತಃ ದುಃಖಮಯವೇ ಆಗಿದೆ ಏಕೆ ಎಂಬ ಪ್ರಶ್ನೆಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಅಳಿದುಳಿದಿರುವ ಸಮಾಜವಾದಿಗಳು ಇಂದು ತಮ್ಮಲ್ಲಿ ಅಳಿದುಳಿದಿರುವ ಸಮಾಜವಾದಿ ನಂಬಿಕೆಯನ್ನು ಪುನರ್‌ಸಂಘಟಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಗಾಂಧಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವುದೇ ಆಗಿದೆ.

(ಮಾಹಿತಿ ಸೌಜನ್ಯ : "ಲೋಹಿಯಾ ಜೊತೆಯಲ್ಲಿ" ಕೃತಿಯಿಂದ)









# ಗಾಂಧಿ ಮತ್ತು ನಾಸ್ತಿಕ ಗೋ.ರಾ.

## ಮುಖಾಮುಖಿಯ ನೆನಪುಗಳು

**"ಗಾಂಧೀಜಿಯವರನ್ನು ಸನಾತನವಾದಿ ಎಂದು ಹೀಗೆಳೆಯುವವರೆಗೆ ಆಂಧ್ರಪ್ರದೇಶದ ನಿರೀಶ್ವರವಾದಿ ಜಿ.ರಾಮಚಂದ್ರರಾವ್ ರವರು (ಗೋ.ರಾ.). ನಡೆಸಿದ ಪತ್ರ ವ್ಯವಹಾರ ಹಾಗೂ ಸಂವಾದವು ಗಾಂಧಿಯವರ ವಿಚಾರಧಾರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಮಹಾತ್ಮನ ಜೊತೆಗಿನ ಒಡನಾಟವನ್ನು ಅವರು "An atheist with Gandhi" ಎಂಬ ಕೃತಿಯಲ್ಲಿ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ. ಕನ್ನಡದ ಹಿರಿಯ ಲೇಖಕರೂ ಹಾಗೂ ನಿವೃತ್ತ ಶಿಕ್ಷಣ ಆಯುಕ್ತರಾದ ಶ್ರೀ ವೆಂಕಟೇಶ ಮಾಚಕನೂರು, ಇವರು ಈ ಕೃತಿಯನ್ನು "ಗಾಂಧಿಯೊಂದಿಗೆ ಒಬ್ಬ ನಾಸ್ತಿಕ" ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ."**

ಕನ್ನಡಕ್ಕೆ :
ವೆಂಕಟೇಶ ಮಾಚಕನೂರು

1945 ರ ಮಾರ್ಚ್ 30 ರಂದು ಬೆಳಗಿನ ಜಾವ ನಾಲ್ಕು ಗಂಟೆ ಆದ ಕೂಡಲೇ ಆಶ್ರಮ ನಿವಾಸಿ ಪ್ರಭಾಕರ ನನ್ನನ್ನು ಎಬ್ಬಿಸಿದರು. ಜೊತೆಗೆ ಅಂದು ಬೆಳಗಿನ ಐದು ಗಂಟೆಯ ಪ್ರಾರ್ಥನೆಯ ನಂತರ ಗಾಂಧೀಜಿ ನನ್ನೊಡನೆ ಮಾತನಾಡಲಿರುವುದಾಗಿ ತಿಳಿಸಿದರು. ಬಹಳ ನಿರೀಕ್ಷಿತ ಗಳಿಗೆಯೊಂದು ಬಂದುದಕ್ಕಾಗಿ ನನಗೆ ತುಂಬ ಸಂತೋಷವಾಯಿತು. ಬಹಳ ಆಶೆ ಮತ್ತು ಆತಂಕದ ನಿರೀಕ್ಷೆಯೊಂದಿಗೆ ನಾನು ಸಜ್ಜಾದೆ. ತಪ್ಪು ಗ್ರಹಿಕೆ ಮತ್ತು ಬಹಳ ದೋಷಣೆಗೆ ಒಳಗಾಗಿರುವ ವಿಷಯ ಕುರಿತು ದೊಡ್ಡ ಈಶ್ವರವಾದಿಯೊಂದಿಗೆ ನಾನು ಮಾತನಾಡಬೇಕಿತ್ತು. ಅವರು ನನ್ನನ್ನು ಏನು ಕೇಳಬಹುದು? ನಿರೀಶ್ವರವಾದ ಕುರಿತು ಅವರಲ್ಲಿರುವ ಪಕ್ಷಪಾತ ದೋರಣೆಯನ್ನು ಹೇಗೆ ನಿವಾರಿಸಬೇಕು? ನಿರೀಶ್ವರವಾದವನ್ನು ಅವರ ಮುಂದೆ ಹೇಗೆ ಪ್ರಸ್ತುತಪಡಿಸಬೇಕು? ಇವೇ ನನ್ನ ಆತಂಕದ ವಿಚಾರಗಳಾಗಿದ್ದವು.



downloaded from: www.kpscvaani.com



ನಿರೀಶ್ವರವಾದ ಸರಿ ಎಂದು ನನಗನಿಸಿತ್ತು. ನಿರೀಶ್ವರವಾದದ ಪರ ನಿಲುವು ಸ್ಪಷ್ಟಪಡಿಸಲು ನನಗೆ ಸುಸಂದರ್ಭ ಒದಗಿ ಬಂದಿದ್ದಕ್ಕಾಗಿ ಸಂತೋಷವಾಗಿತ್ತು. ಸಮ್ಮಿಶ್ರ ಭಾವನೆಗಳೊಂದಿಗೆ ಆ ದಿನ ನಸುಕಿನಲ್ಲಿ ನಾನು ಗಾಂಧೀಜಿ ನಿವಾಸದ ಬಳಿ ಹೋದೆ.

ಗಾಂಧೀಜಿ ತಮ್ಮ ನಿವಾಸದ ಹಿಂಭಾಗದಲ್ಲಿ ಕೆಳಗಿನ ಹಾಸಿಗೆ ಮೇಲೆ ಬಯಲಲ್ಲಿ ಪೂರ್ಣ ಕಾಲು ಚಾಚಿ ವಿಶ್ರಮಿಸಿದ್ದರು. ನಾನು ಅವರಿಗೆ ವಂದಿಸಿದೆ. ತಮ್ಮ ಹಾಸಿಗೆ ಬಳಿ ಕೂಡ್ರಲು ನನಗೆ ಸೂಚಿಸಿದರು. ನಾನು ಕೂತೆ. ವಾತಾವರಣ ಪೂರಕವಾಗಿತ್ತು. ನನ್ನ ತಂದೆಯೊಂದಿಗೆ ಹತ್ತಿರ ಕುಳಿತು ಚರ್ಚಿಸುವಂತೆ ನನಗನಿಸುತ್ತಿತ್ತು.

"ನಿರೀಶ್ವರವಾದ ನಿಮಗೆ ಏಕೆ ಬೇಕು. ಈಗ ನನಗೆ ಹೇಳಿ" ಎಂದು ಬಾಪೂಜಿ ಶಾಂತವಾಗಿ ಪ್ರೀತಿಯಿಂದ ಕೇಳಿದರು. ಆ ಧ್ವನಿ ಮತ್ತು ಪ್ರಶ್ನೆಯ ರೀತಿ ನನ್ನನ್ನು ತಟ್ಟಿದವು. ನಿರೀಶ್ವರವಾದ ಅಂದರೆ ಏನು? ಅಥವಾ ನಿರೀಶ್ವರವಾದದ ಉಪಯೋಗ ಏನು? ಎಂಬಂತಹ ವಾಡಿಕೆಯ ಪ್ರಶ್ನೆ ಅದಾಗಿರಲಿಲ್ಲ. ಅಂತಹ ಪ್ರಶ್ನೆಗಳಿಗೆ ಕೇವಲ ಪಾಂಡಿತ್ಯದ ಉತ್ತರ ಬರುವುದು. 'ನಿಮಗೆ ನಿರೀಶ್ವರವಾದ ಏಕೆ ಬೇಕು' ಎಂಬ ಪ್ರಶ್ನೆಯಾಗಿತ್ತು. ಅದು ಬಾಪು ರೀತಿ ನನಗೆ ನೆನಪಿರುವಂತೆ ನಿರೀಶ್ವರವಾದ ಕುರಿತು ಅನೇಕ ಚರ್ಚೆಗಳಲ್ಲಿ ನನಗೆ ಯಾರೂ ಆ ರೀತಿ ಪ್ರಶ್ನೆ ಕೇಳಿದ್ದಿಲ್ಲ. ಆ ರೀತಿಯ ನೇರ ಒಂಟಿ ಪ್ರಶ್ನೆ ನನ್ನನ್ನು ಚಕಿತಗೊಳಿಸುವ ಬದಲು, ನನ್ನ ಹೃದಯಕ್ಕೆ ನೆಟ್ಟಿತು. ನಾನು ಹೃದಯ ಬಿಚ್ಚಿ ಮಾತನಾಡಿದೆ.

ನಾನು ಆರಂಭಿಸಿದೆ, "ನಾನು ಕಳೆದ ವರ್ಷ ಕಲಕತ್ತಾದಲ್ಲಿದ್ದೆ. ಬರಗಾಲದಿಂದ ಬಸವಳಿದ ನಿರಾಶ್ರಿತರು ಪಾದಚಾರಿ ರಸ್ತೆಗಳ ಮೇಲೆ ನಿಧಾನವಾಗಿ ನಡೆಯುತ್ತಿದ್ದರು. ಅಲ್ಲಲ್ಲಿ ಕೆಲವರು ಸತ್ತು ಬಿದ್ದಿದ್ದರು. ತಿಂಡಿ ತಿನಿಸು, ಹಣ್ಣುಗಳನ್ನು ಮಾರುವ ಅಂಗಡಿಗಳ ಮುಂದೆಯೇ ಸತ್ತು ಬಿದ್ದಿದ್ದರು. ಅದೇ ಪರಿಸ್ಥಿತಿಯಲ್ಲಿ ನಾಯಿ ಅಥವಾ ಹಸು ಇದ್ದರೆ ಅವು ಹಸಿವೆಯಿಂದ ಸಾಯುತ್ತಿದ್ದವೆ? ಇಲ್ಲ. ಬೆದರಿಸಿರಿ, ಹೊಡೆಯಿರಿ, ಹೇಗೂ ಅವು ಪ್ರಯತ್ನಿಸಿ ತಮಗೆ ಬೇಕಾದ ಆಹಾರವನ್ನು ಅದೇ ಅಂಗಡಿಗಳಿಂದ ಪಡೆದು ತಮ್ಮ ಹಸಿವನ್ನು ನೀಗಿಕೊಳ್ಳುತ್ತಿದ್ದವು. ನಿರಾಶ್ರಿತರು ಹಾಗೆ ಏಕೆ ಮಾಡಲಿಲ್ಲ? ಅವರು ಪೋಲಿಸರಿಗೆ ಹೆದರಿರಲಿಕ್ಕಿಲ್ಲವೆಂದು ನನ್ನ ಭಾವನೆ. ನಿರಾಶ್ರಿತರು ಸಾವಿರಾರು ಸಂಖ್ಯೆಯಲ್ಲಿದ್ದರು. ಅವರೆಲ್ಲ ಒಟ್ಟಾಗಿ ಉಪಾಯ ಮಾಡುವ ಅಗತ್ಯವೂ ಇದ್ದಿಲ್ಲ. ಅವರಲ್ಲಿ ಒಂದಿಷ್ಟು ಜನ ಆ ಅಂಗಡಿಗಳಿಗೆ ಮುತ್ತಿಗೆ ಹಾಕಿದ್ದರೂ ಇಡೀ ಕಲ್ಕತ್ತಾ ನಗರದ ಪೋಲಿಸರಿಗೂ ಅವರನ್ನು ತಡೆಯುವುದು ಶಕ್ಯವಿರಲಿಲ್ಲ. ಅವರನ್ನೆಲ್ಲ ಜೈಲಿನಲ್ಲಿ ಕೂಡಿ ಹಾಕಿದ್ದರೂ ಜೈಲಿನ ನಿಕೃಷ್ಟ ಊಟ ಕೂಡ ಹಸಿವೆಯಿಂದ ಸಾಯುವುದಕ್ಕಿಂತ ವಾಸಿಯಿತ್ತು. ಆದರೂ ನಿರಾಶ್ರಿತರು ನಿಸ್ಸಹಾಯಕರಾಗಿ ಅಂಗಡಿಗಳನ್ನು ಏಕೆ ಲೂಟಿ ಮಾಡಲಿಲ್ಲ? ಆ ನಿರಾಶ್ರಿತರೆಲ್ಲ ಅಂತಹ ಹೇಡಿಗಳಾಗಿದ್ದರೆ? ಅಥವಾ ಸಾರ್ವಜನಿಕ ಶಾಂತಿಗೆ ಭಂಗ ತರಬಾರದೆಂಬ ಉಚ್ಚ ನಾಗರಿಕ ಜವಾಬ್ದಾರಿ ಉಳ್ಳವರಾಗಿದ್ದರೆ ಅವರೆಲ್ಲ? ಇಲ್ಲ. ಅವರೆಲ್ಲ ನಾಗರಿಕ ಹಕ್ಕು ಕರ್ತವ್ಯಗಳ ಅರಿವಿಲ್ಲದ ಸಾಮಾನ್ಯ ಪ್ರಜೆಗಳಾಗಿದ್ದರು. ಅವರಿಗೆ ನಾಗರಿಕ ಹಕ್ಕು, ಕರ್ತವ್ಯಗಳ ಕನಿಷ್ಠ ಅರಿವಿದ್ದರೆ ಬಂಗಾಳದಲ್ಲಿ ಬರಗಾಲವೆಂಬುದೇ ಇರುತ್ತಿರಲಿಲ್ಲ."

"ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಆ ಅಂಗಡಿ ಮಾಲಿಕರೆಲ್ಲ ತಮ್ಮದೇ ಜನ ತಮ್ಮ ಕಣ್ಮುಂದೆ ಹಸಿವೆಯಿಂದ ಬಳಲಿ ಸಾಯಲು ಬಿಡುವಷ್ಟು ಹೃದಯ ಹೀನರಾಗಿದ್ದರೆ? ಇಲ್ಲ. ಅವರು ನಿರಾಶ್ರಿತರಿಗೆ ನಡೆಸುತ್ತಿದ್ದ ಊಟದ ಕೇಂದ್ರಗಳಿಗೆ ಉದಾರವಾಗಿ ದೇಣಿಗೆ ನೀಡಿ ಅಂತಃಕರಣದಿಂದ ಸಹಾಯ ಮಾಡಿದರು. ಪ್ರತಿ ದಿನ ನೀತಿ ತತ್ವದ ಗೀತೆಗಳನ್ನು ಹಾಡಿದರು."

"ನಿರಾಶ್ರಿತರು ಹೇಡಿಗಳಾಗಿರದಿದ್ದಲ್ಲಿ ತಮ್ಮ ಅಂಗಡಿ ಮಾಲಿಕರು ಕ್ರೂರಿಗಳಾಗಿರದಿದ್ದಲ್ಲಿ ಅಷ್ಟೊಂದು ಜನ ಹಸಿವೆಯಿಂದ ಏಕೆ ಸಾಯಬೇಕಿತ್ತು? ಇದಕ್ಕೆ ಕಾರಣ, ಜೀವನ ಕುರಿತು ಅವರ ತಾತ್ವಿಕ ನಿಲುವು ಕಾರಣವೆಂದು ನನಗೆ ಅನಿಸುತ್ತದೆ."

"ನಿರಾಶ್ರಿತರು ಮತ್ತು ಅಂಗಡಿ ಮಾಲಿಕರ ಜೀವನ ಕುರಿತು ದೃಷ್ಟಿಕೋನ ಒಂದೇ ಆಗಿದೆ." "ಇದು ನನ್ನ ಹಣೆಬರಹ ಅದು ಅವರ ಹಣೆಬರಹ, ದೇವರು ನನ್ನನ್ನು ಹೀಗೆ ಮಾಡಿದ, ದೇವರು ಅವನನ್ನು ಹಾಗೆ ಮಾಡಿದ್ದಾನೆ" ಎಂದು ಪ್ರತಿಯೊಬ್ಬರೂ ಅಂದುಕೊಂಡಿದ್ದಾರೆ. ಜೀವನ ಕುರಿತು ಅವರ ಸಾಮಾನ್ಯ ತಾತ್ವಿಕ ನಿಲುವಿನಿಂದಾಗಿ ಅವರ ಸಂಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲದೇ ಕೆಲವರು ಹೊಟ್ಟೆ ತುಂಬ ಉಂಡರೆ, ಉಳಿದವರು ಹಸಿವೆಯಿಂದ ಸತ್ತರು. ನಿರಾಶ್ರಿತರು ತಮ್ಮ ತಾತ್ವಿಕ ನಂಬಿಕೆಯಿಂದಾಗಿ ಪ್ರಾಣಿಗಳಿಗಿಂತ ಭಿನ್ನವಾಗಿ ವರ್ತಿಸಿದರು."

"ಬಂಗಾಳದ ಬರಗಾಲದ ನಿಸ್ಸಹಾಯಕರ ಕುರಿತು ನಾನು ಹೇಳಿದ ಮಾತು ಅಸ್ಪೃಶ್ಯರಿಗೂ ಮತ್ತು ಇತರ ಕಪ್ಪು ವರ್ಣದವರಿಗೂ, ಬಿಳಿ ವರ್ಣದವರಿಗೂ, ಅನ್ವಯಿಸುತ್ತದೆ. ಅದೇ ತತ್ವಶಾಸ್ತ್ರ ಈ ಎಲ್ಲ ಸಂಬಂಧಗಳನ್ನು ಆಳುತ್ತದೆ."

"ಈ ರೀತಿಯ ತಾತ್ವಿಕ ಜೀವನ ವಿಧಾನದ ಪರಿಣಾಮಗಳೇನು? ಮನುಷ್ಯ ಪ್ರಾಣಿಗಳಿಗಿಂತ ಕಡೆಯಾಗಿದ್ದಾನೆ. ಚೆನ್ನಾಗಿ ಇರುವ ಬದಲು ಅವನು ರೋಗ ರುಜಿನಗಳಿಂದ ಸಾಯುತ್ತಿದ್ದಾನೆ. ಕೆಟ್ಟದ್ದನ್ನು ವಿರೋಧಿಸಲು ಅವನು ಬಲಹೀನನಾಗಿದ್ದಾನೆ. ಕೆಲವರ ಸುಖಕ್ಕಾಗಿ ಹಲವರು ಬಲಿಯಾಗುತ್ತಿದ್ದಾರೆ. ಸರ್ವ ಜನರ ಸುಖ ಬಯಸುವ, ಉದಾತ್ತ ನೈತಿಕ ಆಶಯಗಳುಳ್ಳ ನಮ್ಮ ಧ್ಯೇಯಗಳ ವಿಷಾದಕರ ವಾಸ್ತವ ಸಂಗತಿ ಇದಾಗಿದೆ. ದೇವರು, ದೈವದಲ್ಲಿಯ ನಂಬಿಕೆಯ ಜೀವನ ವಿಧಾನ, ಈಶ್ವರವಾದದ ಅನುಪಾಲನೆ, ಆದರ್ಶ ಮತ್ತು ನೈತಿಕ ಜೀವನ ವಿಧಾನವನ್ನು ವಿಫಲಗೊಳಿಸುವ ಮುಖ್ಯ ಕಾರಣಗಳೆಂದು ನಾನು ಹೇಳುತ್ತೇನೆ. ಈ ಅಸಮಾನ ಸಾಮಾಜಿಕ ಸಂಬಂಧಗಳ ವಿರುದ್ಧ, ತಾತ್ವಿಕ ನಿಲುವುಗಳ ವಿರುದ್ಧ, ನೋವು ಉಂಡವರು ಪ್ರತಿರೋಧ ಮಾಡಲು ಆರಂಭಿಸುವುದರಿಂದ ಅಸಮಾನತೆಯನ್ನು ಇನ್ನು ಮುಂದೆ ಸಂರಕ್ಷಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಶಾಂತಿ ಮತ್ತು ಪ್ರೀತಿಯ ಸ್ಥಳವನ್ನು ಯುದ್ಧ ಮತ್ತು ದ್ವೇಷಗಳು ಆಕ್ರಮಿಸುತ್ತಿವೆ."

"ನೀತಿ ಮತ್ತು ಆದರ್ಶವಾದ ಬೆಳೆಯಬೇಕೆಂದು ನಾನು ಬಯಸುತ್ತೇನೆ. ಆದರೆ ಅದು ದೇವರು ಮತ್ತು ದೈವದಲ್ಲಿಯ ನಂಬಿಕೆ, ಈಶ್ವರವಾದದಲ್ಲಿನ ತಾತ್ವಿಕ ಜೀವನ ವಿಧಾನ ಬದಲಾಗದೆ ಸಾಧ್ಯವಿಲ್ಲ. ಸಕಾರಾತ್ಮಕ ಶಬ್ದಗಳಲ್ಲಿ ಹೇಳುವುದಾದರೆ ನನಗೆ ನಿರೀಶ್ವರವಾದ ಬೇಕು. ಹಾಗಾದಲ್ಲಿ ಮಾತ್ರ ಮನುಷ್ಯ ದೇವರ ಮೇಲೆ ಅವಲಂಬಿತನಾಗುವುದು ಕಡಿಮೆಯಾಗಿ ತನ್ನ ಕಾಲುಗಳ ಮೇಲೆ ಬಲವಾಗಿ ನಿಲ್ಲಲು ಕಲಿಯುತ್ತಾನೆ. ಇಂತಹ ಕಾಲುಗಳ ಮೇಲೆ ಆರೋಗ್ಯಕರ ಸಾಮಾಜಿಕ ದೃಷ್ಟಿಕೋನ ಬೆಳೆಯುತ್ತದೆ. ಏಕೆಂದರೆ ನಿರೀಶ್ವರವಾದದಲ್ಲಿ ಮನುಷ್ಯ ಮನುಷ್ಯರ ನಡುವೆ ಸಾಮಾಜಿಕ, ಆರ್ಥಿಕ, ಅಸಮಾನತೆಗಳಿಗೆ ಕಾರಣಗಳಿಲ್ಲ. ಈಶ್ವರವಾದಿಗಳ ದಂಡು ಈವರೆಗೆ ಈ ಅಸಮಾನತೆಗಳನ್ನು ಯಾವುದೇ ಶಸ್ತ್ರಾಸ್ತ್ರಗಳಿಲ್ಲದೇ ಕಾಯ್ದುಕೊಂಡು ಬಂದಿದೆ. ದೇವರಲ್ಲಿನ ನಂಬಿಕೆ ತೊರೆದು ಹೋಗಿ, ಮನುಷ್ಯ ತನ್ನ ಕಾಲುಗಳ ಮೇಲೆ ತಾನು ನಿಲ್ಲತೊಡಗಿದರೆ, ಎಲ್ಲ ಮಾನವ ಕುಲ ಒಂದಾಗುತ್ತದೆ, ಸಮಾನ ಆಗುತ್ತದೆ. ಸಹ ಜೀವಿಗಳ ನಡುವೆ ಅಂತರ ಕಡಿಮೆ ಆಗಿ, ವ್ಯತ್ಯಾಸ ಮಾಯವಾಗಿ ಭಾವ ಸ್ಪಂದನಕ್ಕೆ ಆಸ್ಪದ ಆಗುತ್ತದೆ."

ಅಸಮಾನ ಸಾಮಾಜಿಕ ಸಂಬಂಧಗಳ ವಿರುದ್ಧ, ತಾತ್ವಿಕ ನಿಲುವುಗಳ ವಿರುದ್ಧ, ನೋವು ಉಂಡವರು ಪ್ರತಿರೋಧ ಮಾಡಲು ಆರಂಭಿಸುವುದರಿಂದ ಅಸಮಾನತೆಯನ್ನು ಇನ್ನು ಮುಂದೆ ಸಂರಕ್ಷಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಶಾಂತಿ ಮತ್ತು ಪ್ರೀತಿಯ ಸ್ಥಳವನ್ನು ಯುದ್ಧ ಮತ್ತು ದ್ವೇಷಗಳು ಆಕ್ರಮಿಸುತ್ತಿವೆ.

– ಜಿ. ರಾಮಚಂದ್ರರಾವ್

"ದೇವರೇ ಸತ್ಯವಾಗಿದ್ದರೆ ನಾನು ದೇವರನ್ನು ತೆಗೆದುಹಾಕುತ್ತಿದ್ದಿಲ್ಲ. ಆದರೆ ಹಾಗಿಲ್ಲ ದೇವರು ಮನುಷ್ಯ ಕಲ್ಪಿತ ಅಸತ್ಯ ಆಗಿದೆ. ಎಲ್ಲ ಅಸತ್ಯಗಳಂತೆ ಅದು ಕೂಡ ಮೊದಲು ಸ್ವಲ್ಪ ಪ್ರಯೋಜನಕಾರಿ ಆಗಿತ್ತು. ಆದರೆ ಕಾಲಾಂತರದಲ್ಲಿ ಎಲ್ಲ ಅಸತ್ಯಗಳಂತೆ ಅದು ಜೀವನವನ್ನು ಮಲಿನಗೊಳಿಸಿತು. ಆದ್ದರಿಂದ ಮನುಕುಲವನ್ನು ಭ್ರಷ್ಟ ಮುಕ್ತಗೊಳಿಸಿ ನೈತಿಕ ಮಟ್ಟ ಹೆಚ್ಚಿಸಲು ದೇವರಲ್ಲಿನ ನಂಬಿಕೆ ಹೋಗಲೇಬೇಕು."

ನಿರೀಶ್ವರವಾದ ವ್ಯಕ್ತಿಯ ಆತ್ಮ ವಿಶ್ವಾಸವನ್ನು ಹೆಚ್ಚಿಸಿ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಅಹಿಂಸಾತ್ಮಕವಾಗಿ ನೆಲೆಗೊಳಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಾನು ಎಲ್ಲಿ ತಪ್ಪಿದ್ದೇನೆ ಹೇಳಿ, ಬಾಪು ಎಂದೆ.

ಬಾಪುಜಿ ನನ್ನ ದೀರ್ಘ ವಿವರಣೆಯನ್ನು ತಾಳ್ಮೆಯಿಂದ ಕೇಳಿಸಿಕೊಂಡ ನಂತರ ಹಾಸಿಗೆಯಲ್ಲಿ ಎದ್ದು ಕುಳಿತು ನಿಧಾನವಾಗಿ ಹೇಳಿದರು "ಹೌದು, ನಿಮ್ಮ ಮಾತಿನಲ್ಲಿ ಆದರ್ಶ ಇದೆ. ನಿಮ್ಮ ನಿರೀಶ್ವರವಾದ ತಪ್ಪು, ನನ್ನ ಈಶ್ವರವಾದ ಸರಿ ಎಂದು ಹೇಳಲಾರೆ.

"ನಾವು ಸತ್ಯದ ಅನ್ವೇಷಕರು. ನಾವು ತಪ್ಪು ದಾರಿ ಹಿಡಿದದ್ದು ಗೊತ್ತಾದರೆ ಬದಲಾಯಿಸಿಕೊಳ್ಳುತ್ತೇವೆ. ಈ ರೀತಿ ಜೀವನದಲ್ಲಿ ಬಹಳ ಸಾರಿ ನಾನು ಬದಲಾಗಿದ್ದೇನೆ. ನೀವು ಕೆಲಸಗಾರರು ಎಂಬುದನ್ನು ನಾನು ಬಲ್ಲೆ. ನೀವು ಧರ್ಮಾಂಧರಲ್ಲ. ನೀವು ತಪ್ಪು ದಾರಿ ಹಿಡಿದದ್ದು ನಿಮಗೆ ತಿಳಿದರೆ ಬದಲಾಯಿಸಿಕೊಳ್ಳುತ್ತೀರಿ. ನೀವು ಧರ್ಮಾಂಧರಾಗದ ಹೊರತು ಯಾವುದೇ ಹಾನಿ ಇಲ್ಲ. ನೀವು ಸರಿ ಇದ್ದೀರೋ ಅಥವಾ ನಾನು ಸರಿ ಇದ್ದೇನೋ ಅನ್ನುವುದನ್ನು ಪರಿಣಾಮಗಳು ಹೇಳಬೇಕು. ಆಗ ನಾನು ನಿಮ್ಮ ದಾರಿ ಹಿಡಿಯಬಹುದು. ಅಥವಾ ನೀವು ನನ್ನ ದಾರಿಗೆ ಬರಬಹುದು. ಅಥವಾ ಇಬ್ಬರೂ ಸೇರಿ ಮೂರನೆಯ ದಾರಿ ಹಿಡಿಯಬಹುದು. ನಿಮ್ಮ ಕೆಲಸವನ್ನು ನೀವು ಮುಂದುವರಿಸಿ, ನಿಮ್ಮ ವಿಧಾನ ನನ್ನ ವಿಧಾನಕ್ಕೆ ವಿರುದ್ಧವಾಗಿದ್ದರೂ ನಿಮಗೆ ನಾನು ಸಹಾಯ ಮಾಡುತ್ತೇನೆ."

ಗಾಂಧೀಜಿಯವರ ಉದಾರ ಮನಸ್ಸಿನಿಂದ ನನಗೆ ತುಂಬ ಸಂತೋಷವಾಯಿತು. ನಾನು ವಿನಂತಿಸಿದೆ. "ನೀವು ನನಗೆ



downloaded from: www.kpscvaani.com



ಪ್ರೋತ್ಸಾಹಿಸುತ್ತಿದ್ದೀರಿ. ಬಾಪು, ನಾನು ಹಿಡಿದ ದಾರಿಯಲ್ಲಿ ಇರಬಹುದಾದ ಅಪಾಯಗಳ ಬಗ್ಗೆ ನೀವು ನನ್ನನ್ನು ಎಚ್ಚರಿಸಬೇಕು. ನಿಮ್ಮ ಅನುಭವ ಮತ್ತು ಜ್ಞಾನಗಳಿಂದ ತನ್ನ ತಪ್ಪುಗಳು ಕಡಿಮೆ ಆಗಲು ಪ್ರಯೋಜನ ಆಗಬಹುದು." ಎಂದೆ.

ಆದಕ್ಕೆ ಬಾಪುಜಿ ಅವರು, "ತಪ್ಪು ಮಾಡುವುದು ತಪ್ಪಲ್ಲ, ತಪ್ಪೆಂದು ತಿಳಿದು ಯಾರೂ ತಪ್ಪು ಮಾಡಲಾರರು. ಆದರೆ ತಪ್ಪೆಂದು ತಿಳಿದರೂ ತಿದ್ದಿಕೊಳ್ಳದಿದ್ದರೆ ತಪ್ಪು. ತಪ್ಪು ಮಾಡಲು ನೀವು ಹೆದರುವಿರಾದರೆ ನೀವು ಏನನ್ನೂ ಮಾಡಲು ಹೆದರುವಿರಿ. ತಪ್ಪುಗಳು ಕಂಡು ಬಂದಾಗ ನೀವು ಅವುಗಳನ್ನು ಸರಿ ಪಡಿಸಿಕೊಳ್ಳಿ."

ನನ್ನ ಸಹೋದ್ಯೋಗಿಗಳ ನಡತೆಯಿಂದ ತಮಗೆ ಸಂತೋಷ ಆಗಿರುವುದಾಗಿ ಅವರು ನನಗೆ ಹೇಳಿದರು. ನಾನು ಅವರನ್ನು ಹೇಗೆ ಪ್ರಭಾವಿಸಿದ್ದೇನೆಂದು ಅರಿಯಲು ಅವರನ್ನು ಗಾಂಧೀಜಿ ಆಶ್ರಮಕ್ಕೆ ಕರೆಸಿದ್ದರು. ನನ್ನೊಂದಿಗೆ ಕಳೆದ ಮೂರು ತಿಂಗಳಿನಿಂದ ಅವರು ವಿಭಿನ್ನವಾಗಿ ವರ್ತಿಸಿದ್ದರೂ ನನ್ನ ಸಹದ್ಯೋಗಿಗಳ ಬಗ್ಗೆ ಅವರು ವಿಶೇಷ ಗಮನ ನೀಡಿದ ಬಗ್ಗೆ ನನಗೆ ಅರಿವಾಯಿತು.

ಆಮೇಲೆ ನೈತಿಕತೆ ಕುರಿತು ನನ್ನ ವಿಚಾರ ಏನೆಂದು ಅವರು ತಿಳಿಯಬಯಸಿದರು. "ನಾನು ಹೇಳಿದ್ದನ್ನು ಮಾಡುತ್ತೇನೆ ಮತ್ತು ಮಾಡಿದ್ದನ್ನು ಹೇಳುತ್ತೇನೆ, ನೈತಿಕ ನಡತೆ ಕುರಿತು ಅದು ನನ್ನ ವ್ಯಾಖ್ಯೆ ಮುಚ್ಚುಮರೆಗೆ ಅವಕಾಶವಿಲ್ಲ. ಮುಕ್ತ ನಡುವಳಿಕೆಯಲ್ಲವೂ ನೈತಿಕವೆ" ಎಂದು ನಾನು ಉತ್ತರಿಸಿದೆ. "ನಿಜವಾಗಿ ಗೌಪ್ಯ ಅನ್ನುವುದು ಪಾಪ" ಎಂದು ನಾನು ಹೇಳುತ್ತೇನೆ. ನೀವು ನಿರೀಶ್ವರವಾದಿ. ಪಾಪ ಶಬ್ದ ಬಳಸಲು ನಿಮಗೆ ಸಂಕೋಚ ಅನಿಸಬಹುದು" ಅಂದರು ಗಾಂಧೀಜಿ. ಮುಕ್ತವಾಗಿ ಬದುಕುವ ದಾರಿಯಲ್ಲಿ ನಾವು ಅನುಭವಿಸಿದ ಕೆಲವು ಕ್ಲಿಷ್ಟ ಅನುಭವಗಳನ್ನು ಅವರು ನನಗೆ ವಿವರಿಸಿದರು.

ನಾವು, ನಮ್ಮ ಗ್ರಾಮ ಕೇಂದ್ರಗಳಲ್ಲಿ ಶೌಚಾಲಯಗಳನ್ನು ಬಳಸುತ್ತಿದ್ದೇವೆಯೇ ಎಂದು ಕೇಳಿದರು. ನೈರ್ಮಲ್ಯದ ಸಮಸ್ಯೆ ಕುರಿತು ಹೇಳುತ್ತ "ಹರಿದ್ವಾರದಲ್ಲಿ ಗಂಗಾನದಿ ದಂಡೆಯಲ್ಲಿ ನನಗೆ ಶೌಚಕ್ಕೆ ಹೋಗಬೇಕಿತ್ತು. ಆದರೆ ಅಲ್ಲಿ ಸ್ವಚ್ಛ ಸ್ಥಳವೇ ಇರಲಿಲ್ಲ. ಅಸ್ಪೃಶ್ಯತೆ ಆಚರಣೆ ಮತ್ತು ಮುಕ್ತ ಬಹಿರ್ದೆಶೆ ನಮ್ಮ ದೇಶದಲ್ಲಿನ ಎರಡು ನಿರ್ಲಜ್ಜ ಮಹಾಪಾಪಗಳು" ಅಂದರು.ಮಾತನಾಡುವಾಗ ಒಮ್ಮೆ ಅವರು " ಕಾರ್ಯಕರ್ತರು ಹೆಸರು ಗಳಿಸಲು ಏಕೆ ಆತುರ ಪಡುತ್ತಾರೊ ತಿಳಿಯದು. ದಕ್ಷಿಣ ಆಫ್ರಿಕಾದಲ್ಲಿ ನಾನು ಐದು ವರ್ಷ ಅಡುಗೆಮನೆ ಮತ್ತು ಶೌಚಾಲಯದಲ್ಲಿ ತೊತ್ತಿನಂತೆ ದುಡಿದೆ" ಅಂದರು. ನಾನು ಮತ್ತೆ ಅವರೊಡನೆ ಸಲಹೆಗಾಗಿ ಯಾವಾಗ ಭೇಟಿ ಆಗಬಹುದೆಂದು ಕೇಳಿದೆ. " ನೀವು ನನ್ನ ಕುಟುಂಬದ ಸದಸ್ಯರು, ನನಗೆ ಬಿಡುವಿರುವುದನ್ನು

> "ಹರಿದ್ವಾರದಲ್ಲಿ ಗಂಗಾನದಿ ದಂಡೆಯಲ್ಲಿ ನನಗೆ ಶೌಚಕ್ಕೆ ಹೋಗಬೇಕಿತ್ತು. ಆದರೆ ಅಲ್ಲಿ ಸ್ವಚ್ಛ ಸ್ಥಳವೇ ಇರಲಿಲ್ಲ. ಅಸ್ಪೃಶ್ಯತೆ ಆಚರಣೆ ಮತ್ತು ಮುಕ್ತ ಬಹಿರ್ದೆಶೆ ನಮ್ಮ ದೇಶದಲ್ಲಿನ ಎರಡು ನಿರ್ಲಜ್ಜ ಮಹಾಪಾಪಗಳು"
>
> – ಗಾಂಧೀಜಿ

ನೋಡಿಕೊಂಡು ಯಾವಾಗಲಾದರು ಬನ್ನಿ" ಎಂದು ಹೇಳಿದರು.

ನಾವು ಸುಮಾರು ಎಪ್ಪತ್ತು ನಿಮಿಷ ಮಾತನಾಡಿದ್ದೆವು. ವೇಳೆಯ ಮಿತಿ ಇರಲಿಲ್ಲ. ಅದು ಹೃದಯ ಸ್ಪರ್ಶಿ ಮಾತಾಗಿತ್ತು. ಬೇರೆ ಬೇರೆ ವಿಷಯಗಳ ಕುರಿತು ವೈಯಕ್ತಿಕ ಅನುಭವ, ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಸಂದರ್ಶನದುದ್ದಕ್ಕೂ ನಾನು ಗಾಂಧೀಜಿಯವರಿಗೆ ಹತ್ತಿರವಾಗುತ್ತಿದ್ದೇನೆಂಬ ಭಾವನೆ ಉಂಟಾಗುತ್ತಿತ್ತು.

ಆನಂತರ ಅವರ ಕೆಲವು ಶಬ್ದಗಳು ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದ್ದವು. "ನಾನು ನನ್ನ ಈಶ್ವರವಾದ ಸರಿ, ನಿಮ್ಮ ನಿರೀಶ್ವರವಾದ ತಪ್ಪು ಎಂದು ಹೇಳಲಾರೆ...... ನಿಮ್ಮ ವಿಧಾನ ನನಗಿಂತ ಭಿನ್ನವಾಗಿದ್ದರೂ ನಿಮಗೆ ನಾನು ಸಹಾಯ ಮಾಡುತ್ತೇನೆ..." ಅನ್ನುವ ಅವರ ಮಾತುಗಳು ಗಾಂಧೀಜಿಯ ಸಹನೆ ಮತ್ತು ಸದಾಚಾರಗಳನ್ನು ತೋರಿಸಿತು. "ನೀನು ತಪ್ಪು ಮಾಡಲು ಹೆದರಿದರೆ, ನಿನಗೆ ಏನೂ ಮಾಡಲಾಗುವುದಿಲ್ಲ" ಎಂಬ ಅವರ ಮಾತು ವಾಸ್ತವಿಕವಾಗಿ ನೇರ ಕ್ರಿಯೆಗೆ ಒತ್ತು ನೀಡುವಂತಿತ್ತು. ಅವರ ಮಾತುಗಳ ಮೆಲುಕು ಹಲವು ವಿಷಯಗಳಲ್ಲಿ ನನ್ನ ಸ್ವಭಾವ ಸುಧಾರಣೆಗೂ ಕಾರಣವಾಯಿತು.

ನಮ್ಮ ಚರ್ಚೆಯಲ್ಲಿಯ ಕೆಲವು ವಿಷಯಗಳ ಕುರಿತು ಗಾಂಧೀಜಿ ಆಳವಾಗಿ ಚಿಂತಿಸಿದಂತೆ ಕಂಡು ಬಂತು. ಚರ್ಚೆ ಕಾಲಕ್ಕೆ ಅವರ ಪ್ರತಿಕ್ರಿಯೆ ಮತ್ತು ವಿರಾಮಗಳಿಂದ ನನಗೆ ಹಾಗೆ ಕಂಡು ಬಂತು. ನಾನು ಅವರ ಮುಂದೆ ಮಂಡಿಸಿದ ನಿರೀಶ್ವರವಾದದಲ್ಲಿ, ದೇವರ ಅಸ್ತಿತ್ವ ನಿರಾಕರಿಸುವವರ ಸಾಮಾನ್ಯ ವಿಚಾರಧಾರೆಗಿಂತ ಗುಣಾತ್ಮಕ ಅಂಶಗಳಿರುವುದನ್ನು ಅವರು ಗಮನಿಸಿದರು. ಏನೇ ಆಗಲಿ ನನ್ನೊಂದಿಗಿನ ಅವರ ಅನಂತರದ ಮಾತು ಮತ್ತು ಪತ್ರಗಳಲ್ಲಿ ಅವರು ನನ್ನನ್ನು ಮತ್ತು ನಿರೀಶ್ವರವಾದವನ್ನು ತಿಳಿದುಕೊಳ್ಳಲು ಆರಂಭಿಸಿದಂತೆ ಕಂಡು ಬಂತು. ■



downloaded from: www.kpscvaani.com





# ಕಾಯಕ ಸಂಸ್ಕೃತಿ

## ಗಾಂಧಿ ಮಾರ್ಗ

ಸುಮಾ ಚಂದ್ರಶೇಖರ್

**ಯಾ**ವ ಸೈನ್ಯಕ್ಕೂ ಅಧಿಪತಿಯಾಗದ, ಬ್ಯಾಂಕಿನಲ್ಲಿ ತನ್ನ ಹೆಸರಲ್ಲಿ ಹಣದ ಲೆಕ್ಕವೂ ಇಲ್ಲದ, ತನ್ನದೆನ್ನುವ ಒಂದು ಗುಡಿಸಲಿನ ಸೂರೂ ಇಲ್ಲದ, ಸೂಜಿಯ ಮೊನೆಯೂರುವಷ್ಟೂ ತನ್ನ ಹೆಸರಿನ ನೆಲದ ನೆಲೆಯಿಲ್ಲದ, ನೆಲೆ ಉಳಿಸಿಕೊಳ್ಳದ, ಪರಂಪರೆಯ ಒಂದಿನಿತೂ ದಾಖಲೆ ಉಳಿಸಿಕೊಳ್ಳಬೇಕೆಂಬ ಹಂಬಲವಿಲ್ಲದ, ಏಕಮೇವ ವ್ಯಕ್ತಿ ಇದ್ದುದಾಗಿದ್ದರೆ ಜಗತ್ತಿನಲ್ಲಿ ಪ್ರಾಯಶಃ ಒಬ್ಬನೆ ಇರಬೇಕು. ಬೊಚ್ಚು ಬಾಯಿಯ, ಕನ್ನಡಕ, ಮಾನ ಮುಚ್ಚುವಷ್ಟೇ ಬಟ್ಟೆ, ಒಂದು ಜೊತೆ ಚಪ್ಪಲಿ, ಕೈಗೊಂದು ಊರುಗೋಲು, ಇಷ್ಟನ್ನು ಮಾತ್ರ ವೈಯಕ್ತಿಕವಾಗಿ ಬಳಸಿದ ಮಕ್ಕಳ ಮನಸ್ಸಿನ 'ಬಾಪೂಜಿ' ಜಗತ್ತಿಗೊಬ್ಬನೇ, ಹೊರತು ಮತ್ತೊಬ್ಬನಿಲ್ಲ.. ಮತ್ತು ಇರಲಾರ.

ಈ ದೇಶಕ್ಕೆ ಮಹಾತ್ಮ ಗಾಂಧಿ ಸ್ವಾತಂತ್ರ್ಯವನ್ನಷ್ಟೆ ಅಲ್ಲ, ಇಡೀ ಜಗತ್ತಿಗೆ ಶಾಂತಿಯ, ಸೋದರತ್ವದ, ಸ್ವಾವಲಂಬನೆಯ ಪಾಠವನ್ನೂ ಕಲಿಸಿ ಕೊಟ್ಟರು. ಅದರಲ್ಲೂ, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು. ಮತ್ತೊಬ್ಬರಿಗೆ ಹೊರೆ ಆಗದಂತೆ ಜೀವಿಸಬೇಕು ಎಂಬುದು ಅವರ ತತ್ವ ಆಗಿತ್ತು.

ಪ್ರತಿಯೊಬ್ಬನೂ ಸಾಧ್ಯವಾದಷ್ಟು ಮಟ್ಟಿಗೆ ತನ್ನ ತನ್ನ ಕೆಲಸಗಳನ್ನು ತಾನೇ ಮಾಡಬೇಕು. ತನ್ನ ಕೆಲಸಗಳನ್ನು ತಾನೇ ಮಾಡಿದಾಗ ಒಂದು ಅಪೂರ್ವ ಆನಂದ ಸಿಗುತ್ತದೆ. ಕಾಯಕದ ಸುಖ, ಸೌಂದರ್ಯ, ಗೌರವದ ಅನುಭವ ಆಗುತ್ತದೆ ಎಂದು ಹೇಳುವ ಮೂಲಕ ಗಾಂಧಿ ಶ್ರಮ ಸಂಸ್ಕೃತಿಯ ಮೌಲ್ಯವನ್ನು ಉದ್ದೀಪನಗೊಳಿಸಿದರು.

ಸೋಮಾರಿತನದಿಂದ ಮನುಷ್ಯ ಕಲ್ಲಿನಂತೆ ತಟಸ್ಥವಾಗುತ್ತಾನೆ. ಕೆಲಸ ಮಾಡುವವನಿಗೆ ಅದರ ಸೃಷ್ಟಿ ಕ್ರಿಯೆಯಿಂದ ಸಿಗುವ ಆನಂದಕ್ಕೆ ಕೊನೆಯೇ ಇಲ್ಲ. ದುಡಿಯದೇ ಸತ್ತವರಿದ್ದಾರೆ. ದುಡಿದು ಸತ್ತವರಿಲ್ಲ, ದುಡಿದು ಸವೆದವರು ಆರೋಗ್ಯವಂತರಾಗಿದ್ದಾರೆ. ದುಡಿಯದೇ ಕುಳಿತವರ ದೇಹ ಅನಾರೋಗ್ಯದ ಗೂಡಾಗಿದೆ. ಪ್ರತಿಯೊಬ್ಬರು ಕಾಯಕದಿಂದಲೇ ಬದುಕಿದರೆ ಈ ಭೂಮಿ ಸ್ವರ್ಗವಾದೀತು. ಎಂಬ 'ಕಾಯಕ ಸಂಸ್ಕೃತಿ'ಯನ್ನು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬರೆದರು.

ಪ್ರತಿಯೊಬ್ಬರು ಕೆಲಸ ಮಾಡಿದರೆ ಭಾರತದಲ್ಲಿ ಖಂಡಿತ ನಿರುದ್ಯೋಗ ಸಮಸ್ಯೆಯೇ ಇರುವುದಿಲ್ಲ. ನಮಗೆ ಕೆಲಸದ ಬೆಲೆ, ಗೌರವ, ಪ್ರೀತಿಸುವ ಗುಣ ಗೊತ್ತಿರಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವವರು ಎಂದೂ ಉಪವಾಸವಿರಲಾರರು. ಆದರೆ ಗಾಂಧೀಜಿಯವರ 'ಶ್ರಮ ಸಂಸ್ಕೃತಿ' ಅವರ ಹಿಂದೆಯೇ ಹೊರಟು ಹೋಯಿತು. ಸಮಗ್ರ ಭಾರತದಲ್ಲಿ ಕೆಳಮಟ್ಟದಿಂದ ಮೇಲಿನ ಹಂತದವರೆಗೂ ನೋಡಿದಾಗ ವೃತ್ತಿ ಗೌರವ ಇಲ್ಲದೆ ವೃತ್ತಿಯ ಬಗ್ಗೆ ಪ್ರೀತಿ ಇಲ್ಲವಾಗಿ ಕೆಲಸ ಕಳ್ಳರು ಹೆಚ್ಚಾಗಿ ಬುದ್ಧಿ ದಾರಿದ್ರ್ಯ ಎಲ್ಲೆ ಮೀರಿದೆ ಎನಿಸುತ್ತದೆ.

ದುಡಿಯದೇ ತಿನ್ನುವವ ಪರಾವಲಂಬಿ. ದುಡಿದು ಬದುಕುವುದೆಂದರೆ ಆರೋಗ್ಯದಿಂದ ಸ್ವಾವಲಂಬಿಯಾಗಿ ಬಾಳುವುದು. ಇದು ಸಂತೋಷವನ್ನು ಸಂತೃಪ್ತಿಯನ್ನು ಉಂಟುಮಾಡಿ ತುಂಬು ಜೀವನ ನಡೆಸಲು

ಸಹಕಾರಿಯಾಗಬಲ್ಲದು. "ದುಡಿಯುವವನಿಗೆ ಅನ್ನ, ಕುಳಿತು ತಿನ್ನುವವನಿಗೆ ಅನ್ನವಿಲ್ಲ. ಎಲ್ಲರೂ ದುಡಿಯಬೇಕು ಎಲ್ಲರಿಗಾಗಿ ದುಡಿಯಬೇಕು. ದುಡಿದಿರುವುದನ್ನು ಸಮಾಜಕ್ಕೆ ಒಪ್ಪಿಸಬೇಕು. ಎಲ್ಲರಿಗಾಗಿ ಒಬ್ಬನು-ಒಬ್ಬನಿಗಾಗಿ ಎಲ್ಲರೂ" ಎಂಬ ತತ್ವದಲ್ಲಿ 'ಕಾಯಕ ಸಂಸ್ಕೃತಿ'ಯನ್ನು ಕಾಣುತ್ತೇವೆ. ಆದರೆ ಭಾರತ ಪ್ರಜಾಪ್ರಭುತ್ವ ದೇಶ. ಹೀಗಾಗಿ ಈ ತತ್ವ ಯಥಾವತ್ತಾಗಿ ಆಚರಣೆಯಲ್ಲಿ ಸಾಧ್ಯವಾಗುತ್ತಿಲ್ಲ.

ಶ್ರಮ ಇಲ್ಲದೆ ಸಂಪತ್ತು ಗಳಿಸುವುದು ಪಾಪವೆಂಬ ಗಾಂಧೀಜಿಯ ಚಿಂತನೆಯನ್ನು ಲೋಕಿಸಿದಾಗ ಬಸವಣ್ಣನವರ ಕಾಯಕ-ಪ್ರಸಾದ-ದಾಸೋಹ ತತ್ವ ನೆನಪಿಸುತ್ತದೆ. ಕಾಯಕ ಮಾಡದೇ ಊಟ ಮಾಡುವ ಅರ್ಹತೆ ಇರುವುದಿಲ್ಲ. ಕಾಯಕವೆಂದರೆ ಸತ್ಯ ಶುದ್ಧವಾದ ಕಾಯಕ. ಅಲ್ಲಿ ಭ್ರಷ್ಟಾಚಾರವಷ್ಟೇ ಅಲ್ಲ ವಿಚಾರವೂ ಇರಬಾರದೆಂಬುದು ಶರಣರ ನಿಲುವಾಗಿತ್ತು.

ಗಾಂಧೀಜಿಯವರ ಆದರ್ಶ ರಾಜ್ಯ ನಿರ್ಮಾಣದಲ್ಲಿ ಇಂತಹ ತತ್ವಗಳಿಗೆ ಬೆಲೆಯಿದೆ. ಇದರ ಆಚರಣೆ ಅಗತ್ಯವಾಗಿದೆ. ಭಾರತದ ಇಂದಿನ ಜ್ವಲಂತ ಸಮಸ್ಯೆಗಳಾಗಿರುವ ಬಡತನ, ನಿರುದ್ಯೋಗ, ಆಹಾರ ಕೊರತೆ ಇತ್ಯಾದಿ ಸಮಸ್ಯೆಗಳಿಗೆ ನಾವು ಗಾಂಧಿ ಮಾರ್ಗವನ್ನು ಬಿಟ್ಟು ದೂರ ನಡೆಯುತ್ತಿರುವುದೇ ಕಾರಣವೆನಿಸುತ್ತದೆ.

ವಿದೇಶಿ ಅವಲಂಬನೆ ಅಥವಾ ಆರ್ಥಿಕ ಚಿಂತನೆ ಬಿಟ್ಟು, ರೈತರ ಸಮಸ್ಯೆಗಳಿಗೆ ಸ್ಪಂದಿಸಿದರೆ ಗಾಂಧೀಜಿಯವರ ಕನಸನ್ನು ನನಸು ಮಾಡಲು ಸಾಧ್ಯ. ಅದಕ್ಕಾಗಿ ದೃಢ ಸಂಕಲ್ಪ ಬೇಕು. ಗಟ್ಟಿ ನಿರ್ಧಾರ ಅಗತ್ಯ. ಗಾಂಧೀಜಿಯವರ ಮಾರ್ಗ ಮತ್ತು ಮೌಲ್ಯಗಳು ಮೇಲ್ನೋಟಕ್ಕೆ ಅಪ್ರಸ್ತುತವಾಗಿ ಕಂಡು ಬಂದರೂ, ಮುಕ್ತ ಆಳಕ್ಕಿಳಿದು ನೋಡಿದರೆ ಅವು ಪ್ರಸ್ತುತ ಮಾತ್ರವಲ್ಲ ಅನಿವಾರ್ಯವಾಗಿ ಕಂಡುಬರುತ್ತದೆ.

ಸ್ವದೇಶೀ ಮೂಲ ಮಂತ್ರದಿಂದ ಉತ್ತೇಜಿತರಾಗಿ, ಅಹಿಂಸೆ ಮತ್ತು ಸತ್ಯಾಗ್ರಹಗಳಂತಹ ವಿಶಿಷ್ಟ ಮಾರ್ಗದಲ್ಲಿ ಹೋರಾಡಿ ಸ್ವಾತಂತ್ರ್ಯ ಸಂಪಾದನೆಯ ಗುರಿ ಸಾಧಿಸಿಕೊಂಡು ರಾಷ್ಟ್ರೀಯರಾದ ನಮ್ಮಲ್ಲಿ, ಸ್ವದೇಶೀಯತೆ ಮುಂದುವರಿಯಬೇಕಾಗಿತ್ತು. ಹಾಗೆಯೇ ಸ್ವಾಭಿಮಾನ ಮತ್ತು ಸ್ವಾವಲಂಬನೆಗಳ ತ್ರಿವೇಣಿ ಸಂಗಮ ರೂಪುಗೊಳ್ಳಬೇಕಾಗಿತ್ತು. ಆ ಮೂಲಕ ವಿಶಿಷ್ಟ ರಾಷ್ಟ್ರೀಯತೆ ಕಂಡು ಬರಬೇಕಾಗಿತ್ತು. ಆದರೆ ಆಗಿದ್ದಾದರೂ ಏನು? ವಿದೇಶಿಯರು ಈ ದೇಶವನ್ನು ಬಿಟ್ಟು ಹೋದರೂ, ಅವರ ವಿದೇಶೀಯತೆಯನ್ನು ನಾವು ಬಿಡಲಿಲ್ಲ. ಆದರೇ ಅವರ ವಾರಸುದಾರರು ನಾವು ಎಂಬಂತೆ ಮೈಗೂಡಿಸಿಕೊಂಡಿದ್ದೇವೆ.

ಅಸಂಖ್ಯಾತ ಮತ್ತು ಅಪ್ರತಿಮ ದೇಶಪ್ರೇಮಿಗಳ ತ್ಯಾಗ-ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಮ್ಮಲ್ಲಿ ವಿಶೇಷವಾಗಿ ಯುವ ಪೀಳಿಗೆಯಲ್ಲಿ ಕೃತಜ್ಞತಾ ಭಾವನೆ ಮೂಡಬೇಕಾಗಿತ್ತು. ಜವಾಬ್ದಾರಿ ವರ್ತನೆಯೂ ಬೆಳೆಯಬೇಕಾಗಿತ್ತು.

ಶತಶತಮಾನಗಳ ಕಾಲ, ಪರಕೀಯರ ಆಡಳಿತಕ್ಕೆ ಒಳಪಟ್ಟು ಶೋಷಿಸಲ್ಪಟ್ಟಿದ್ದ ಈ ರಾಷ್ಟ್ರದಲ್ಲಿ, ಅಗತ್ಯಾಧಾರಿತವಾದ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಶುದ್ಧ ಸೇವಾಮನೋಭಾವ, ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ನಿರ್ವಹಿಸಿಕೊಂಡು ಹೋಗುವ ಆಡಳಿತಯಂತ್ರ ಅಸ್ತಿತ್ವಕ್ಕೆ

> "ಎಲ್ಲ ಹಕ್ಕುಗಳ ಮೂಲ ಇರುವುದೇ ನಮ್ಮ ಕಾಯಕದಲ್ಲಿ, ನಮ್ಮ ಕಾಯಕವನ್ನು ಮಾಡುವ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳೋಣ" ಎಂಬುದು ಗಾಂಧೀಜಿಯ ಬಹುದೊಡ್ಡ ಚಿಂತನೆಯಾಗಿತ್ತು. ನಾವು ಏನಾದರೂ ಪಡೆದುಕೊಳ್ಳಬೇಕೆನ್ನುವ ಹಂಬಲದಿಂದಲೇ ಹೋರಾಟಕ್ಕಿಳಿಯುತ್ತೇವೆ. ಆದರೆ ಗಾಂಧೀಜಿ ನಮ್ಮೊಳಗೇ ಇರುವ ನಮ್ಮ ಹಕ್ಕುಗಳನ್ನು ಪಡೆಯಲು ನಾವೇ ಸ್ವತಃ ಶ್ರಮಿಸಬೇಕೆಂದು ತೋರಿಸಿದವರು. ಹಾಗೆ ಶ್ರಮಿಸುವ ಮೂಲಕ ಹಕ್ಕುಗಳನ್ನು ಅನುಭವಿಸಬೇಕೆನ್ನುವ ಧೋರಣೆ ಅವರದ್ದು.

ಬರಬೇಕಾಗಿತ್ತು. ಅದು ಸರಳವಾದ ಸಾಧನ ಸೂತ್ರವಾಗಿ ಇರಬೇಕಾಗಿತ್ತು. ಆದರೆ ಆಗಿದ್ದು ಮಾತ್ರ ತದ್ವಿರುದ್ಧವೇ. ಅಸ್ತಿತ್ವಕ್ಕೆ ಬಂದಿರುವ ಆಡಳಿತ ಯಂತ್ರ ಶ್ರೇಣೀಕೃತವಾದದ್ದಾಗಿದೆ.


ನಮ್ಮ ದೇಶ ಹಳ್ಳಿಗಳಿಂದ ಕೂಡಿದ ರಾಷ್ಟ್ರ. ಕೃಷಿ ಪ್ರಧಾನವಾಗಿ ಬೆಳೆದು ಸಾಮಾಜಿಕ ಆರೋಗ್ಯ ಮತ್ತು ಬಾಂಧವ್ಯಗಳನ್ನು ಹೊಂದಿತ್ತು. ಆ ಸುಸ್ಥಿತಿಯನ್ನು ಗಂಭೀರವಾಗಿ ಗಮನಿಸಿ, ಸ್ವಾತಂತ್ರ್ಯಾ ನಂತರದಲ್ಲಿ ಕೃಷಿಯನ್ನು ರಾಷ್ಟ್ರೀಯ ಕಸಬು ಎಂದು ದೃಢೀಕರಿಸಿ ಅದರ ಸುಧಾರಣೆ - ಸಂವರ್ಧನೆಗಳಿಗೆ ಒತ್ತು ನೀಡಲೇಬೇಕಾಗಿತ್ತು. ಯುವ ಪೀಳಿಗೆಗೆ(ವಿದ್ಯಾವಂತರೂ ಸೇರಿದಂತೆ) ಒಲವು ಮೂಡಿಸಿ, ಉಳಿಸಿ ಉತ್ತಮೀಕರಿಸಬೇಕಾಗಿತ್ತು. ಆದರೆ ಒಂದು ರೀತಿಯಲ್ಲಿ ಕೃಷಿಯ ಹೆಮ್ಮರಕ್ಕೆ ಕೊಡಲಿಯನ್ನು ಎತ್ತಿದಂತ್ತಾಯಿತು. ಯೋಜಿತ ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೆ ಬಂದ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾವಲಯಕ್ಕೆ ದೊರಕಿದ ಪ್ರೋತ್ಸಾಹ ಮತ್ತು ಒಲವು ಕೃಷಿ ವಲಯಕ್ಕೆ ದೊರಕಲಿಲ್ಲ. ಪರಿಣಾಮವಾಗಿ ಗ್ರಾಮೀಣಾ ಕಸುಬು ಕೃಷಿ ಮತ್ತು ಅದರ ಅನುಸಂಬಂಧಿ ಗೃಹಕೈಗಾರಿಕೆಗಳು, ಹಳ್ಳಿಗಾಡಿನ ಉದ್ಯಮಗಳು ಇಳಿಮುಖವಾಗಿ ಕಣ್ಮರೆಯಾದುವು, ಹಳ್ಳಿಗಳಲ್ಲಿ ಇದ್ದು ಮಾಡಬಹುದಾಗಿದ್ದ ಉದ್ಯೋಗಗಳನ್ನು ಮಾಡಲೊಪ್ಪದೆ, ಅದೇ ರೀತಿಯ ಕೂಲಿಯ ಕೆಲಸವನ್ನು ಹುಡುಕುತ್ತಾ ನಗರಾಭಿಮುಖವಾಗುವವರ ಸಂಖ್ಯೆ ಹೆಚ್ಚತೊಡಗಿತು.

ವಿಶ್ವದಲ್ಲಿಯೇ, ಒಂದು ಪುಟ್ಟ ವಿಶ್ವವಾಗಿ ರೂಪುಗೊಂಡಿರುವ - ವಸುಧೆಯೇ ಏಕ ಕುಟುಂಬ ಎಂದು ಸಾರಿರುವ ಈ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಹಾಗೂ ಸಂವಿಧಾನೋತ್ತರಗಳಲ್ಲಿ ಸಾಮಾಜಿಕ, ಧಾರ್ಮಿಕ ಸೌಹಾರ್ದತೆ ಮತ್ತು ರಾಷ್ಟ್ರೀಯ ಭಾವೈಕ್ಯತೆ ಅಥವಾ ರಾಷ್ಟ್ರೀಯ ಮುಖ್ಯವಾಹಿನಿ ಇವುಗಳ ಸ್ಥಾಪನೆ ಬಲವರ್ಧನೆಗಳ ಬಗ್ಗೆ ಆದ್ಯತೆ ನೀಡಲೇಬೇಕಾಗಿತ್ತು. ಆದರೆ ವಿದ್ಯಾವಂತರ ಸಂಖ್ಯೆ ಹೆಚ್ಚಿದ ಮೇಲೂ ಸಾಮಾಜಿಕ ಸಂಘರ್ಷಗಳು, ಜಾತಿ-ಜಾತಿಗಳ ಮೇಲಾಟಗಳು ಅವ್ಯಾಹತವಾಗಿ ನಡೆಯುತ್ತಾ, ತಳಮಟ್ಟದ ನೆಮ್ಮದಿಯನ್ನು (ಸಾಮಾಜಿಕ ನೆಮ್ಮದಿಯನ್ನು) ಕೆಡಿಸುತ್ತಿವೆ.

ಸಮಾಜದಲ್ಲಿರುವ ಕಟ್ಟಕಡೆಯವರಿಂದ ಪ್ರಾರಂಭವಾಗಿ ಎಲ್ಲರ ಏಳಿಗೆಯನ್ನು ಅವರು ಸಾಧಿಸ ಬಯಸಿದ್ದರು. ಯಾರೇ ಆಗಲಿ, ಸ್ಥಾನ-ಸಂಪಾದನೆಗಳನ್ನು ಅನುಭವಿಸುವ ಸಂದರ್ಭದಲ್ಲಿ ಕಟ್ಟಕಡೆಯವರನ್ನು ನೆನೆಪಿಸಿಕೊಳ್ಳಬೇಕೆಂದು ಗಾಂಧೀಜಿ ನೀಡಿರುವ ಕರೆ ಗಮನಾರ್ಹ.







# ಮನದ ಮನೆಯೊಳಗಿರುವ ಮನೆಯೊಡೆಯನನ್ನು ಮೀರುವುದೆಂದರೆ...

ವೆಂಕಟೇಶ ಕೆ. ಜನಾದ್ರಿ

ಯಾರೇ ಆಗಲಿ ತನ್ನನ್ನು ತಾನು ಮೀರುವುದಿದೆಯಲ್ಲ ಅದು ಸಾಮಾನ್ಯರಿಂದ ಅಸಾಧ್ಯವೆನಿಸುತ್ತದೆ. ಸಾಧಕರನೇಕರು ತಮ್ಮ ತಮ್ಮ ಸಾಧನೆಯ ಕುರಿತಾಗಿ ಅಭಿವ್ಯಕ್ತಿಸುವಾಗ ತಾವು ಯಾರ್ಯಾರನ್ನು ಮೀರಿಸಿ ಮಹತ್ವದ ಸಾಧನೆಯನ್ನು ಮಾಡಿದ್ದರ ಬಗೆಯೇ ಯೋಚಿಸುತ್ತಾರೆ. ಹಾಗೆ ಹೇಳಿಕೊಂಡು ದಾಖಲಿಸುತ್ತಾರೆ, ಅಲ್ಲದೇ ತಾವು ಸಾಮಾನ್ಯರಿಗಿಂತ ಅಸಮಾನ್ಯರೆಂದುಕೊಳ್ಳುತ್ತಾರೆ.

ಯಾರೇ ಆಗಲಿ ಸದಾ ತನ್ನ ಸಮಸ್ಯೆ, ತನ್ನವೇ ಆದ ತಲ್ಲಣಗಳು ಮತ್ತು ತನ್ನ ಹಸಿವಿನ ಬಗೆಗೆ ಯೋಚಿಸುವಾತ ಸ್ವಾರ್ಥಿಯೆನಿಸಿಕೊಳ್ಳುತ್ತಾನೆ. ಇನ್ನೊಬ್ಬರ ಹಸಿವು, ತಲ್ಲಣಗಳು ಅವರ ನೋವಿನ ಕುರಿತಾಗಿಯೂ ಯೋಚಿಸುವಾತ ಮನುಷ್ಯನಾಗಿರುತ್ತಾನೆ. ಇನ್ನೊಬ್ಬರ ಹಸಿವೇ ತನ್ನ ಹಸಿವು, ಇನ್ನೊಬ್ಬರ ತಲ್ಲಣಗಳೇ ತನ್ನವು, ಅವರ ನೋವೇ ತನ್ನ ನೋವೆಂದು ಸಂಕಟಪಡುವಾತ, ನೊಂದುಕೊಳ್ಳುವಾತನೇ ಸಂತ, ಮಹಾತ್ಮ, ಶರಣನಾಗುತ್ತಾನೆ. ಅಂಥವರ ಸಾಲಿನಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆ ಹವಣಿಸುವ ತವಕ ಇರುವುದು. ತಮ್ಮ ನುಡಿಯನ್ನು ತಮ್ಮ ನಡೆಯೊಳಗೇ ಬೆಸೆಯುಸುವ ತವಕವಿದ್ದವರು. ಆದರೆ ಇದೆಲ್ಲವನ್ನೂ ಮೀರಿದ್ದೊಂದಿದೆ. ಅದೇನೆಂದರೆ ಒಬ್ಬಾತ ತಾನು ತನ್ನೊಳಗನ್ನೇ ಮೀರುವುದು. ತನ್ನೊಳಗನ್ನೇ ಮೀರುವುದೆಂದರೆ ತನ್ನ ಮನದ ಮನೆಯೊಳಗಿರುವ ಮನೆಯೊಡೆಯನನ್ನೇ ಮೀರುವುದೆಂದರ್ಥ. ಇಂಥವರೇ ಅಪ್ರತಿಮ ಸಾಧಕರೆನಿಸಿಕೊಳ್ಳುತ್ತಾರೆ. ಉಪಮಿಸಬಾರದ ಉಪಮಾತೀತರೆನಿಸಿಕೊಳ್ಳುತ್ತಾರೆ.

ಪ್ರತಿಯೊಬ್ಬರಿಗೂ ತಮ್ಮ ತಮ್ಮ ಸಾಮರ್ಥ್ಯದ ಅಗಾಧತೆಯ ಕುರಿತು ಸಂಪೂರ್ಣ ಅರಿವಿನ ಕೊರತೆ ಇರುತ್ತದೆ. ಅದಕ್ಕೆ ಮನೆಯೊಳಗೇ ಇರುವ ಮನೆಯೊಡೆಯ(ಜೀವಾತ್ಮನ ರೂಪದಲ್ಲಿರುವ ಪರಮಾತ್ಮ)ನ ಕುರಿತು ನಾವೆಂದೂ ಯೋಚಿಸದೇ ಹೊರಗಿನ ವ್ಯವಸ್ಥೆ, ಹೊರಗಿನ ಒಡೆಯನ ಕುರಿತು, ಆತನ ಅಗಾಧತೆಯನ್ನು ಅಭಿವ್ಯಕ್ತಿಸುವಲ್ಲಿ

> **ಇನ್ನೊಬ್ಬರ ಹಸಿವು, ತಲ್ಲಣಗಳು ಅವರ ನೋವಿನ ಕುರಿತಾಗಿಯೂ ಯೋಚಿಸುವಾತ ಮನುಷ್ಯನಾಗಿರುತ್ತಾನೆ. ಇನ್ನೊಬ್ಬರ ಹಸಿವೇ ತನ್ನ ಹಸಿವು, ಇನ್ನೊಬ್ಬರ ತಲ್ಲಣಗಳೇ ತನ್ನವು, ಅವರ ನೋವೇ ತನ್ನ ನೋವೆಂದು ಸಂಕಟಪಡುವಾತ, ನೊಂದುಕೊಳ್ಳುವಾತನೇ ಸಂತ, ಮಹಾತ್ಮ, ಶರಣನಾಗುತ್ತಾನೆ.**

ತವಕಿಸುತ್ತಿರುವುದನ್ನು ಕಾಣುತ್ತೇವೆ. ಎಲ್ಲೋ ಮಹಾತ್ಮ ಗಾಂಧೀಜಿಯಂಥವರು ಮಾತ್ರ ತಮ್ಮೊಳಗೇ ಇರುವ ತಮ್ಮದೇ ಅಗಾಧತೆಯ ಬಗೆಗೆ ಆಲೋಚಿಸಿರುವ, ಆಲೋಚಿಸುತ್ತಿರುವ ಕಾರಣಕ್ಕೆ ಅವರಿಗೆ ಅವರೇ ಮಾದರಿ. ಅವರ ಬದುಕೇ ಒಂದು ದೊಡ್ಡ ಸಂದೇಶವೆನಿಸುತ್ತದೆ. ಅದುವೇ "ಸತ್ಯಾನ್ವೇಷಣೆ" ಎನಿಸಿಕೊಳ್ಳುತ್ತದೆ. ತಮ್ಮ ಮನೆಯೊಳಗಿರುವ ಮನೆಯೊಡೆಯನನ್ನೂ ಮೀರಿ ಬೆಳೆಯುವ ತವಕದಲ್ಲಿದ್ದವರವರು ಮಹಾತ್ಮ ಗಾಂಧೀಜಿ. 150 ವರ್ಷಗಳ ಹಿಂದೆ ಈ ನಾಡಿನಲ್ಲಿ ಸಾಮಾನ್ಯ ಮಗುವಾಗಿ ಜನಿಸಿದ ಈ ಜೀವ ತನ್ನ ಜೀವಿತಾವಧಿಯಲ್ಲಿಯೇ "ಮಹಾತ್ಮ" ಎಂದು ಗುರುತಿಸಿಕೊಂಡ ಈ ಚೇತನದತ್ತ ಇಡೀ ವಿಶ್ವವೇ ತಿರುಗಿ ನೋಡುವಂತೆ ಮಾಡಿದ ಈ ಅರೆಬೆತ್ತಲೆ ಬಡಕಲು ಫಕೀರನ ಸಾಧನೆಯಾದರೂ ಎಂಥದ್ದು?

ಬಹುತೇಕ ಭೌತಿಕ ಆಸೆ-ಆಮಿಷಗಳಿಂದ ಬಹುದೂರವಿದ್ದು ವೈಯಕ್ತಿಕವಾಗಿಯಷ್ಟೇ ಅಲ್ಲ ಕುಟುಂಬ ಸದಸ್ಯರ ಆಕಾಂಕ್ಷೆಗಳಿಗೂ ನಿರುತ್ತರನಾಗಿ ಅರೆಬೆತ್ತಲೆ ಫಕೀರನೆನಿಸಿಕೊಂಡ ಗಾಂಧೀಜಿಯವರ ಕುರಿತು ನಮ್ಮಂಥವರು ಅವರನ್ನು ನಿಸ್ವಾರ್ಥಿ ಎಂದೋ ಮಹಾತ್ಮ ಎಂದೋ ಮುಕ್ತವಾಗಿ



downloaded from: www.kpscvaani.com

ಒಪ್ಪಿಕೊಳ್ಳುವುದೊಂದೆಡೆಯಾದರೆ, ಗಾಂಧೀಜಿಗೆ ತಾವು ಮಹಾತ್ಮನೆನಿಸಿಕೊಳ್ಳಬೇಕೆಂಬ ಸ್ವಾರ್ಥವಿತ್ತೆಂದು ಕೆಲ ಬುದ್ಧಿಜೀವಿಗಳ ಚಿಂತನೆಯನ್ನು ಗಣನೆಗೆ ತೆಗೆದುಕೊಳ್ಳಬೇಕೆ? ಅಥವಾ ಇಂಥವರ ನಕರಾತ್ಮಕ ಚಿಂತನೆಯ ಬದುಕಿನ ಕ್ರಮದ ಕುರಿತು ವಿಮರ್ಶಿಸಬೇಕೆ? ವಿಮರ್ಶಿಸಿ ನಾವೇಕೆ ಅವರಿಗಿಂತ ಬುದ್ಧಿಜೀವಿಗಳಾಗಬೇಕು... ಬೇಡ. ಗಾಂಧೀಜಿ ಏನೇನೋ ಆಗಿರಬಹುದು. ವಿಶ್ವಮಟ್ಟದಲ್ಲಿ ಅವರನ್ನು ಆದರ್ಶವಾಗಿಟ್ಟುಕೊಂಡು ಸಾಧಿಸಿದ ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ...ಹೀಗೆ ಅನೇಕ ಸಾಧಕರುಗಳಿದ್ದಾರೆ. ಅವರ ಬದುಕಿನ ಪಥವನ್ನು ಅರಿಯೋಣ.

ಗಾಂಧೀಜಿ ಒಬ್ಬ ನಾಯಕನಾಗಿ, ಆದರ್ಶ ವ್ಯಕ್ತಿಯಾಗಿ, ಮಹಾತ್ಮನೂ ಆಗಿ ಗುರುತಿಸಿಕೊಂಡದಕ್ಕಿಂತ ಹೆಚ್ಚಾಗಿ ನೊಂದವರ ಕಣ್ಣೀರಿಗೆ ಮಿಡಿಯುವ ಅವರನ್ನು, ಮತ್ತವರು ಸಂತೈಸುವ ಪರಿ ನನಗಿಷ್ಟ. ಬ್ರಹ್ಮಾಂಡದತ್ತತ್ತ ವ್ಯಾಪಿಸಿದ ದೇವನೇ ತಮ್ಮೊಳಗಿದ್ದಾನೆ ಆತನೇ ನನ್ನ ದೇಹವೆಂಬ ಮನೆಯ ಒಡೆಯನೆಂದು ಪರಿಭಾವಿಸಿದ್ದ ಗಾಂಧೀಜಿ ಆ ಮನೆಯೊಡನಿಗೆ ತಲೆಬಾಗಿದ್ದರು. ಆ ಮೂಲಕ ತಮ್ಮನ್ನೇ ತಾವು ಮೀರುತ್ತಿದ್ದರು. ತಮಗಿಂತ ಬೇರೆಯವರನ್ನು ಮೀರುವುದು ಸುಲಭ ಆದರೆ ತಮ್ಮೊಳಗಿನ ಅಗಾಧತೆಯನ್ನರಿತು ಆ ಅಗಾಧತೆಯನ್ನು ಮೀರುವುದಿದೆಯಲ್ಲ ಅದು ಪರೋಕ್ಷವಾಗಿ ಆ ದೇವನನ್ನೇ ಮೀರುವುದೆಂದರ್ಥ. ಇಂಥವರೇ ಇತಿಹಾಸವಾಗಬಲ್ಲರು. ದೇವನಾಗಬಲ್ಲರು. ನನ್ನ ಪಾಲಿಗೆ ಗಾಂಧೀಜಿಯನ್ನು ಹಾಗೆಂದುಕೊಂಡಿರುವೆ.

"ಎಲ್ಲ ಹಕ್ಕುಗಳ ಮೂಲ ಇರುವುದೇ ನಮ್ಮ ಕಾಯಕದಲ್ಲಿ, ನಮ್ಮ ನಮ್ಮ ಕಾಯಕವನ್ನು ಮಾಡುವ ಮೂಲಕ ನಮ್ಮ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳೋಣ" ಎಂಬುದೊಂದು ಗಾಂಧೀಜಿಯ ಬಹುದೊಡ್ಡ ಚಿಂತನೆಯಾಗಿತ್ತು. ನಾವು ಏನಾದರೂ ಪಡೆದುಕೊಳ್ಳಬೇಕೆನ್ನುವ ಹಂಬಲದಿಂದಲೇ ಹೋರಾಟಕ್ಕಿಳಿಯುತ್ತೇವೆ. ಆದರೆ ಗಾಂಧೀಜಿ ನಮ್ಮೊಳಗೇ ಇರುವ ನಮ್ಮ ಹಕ್ಕುಗಳನ್ನು ಪಡೆಯಲು ನಾವೇ ಸ್ವತಃ ಶ್ರಮಿಸಬೇಕೆಂದು ತೋರಿಸಿದವರು. ಹಾಗೆ ಶ್ರಮಿಸುವ ಮೂಲಕ ಹಕ್ಕುಗಳನ್ನು ಅನುಭವಿಸಬೇಕೆನ್ನುವ ಧೋರಣೆ ಅವರದ್ದು. ಈ ನಿಲುವನ್ನು ಗಮನಿಸಿದಾಗ ಶರಣರ ಕಾಯಕ ಸಿದ್ಧಾಂತ ನೆನಪಾಗುತ್ತದೆ. ಕಾಯಕ ಪ್ರತಿಯೊಬ್ಬರ ಹಕ್ಕೂ ಆಗಿತ್ತು. ಅದೇ ಕಾಲಕ್ಕೆ ಅದು ಕರ್ತವ್ಯವೂ ಆಗಿತ್ತು. ಬಸವಾದಿ ಪ್ರಮಥರಿಗಂತೂ ಕಾಯಕವೊಂದು ಪೂಜೆಯಾಗಿತ್ತು. ಕಾಯಕದಿಂದಲೇ ತಮ್ಮೊಳಗಣ ದೇವನನ್ನರಿತುಕೊಂಡವರವರು.

"ನೀನು ಇನ್ನೊಬ್ಬರಿಗೇನನ್ನು ಕೊಡುತ್ತಿಯೋ(ಮಾಡುತ್ತಿಯೋ) ದೇವರು ನಿನಗೆ ಅದನ್ನೇ ಕೊಡುತ್ತಾನೆ(ಮಾಡುತ್ತಾನೆ)." ಎಂಬುದೊಂದು ಅವರ ನಿಲುವು. ಒಳ್ಳೆಯದೆಲ್ಲವೂ ನಮಗೇ ಆಗಲಿ ಇನ್ನೊಬ್ಬರ ಗೊಡವೆ ನಮಗೇಕೆ ಎಂಬ ಸ್ವಾರ್ಥಿಯೂ ಒಂದರೆಕ್ಷಣ ಯೋಚಿಸುವಂತೆ ಈ ನಿಲುವು ಮಾಡುತ್ತದೆ. ಪ್ರತಿಯೊಂದು ಜೀವಿಗಳಲ್ಲಿ ದೇವನಿರುವ ಕಾರಣ ಯಾವುದೇ ಜೀವಿಗೆ ಕೆಟ್ಟದ್ದನ್ನು ಮಾಡಿದರೆ, ಹಿಂಸಿಸಿದರೆ ಕೇವಲ ಆ ಜೀವಿಗೆ ಮಾತ್ರ ನೋವಾಗದು. ಆ ಜೀವಿಯಲ್ಲಿರುವ ಆ ದೇವನನ್ನೇ ನೋಯಿಸಿದಂತೆ, ನೀನು ದೇವನಿಗೆ ನೋಯಿಸಿದರೆ ದೇವನನ್ನೇ ನಂಬಿಕೊಂಡ ನಿನಗೆ ಶ್ರೇಯಸ್ಸೇ? ದೇವ ಕರುಣಾಮಯಿ ಇರಬಹುದು. ನಿನ್ನ ತಪ್ಪುಗಳನ್ನೆಲ್ಲ ಕ್ಷಮಿಸಿಯೂ ಬಿಡಬಹುದು. ಆದರೆ ನಿನ್ನೊಳಗೇ ಇರುವ ದೇವ ಇದಕ್ಕೆ ಒಪ್ಪನು. ಹಾಗಾಗಿ ನಿನ್ನೊಳಗೇ ಇರುವ ದೇವನಿಗೆ ನೀ ಪ್ರಿಯನಾದರೆ, ಭಗವಂತನಿಗೆ ಪ್ರಿಯನಾದಂತೆ. ಹಾಗೆ ನಿನ್ನೊಳಗಿನ ದೇವನನ್ನು ಮೆಚ್ಚಿಸುವ ಹಾಗೆ ನಿನ್ನ ನಡೆಯನ್ನು ಕಂಡು ಆತ ಹೌದಹುದೆನ್ನುವ ಹಾಗೆ ನಿನ್ನ ನಿಲುವಿರಲೆಂಬುದು ಅವರ ಚಿಂತನೆಯ ಕ್ರಮವಿಲ್ಲಿದೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ್ದ ಮತ್ತು ಜಂಗಮ ದಾಸೋಹ ಪರಿಕಲ್ಪನೆಯನ್ನು ಅನುಸರಿಸಿದ್ದ ಬಸವಾದಿ ಶರಣರ 'ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು' ಎಂಬ ನಿಲುವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇವಲ ಒಂದು ನಿರ್ದಿಷ್ಟ ಸ್ಥಳದಲ್ಲಿ ದೇವನಿದ್ದಾನೆಂದು ಭಾವಿಸಿದ್ದಲ್ಲಿ ಆ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿದ್ದಾಗ ತಪ್ಪು ವಿಚಾರ, ಭ್ರಷ್ಟಾಚಾರ ಮಾಡಬಹುದು. ಆದರೆ ನಮ್ಮೊಳಗೇ ದೇವನಿದ್ದಾನೆಂಬ ಎಚ್ಚರಿಕೆಯಲ್ಲಿದ್ದಾಗ ಪ್ರತಿ ಕ್ಷಣದಲ್ಲಿಯೂ ನಾವು ಒಳ್ಳೆಯದನ್ನೇ ಯೋಚಿಸಿ, ಒಳ್ಳೆಯದನ್ನೇ ಮಾಡುತ್ತೇವೆ. ಹೀಗಾದಾಗ ಒಂದು ಹಂತದಲ್ಲಿ ನಾವು ನಮ್ಮೊಳಗೇ ಇರುವ ಆ ದೇವನನ್ನೂ ಮೀರಿಸಬಹುದು. ಈ ಬಗೆಯ ಸಾಧನೆ ಗಾಂಧೀಜಿಯವರದ್ದಾಗಿತ್ತು. ಆ ಜಗದಗಲ ಮುಗಿಲಗಲ ಮಿಗೆಯಗಲದ ಬಯಲ ದೇವನನ್ನೇ ತಮ್ಮೊಳಗಿಂಬಿಟ್ಟುಕೊಂಡ ಅರಿವನ್ನು ಜಾಗೃತ ಮಾಡಿಕೊಂಡಿದ್ದ ಶರಣರ ನಿಲುವು ಇಲ್ಲಿಯೂ ಕಾಣಬಹುದು.

"ನಮ್ಮನ್ನು ಪ್ರೀತಿಸುವವರನ್ನು ಮಾತ್ರ ಪ್ರೀತಿಸಿದರೆ ಅದು ಅಹಿಂಸೆಯಲ್ಲ ನಮ್ಮನ್ನು ದ್ವೇಷಿಸುವವರನ್ನು ನಾವು ಪ್ರೀತಿಸುವುದು ಅಹಿಂಸೆ" ಎಂಬ ಅವರ ವಿಚಾರ ಅಹಿಂಸೆಗೆ ಹೊಸ ಪರಿಕಲ್ಪನೆಯನ್ನೇ ನೀಡಿದೆ. ಇದರಿಂದಲೇ ಅವರು ಮಹಾತ್ಮರಾಗಿದ್ದು. "ಇವನಾರವ ಇವನಾರವ ಇವನಾರವನೆಂದೆನಿಸದೇ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ" ಎಂಬ ಬಸವ ಸಿದ್ಧಾಂತದಂತೆ, ಒಬ್ಬ ದ್ವೇಷಿಯನ್ನು ಪ್ರೀತಿಸುವ ಮೂಲಕ ಆತನನ್ನು ಪರಿವರ್ತಿಸುವುದೇ ನಿಜವಾದ ದೇವನ ಕಾರ್ಯ ಅಂತ ಕಾರ್ಯ ಮಾಡುವುದರಿಂದ ಆ ದೇವನೇ ನಾನಾಗಬಹುದು. ಜಗತ್ತಿನಲ್ಲಿ ಕೊಟ್ಟಷ್ಟು ಹೆಚ್ಚಾಗುವುದು ಪ್ರೀತಿಯೊಂದೆ ಎಂಬ ಮಾತೊಂದಿದೆ. ಹಾಗೆ ಗಾಂಧೀಜಿ ತಮ್ಮನ್ನು ಸಮಾಜಕ್ಕೆ ಕೊಟ್ಟುಕೊಳ್ಳುತ್ತಲೇ ತಮ್ಮಷ್ಟಕ್ಕೆ ತಾವು ಹೆಚ್ಚಾಗುತ್ತಾ ಬೆಳೆದರು. ತಮ್ಮೊಳಗನ್ನು ತಾವೇ ಮೀರುತ್ತಲಿದ್ದರು. ತಮ್ಮೊಳಗನ್ನು ಮೀರುತ್ತಿರುವುದಕ್ಕೆ ಅವರೇ ಮಾದರಿಯಾಗಿದ್ದರು.

'ತನ್ನ ಮನೆಯೊಳಗಣ ಕಿಚ್ಚು, ತನ್ನ ಮನೆಯನ್ನಲ್ಲದೇ ಪಕ್ಕದ ಮನೆಯನ್ನು ಸುಡುವುದೇ' ಎಂಬಂತೆ ಕ್ರೋಧ ಎನ್ನುವುದು ಪ್ರಚಂಡ ಬೆಂಕಿ ಇದ್ದಂತೆ ಯಾರು ಇದನ್ನು ತಮ್ಮ ವಶದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲವೋ ಅವರು ಅದೇ ಕ್ರೋದಾಗ್ನಿಯಲ್ಲಿ ಬೆಂದು ಹೋಗುತ್ತಾರೆಂಬುದು ಅವರ ಚಿಂತನೆಯಾಗಿತ್ತು. ಕ್ರೋಧ ನಮ್ಮ ಅಂತರ್ಯದಲ್ಲಿ ಇರಲೇಬಾರದು ಹಾಗೇನಾದರಿದ್ದರೂ "ಬೆಂಕಿಯ ಮಳೆ ಸುರಿವಲ್ಲಿ ಉದಕವಾಗಿರಬೇಕು" ಎಂಬಂತೆ, ಕ್ರೋಧವೆಂಬ ಬೆಂಕಿಯನ್ನು ಹೊರಹಾಕದೇ ಒಳಗಿಟ್ಟುಕೊಂಡು ಒಳಗೇ ತಣ್ಣಗಾಗಿಸಿಕೊಳ್ಳುತ್ತಿರಬೇಕು. ಕ್ರೋಧವನ್ನು ಎಂದಿಗೂ ಹಂಚಬಾರದು. ಅಭಿವ್ಯಕ್ತಿಸಲೂಬಾರದು. ಆಗ ವಿಶ್ವದಲ್ಲಿ ಕ್ರೋಧದ ಫಲಶೃತಿಯಾದ ಮಾನಸಿಕ ಮತ್ತು ಬೌದ್ಧಿಕ ಯುದ್ಧಕ್ಕೆ ಅವಕಾಶವೇ ಇರುವುದಿಲ್ಲ. ಇಂತಹ ವ್ಯವಸ್ಥೆಯಲ್ಲಿ ಬಂದೂಕಿನ ನಳಿಕೆಯಲ್ಲಿ ಗುಬ್ಬಿ ಗೂಡು ಕಟ್ಟಿ ನೆಮ್ಮದಿಯಿಂದಿರಬಲ್ಲದು. ಇಂಥ ವ್ಯವಸ್ಥೆಯಲ್ಲಿರುವವರೆಲ್ಲರೂ ನೆಮ್ಮದಿಯಿಂದ ಬದುಕಬಲ್ಲರೆಂಬುದು ಮಹಾನ್ ಮಾನವತಾವಾದಿಯಾಗಿದ್ದ ಗಾಂಧೀಜಿಯ ಚಿಂತನೆಯಾಗಿತ್ತು.

ಶ್ರಮ ಇಲ್ಲದೆ ಸಂಪತ್ತು ಗಳಿಸುವುದು ಪಾಪವೆಂಬ ಗಾಂಧೀಜಿಯ ಚಿಂತನೆಯನ್ನವಲೋಕಿಸಿದಾಗ ಬಸವಣ್ಣನವರ ಕಾಯಕ–ಪ್ರಸಾದ–ದಾಸೋಹ ತತ್ವ ನೆನಪಿಸುತ್ತದೆ. ಕಾಯಕ ಮಾಡದೇ ಊಟ ಮಾಡುವ ಅರ್ಹತೆ ಇರುವುದಿಲ್ಲ. ಕಾಯಕವೆಂದರೆ ಸತ್ಯಶುದ್ಧವಾದ ಕಾಯಕ. ಅಲ್ಲಿ ಭ್ರಷ್ಟಾಚಾರವಷ್ಟೇ ಅಲ್ಲ ವಿಚಾರವೂ ಇರಬಾರದೆಂಬುದು ಶರಣರ ನಿಲುವಾಗಿತ್ತು. ಅನ್ಯ, ಭ್ರಷ್ಟ ಮಾರ್ಗದಿಂದ ಗಳಿಸಿದ್ದು ಪಾಪಿಯ ಹಣ, ಇಂಥ ಪಾಪಿಯ ಹಣ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದೆಂಬ ಶರಣರ ನುಡಿಯಷ್ಟೇ ಅಲ್ಲ ಅದವರ ನಡೆಯಾಗಿತ್ತು. ಅಂಥ ನಡೆಯನ್ನು ಗಾಂಧೀಜಿ ಅಳವಡಿಸಿಕೊಂಡು ವಿಶ್ವಕ್ಕೆ ಮಾದರಿಯಾಗಿದ್ದರು.

ಪ್ರತಿಯೊಬ್ಬರು ಶ್ರಮವಹಿಸಿ ದುಡಿದು ಬದುಕುವುದರಿಂದ ಸೋಮಾರಿಗಳಿಗೆಲ್ಲಿ ಅವಕಾಶ? ಶ್ರಮಿಸು, ಗಳಿಸು, ಅನುಭವಿಸು, ಸಾಧ್ಯವಾದಷ್ಟು ಹಂಚಿಕೊಂಡು ಬದುಕು. ಬಚ್ಚಿಟ್ಟು ಪರರಿಗೊಪ್ಪಿಸುವುದರ ಬದಲಿಗೆ ಕೊಟ್ಟು ಮಾನವೀಯತೆಯನ್ನು ಗಳಿಸಿಕೊಳ್ಳರೆಂಬುದು ಅವರ ನಿಲುವು. ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವ ಹವ್ಯಾಸ ಬೆಳೆಸಿಕೊಳ್ಳಬೇಕು. ಮನುಷ್ಯನಿಗೆ ಅವನ ಕೈಗಳಿಗಿಂತ ಅಮೂಲ್ಯವಾದ ಆಸ್ತಿ ಇಲ್ಲವೆಂಬ ಅವರ ಮಾತೊಂದು ಈ ವಿಚಾರವನ್ನು ಪುಷ್ಟೀಕರಿಸುತ್ತದೆ. ನಮಿಸುವ ಕೈಗಳಿಗಿಂತ ದುಡಿಯುವ ಕೈಗಳೇ ಶ್ರೇಷ್ಠ ಎಂಬ ಮಾರ್ಕ್ಸ್‌ನ ಮಾತುಗಳು ಇಲ್ಲಿ ಮನನಾರ್ಹ.

ನಮ್ಮಲ್ಲಿ ಕೆಲವರು ಸ್ವಾತಂತ್ರ್ಯವೆಂದರೆ ಕಟ್ಟುಪಾಡುಗಳಿಲ್ಲದ ಸ್ವಚ್ಛಂದ ಬದುಕೆಂದುಕೊಂಡಿದ್ದಾರೆ .ಆದರೆ ಗಾಂಧೀಜಿಯ ನಿಲುವೇ ವಿಭಿನ್ನ. ತನಗೆ ತಾನು ಕಟ್ಟುಪಾಡು ವಿಧಿಸಿಕೊಳ್ಳುವವನು ಸ್ವತಂತ್ರ ವ್ಯಕ್ತಿ ಎನ್ನುವಂತೆ ನಿಜವಾದ ಸ್ವತಂತ್ರವೆಂದರೆ ಬದುಕಿನ ಕ್ರಮಕ್ಕೊಂದಿಷ್ಟು ನಿಯಂತ್ರಣದ ಬೇಲಿ ಇರಬೇಕೆನ್ನುವುದು. ಅದು ಕ್ರಮಬದ್ಧವಾದ ಬದುಕಿಗೊಂದು ಆದರ್ಶ ಪಥವಾಗುತ್ತದೆ. ಒಬ್ಬ ಒಡೆಯನಾಗಿ ಚೆನ್ನಾಗಿ ಬದುಕಬೇಕೆಂದರೆ ಮೊದಲು ಸೇವಕನಾಗಿ ಬದುಕು ಎಂಬ ಪ್ರಜ್ಞೆಯನ್ನು ಮೂಡಿಸಿದ್ದರು. ಅವರು ಹಾಗೆಯೇ ಬದುಕಿದ್ದಕ್ಕೆ ಹಲವಾರು ಪ್ರಸಂಗಗಳು ಅವರ ಬದುಕಲ್ಲಿ ಗುರುತಿಸಲ್ಪಟ್ಟಿವೆ. ಮಹಾತ್ಮನೆಂಬ ಶಬ್ದ ಅವರಿಗರಿವಿಲ್ಲದೇ ಅವರನ್ನರಸಿಕೊಂಡು ಅವರ ಬೆನ್ನಿಗೆ ಬಿದ್ದದ್ದು. ಅವರು ಬದುಕಿನಲ್ಲಿ ಎಂದಿಗೂ ಒಬ್ಬ ಮಹತ್ಮಾನಾಗಿ ಬದುಕಿರಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದರು. ಸಾಮಾನ್ಯತೆಯ ಉತ್ತುಂಗಕ್ಕೇರಿದ್ದಕ್ಕೆ "ಮಹಾತ್ಮ" ಎನಿಸಿಕೊಂಡಿರಬಹುದು. ಇದೆಲ್ಲವೂ ಅವರು ಬಯಸದೇ ಬಂದದ್ದು. ಬಯಸಿ ಬಂದದ್ದು ಅಂಗಭೋಗ, ಬಯಸದೇ ಬಂದದ್ದು ಲಿಂಗಭೋಗ, ಬೇಡವೆಂದರೂ ಬಂದದ್ದು ಜಂಗಮಭೋಗ ಎಂಬಂತೆ ಅವರನ್ನು ಮಹತ್ಮಾ ಎಂದು ಕರೆದರೆ ಅದು ಅವರಿಗಲ್ಲ, ನಮ್ಮೊಳಗಿರುವ ಅವರ ಮಹಾ ಆತ್ಮದ ಭಾವಕ್ಕಷ್ಟೇ.

ಹೀಗೆ ಅವರ ಚಿಂತನೆಯ ಕ್ರಮವೇ ವಿಭಿನ್ನವಾಗಿತ್ತು. ಅವರಿಗೇನೆಲ್ಲ ಲಭಿಸಿದ್ದರೂ ಅವೆಲ್ಲ ಅವರು ಬಯಸದೇ ಬಂದದ್ದು. ಅವರು, ಬೇಡವೇ ಬೇಡವೆಂದು ನಿಶ್ಚಲವಾಗಿದ್ದರೂ ಏನಾದರೂ ಬಂದಿದ್ದರೆ ಹಾಗೆ ಬಂದದ್ದು ಜಂಗಮ ಭೋಗವೆಂಬುದು. ಈ ಬಗೆಯಲ್ಲಿ ಯೋಚಿಸಿದರೆ ಗಾಂಧೀಜಿಯವರಲ್ಲಿ ತ್ಯಜಿಸುವ ಗುಣ ಅಪಾರವಾಗಿದ್ದದ್ದನ್ನು ನಾವು ಗುರುತಿಸಬಹುದು. ಗಾಂಧೀಜಿಯವರು ತಮಗಾಗಿ ಏನಾದರೂ ಬಯಸುವುದಿರಲಿ, ಬಯಸದೇ ಬರುವುದಷ್ಟೇ ಅಲ್ಲ ಅವರು ಬೇಡಬೇಡವೆಂದು ನಿರಾಕರಿಸಿದರೂ ಅವರ ಫಲಶೃತಿಗಳು ಅವರನ್ನು ಮಹಾತ್ಮನ ಸ್ಥಾನಕ್ಕೆ ಕೊಂಡೊಯ್ದಿರುವುದನ್ನು ನೋಡುತ್ತೇವೆ. ಈ ಮಹಾತ್ಮ ಪದವಿ ಅವರ ಅಂಗಕ್ಕಾಗಲೀ, ಅವರ ಅಂಗದೊಳಗಿರುವ ದೇವನನ್ನೊಳಗೊಂಡ ಲಿಂಗಕ್ಕಾಗಲೀ ಅವಶ್ಯವಿರಲಿಲ್ಲ. ಅವರ ಸೇವೆಯನ್ನಾಧರಿಸಿದ ಜಂಗಮತ್ವವನ್ನು ಬಿಂಬಿಸುವಲ್ಲಿ ಮಾತ್ರ ಅವಶ್ಯವಿದೆಯೇನೋ ಎಂದೆನಿಸುತ್ತದೆ.

ಗಾಂಧೀಜಿಯವರು ಸಹನೆಯ ಪರಮೋಚ್ಚ ಹಂತವನ್ನು ಸಾಧಿಸಬೇಕಾಗಿತ್ತು ಹಾಗೆ ಸಾಧಿಸಿದರು. ಸದಾ ಅಂಧಕಾರ ಮಧ್ಯದ ಕಾರ್ಗತ್ತಲೆಯಲ್ಲಿ ಬೆಳಕಿಗಾಗಿ ತಡಕಾಡುತ್ತಿದ್ದರು ಗಾಂಧೀಜಿ. ಕತ್ತು ಹಿಸುಕುವವರಿಗೆ ಒಂದಿಷ್ಟು ಹೂ ನೀಡುವಂಥದ್ದೇ ಗಾಂಧೀಗಿರಿ. ತಮ್ಮ ಶೋಕಗೀತೆಯನ್ನಾಡುವವರಿಗೆ ಒಂದಿಷ್ಟು ಧ್ವನಿಯನ್ನೂ ನೀಡುವ ಮಹಾತ್ಮರವರು. ಆದರೆ ಇಂದು ನಮ್ಮಗಳ ಸಂಭ್ರಮ, ವೈಭವೀಕರಣಗಳ ಮಧ್ಯೆ ಮಹಾತ್ಮ ಗಾಂಧೀಜಿ ಕಳೆದುಹೋಗುತ್ತಿದ್ದಾರೆ.


ಪ್ರತಿಯೊಂದು ಕ್ಷೇತ್ರ ಮತ್ತು ಪರಿಕಲ್ಪನೆಯಲ್ಲಿ ಮೂರನೆಯ ದರ್ಜೆಯನ್ನು ಪ್ರತಿನಿಧಿಸುವ ಅರೆಬೆತ್ತಲೆ ಫಕೀರ ಗಾಂಧೀ ಮಾತ್ರ ತನ್ನ ಅಸಹಾಯಕತೆಯಿಂದ ಗದ್ಗದಿತನಾಗಿದ್ದಾನೆ. ಗಾಂಧಿ ಭಾವಚಿತ್ರ ಸರ್ಕಾರಿ ಕಛೇರಿಯಲ್ಲಿ ಹಾಗೂ ಆತನ ವಿಚಾರಗಳು ಇಂದಿನ ನೇತಾರರ ಭಾಷಣಕ್ಕೆ ಅನಿವಾರ್ಯವಾದಂತೆ, ಆತನ ಕನಸುಗಳು, ಆಲೋಚನೆಗಳು ಅನುಷ್ಠಾನವಾಗಲಿಲ್ಲ ವೆಂಬುದೊಂದು ಕೊರಗು ನಮ್ಮಂಥವರಲ್ಲಿ ಹಾಗೆ ಉಳಿದಿದ್ದೊಂದು ವಿಷಾದ.

1948ರ ಜನವರಿ 30 ರಂದು ನಮ್ಮವನ ಪಿಸ್ತೂಲಿನಿಂದಲೇ ಜಿಗಿದ ಗುಂಡಿಗೆದೆಯೊಡ್ಡಿ ಆ..ಆಹ್..ಆ ಅನ್ನುತ್ತ ಬಯಲಲ್ಲಿ ಬಯಲಾದರೋ ಅಥವಾ ಹೇ–ರಾಮ್ ಎನ್ನುತ್ತ ಬಯಲಾದರೆಂಬ ಶುಷ್ಕ ವಾದಕ್ಕೆ ಜೋತುಬಿದ್ದ ನಾವು ಇಂದಿಗೂ ಕೂಪಮಂಡೂಕವಾಗಿದ್ದೇವೆ. ಎಲ್ಲವನ್ನೂ, ಎಲ್ಲರನ್ನೂ ಅಷ್ಟೇ ಅಲ್ಲ ತನ್ನೊಳಗನ್ನೂ ಮೀರಿದ್ದ ಗಾಂಧೀಜಿ ಆತ. ಈ ನಾಡಿನಲ್ಲಿ ಬಿತ್ತಿದ್ದ ಹಲವಾರು ಆದರ್ಶಗಳ ಬೀಜ ಮೊಳೆಯದೆ ಕೊಳೆಯುತ್ತಿರುವುದಕ್ಕೆ ಮನ ಭಾರವಾಗುತ್ತಿದೆ. "ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ಎಂದಿಗೂ ನಿಷ್ಫಲವಲ್ಲ" ಎಂಬ ಶ್ರೀ ದೇವನೂರ ಮಹಾದೇವರವರ ವಿಚಾರದಂತೆ ಸಕಾರಾತ್ಮಕತೆಯನ್ನು ನಾವೆಲ್ಲ ಬೆಳೆಸಿಕೊಳ್ಳಬೇಕಿದೆ.

ಇಂದಿಗೂ ಗಾಂಧೀಜಿಯನ್ನಾಗಲೀ ಗಾಂಧೀ ಜಯಂತಿಯನ್ನಾಗಲೀ ಆಚರಿಸುವಾಗ ಭೌತಿಕವಾದ ಸ್ವಚ್ಛ ಭಾರತದೊಂದಿಗೆ ಭಾರತೀಯರ ಶುದ್ಧ ಮನಸ್ಸಿಗಾಗಿ ಗಾಂಧೀಜಿಯ ಜೀವದುಸಿರು ಚಿಂತಿಸುತ್ತಿರುವ ಬಗ್ಗೆ ನಾವೊಂದಿಷ್ಟು ಚಿಂತಿಸಬೇಕಿದೆ. ಆಗಲೇ ನಮ್ಮ ಮನೆಯೊಳಗಿನ ಮನೆಯೊಡೆಯನನ್ನು ಮೀರುವ ಪಥ ಅನಾವರಣವಾಗುತ್ತೆ. ನಮ್ಮ ನಡೆಯನ್ನು ನಮ್ಮೊಳಗಿರುವ ನಮ್ಮೊಡೆಯ ಮೆಚ್ಚಿ ಹೌದಹುದೆನ್ನುವಂತ ಆದರ್ಶ ಪಥವನ್ನು ಮಹಾತ್ಮ ಗಾಂಧೀಜಿಯವರಿಂದ ನಾವಿನ್ನಷ್ಟು ಕಲಿಯಬೇಕಿದೆ. ■



downloaded from: www.kpscvaani.com



# ದೇಶ ಕಂಡ ಸರಳ, ಸಜ್ಜನ ರಾಜಕಾರಣಿ

# ಲಾಲ್ ಬಹಾದ್ದೂರ್ ಶಾಸ್ತ್ರಿ

ಸಂಗಮೇಶ

ಲಾಲ್ ಬಹಾದ್ದೂರ್ ಶಾಸ್ತ್ರಿ ಈ ದೇಶ ಕಂಡ ಸರಳ ಹಾಗೂ ಸಜ್ಜನ ರಾಜಕೀಯ ನಾಯಕ. ಪ್ರಧಾನಿಯಾಗಿ ರಾಷ್ಟ್ರಕ್ಕೆ ನಿಜವಾದ ಗೌರವ ಸಲ್ಲಿಸಿದ ಭಾರತದ ಏಕೈಕ ಜನಪರ ನಾಯಕ. ಮೌಲ್ಯ ಬದ್ಧ ರಾಜಕಾರಣಿ, ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ಶಾಸ್ತ್ರಿ ಜೀ. ಅವರ ಅಚಲ ನಿರ್ಧಾರ, ಅದಮ್ಯ ಸಮಯ ಪ್ರಜ್ಞೆ, ನುಡಿದಂತೆ ನಡೆಯುವುದು, ಅಲ್ಲದೆ ಜ್ಞಾನ–ಅರಿವು ಇವುಗಳಿಂದ ಅಧಿಕಾರದುದ್ದಕ್ಕೂ ಎದುರಾದ ಎಲ್ಲ ರಾಷ್ಟ್ರೀಯ, ರಾಜಕೀಯ ಕಷ್ಟಗಳನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ದೇಶದ ಆರ್ಥಿಕ ಹಾಗೂ ಸಮಾಜಿಕ ಅಭಿವೃದ್ಧಿಯ ಮುನ್ನಡೆಗಾಗಿ ಶ್ರಮಿಸಿದರು. ಭಾರತದ ಸಮಗ್ರತೆ ಮತ್ತು ಏಕತೆಗೆ ಹಾಗೂ ರಾಷ್ಟದ ಗೌರವ ಕಾಪಾಡಲು ಅವರ ಬದುಕಿನ ಕೊನೆ ಕ್ಷಣದವರೆಗೂ ಹೋರಾಡಿದ ಧೀಮಂತ ನಾಯಕ ಲಾಲ್ ಬಹಾದ್ದೂರ್ ಶಾಸ್ತ್ರಿಯವರು.

**ಜನನ ಮತ್ತು ಬಾಲ್ಯ:**

ಉತ್ತರ ಪ್ರದೇಶ ರಾಜ್ಯದ ವಾರಾಣಸಿ ಸಮೀಪದ ಪುಟ್ಟ ಹಳ್ಳಿ ಮುಗಲ್ಸರಾಯಿಯಲ್ಲಿ ಅಕ್ಟೋಬರ್ 2, 1904ರಂದು ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ಜನಿಸಿದರು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ತಂದೆ ಒಬ್ಬ ಶಾಲಾ ಶಿಕ್ಷಕರಾಗಿದ್ದರು. ಮತ್ತು ಶಾಸ್ತ್ರಿಯವರು ಒಂದೂವರೆ ವರ್ಷದವರಾಗಿರುವಾಗಲೇ ಅವರು ತೀರಿಕೊಂಡರು. ಆಗ ಅವರ ತಾಯಿ ತಮ್ಮ ಹದಿಮೂರು ಮಕ್ಕಳ ಜತೆ ತವರು ಮನೆ ಸೇರಿ ಅಲ್ಲೇ ಉಳಿದರು.

ಲಾಲ್ ಬಹಾದ್ದೂರ್ ಅವರ ಪುಟ್ಟ ಹಳ್ಳಿಯ ಶಿಕ್ಷಣ ಯಾವ ರೀತಿಯಲ್ಲೂ ಗಮನಾರ್ಹವಾಗಿರಲಿಲ್ಲ. ಕಿತ್ತು ತಿನ್ನುವ ಬಡತನವೊಂದನ್ನು ಬಿಟ್ಟರೆ ಅವರ ಬಾಲ್ಯ ಸಂತಸಮಯವಾಗಿತ್ತು. ಪ್ರೌಢ ಶಾಲೆಗೆ ದಾಖಲಿಸಲು ಲಾಲ್ ಬಹಾದ್ದೂರ್ ಅವರನ್ನು ಅವರ ಮಾವನೊಡನೆ ವಾರಾಣಸಿಗೆ ಕಳುಹಿಸಲಾಯಿತು. ಅವರನ್ನು ಮನೆಯಲ್ಲಿ ನನ್ಹೆ ( ಪುಟ್ಟ) ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಉರಿ ಬಿಸಿಲಲ್ಲಿ ಕಾದ ರಸ್ತೆ ಮೇಲೆ ಚಪ್ಪಲಿಗಳಿಲ್ಲದೆ ಮೈಲುಗಟ್ಟಲೆ ನಡೆದು ಲಾಲ್ ಬಹಾದ್ದೂರ್ ಶಾಲೆ ಸೇರಬೇಕಾಗಿತ್ತು. ಹೀಗೆ ಲಾಲ್ ಬಹಾದ್ದೂರ್ ಕೇವಲ ಹನ್ನೊಂದು ವರುಷ ವಯಸ್ಸಿನವರಾಗಿದಾಗಲೇ ವಿದೇಶಿಯರ ಹಿಡಿತದಲ್ಲಿರುವ ದೇಶದ ಸ್ವಾತಂತ್ರ್ಯ ಹೋರಾಟದ ಕುರಿತು ಆಸಕ್ತಿ ಹೆಚ್ಚತೊಡಗಿತು.

ತಮ್ಮ ಅಧಿಕಾರದುದ್ದಕ್ಕೂ ಎದುರಾದ ಎಲ್ಲ ರಾಷ್ಟ್ರೀಯ, ರಾಜಕೀಯ ಕಷ್ಟಗಳನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ದೇಶದ ಆರ್ಥಿಕ ಹಾಗೂ ಸಮಾಜಿಕ ಅಭಿವೃದ್ಧಿಯ ಮುನ್ನೆಡೆಗಾಗಿ ಶ್ರಮಿಸಿದ ಶಾಸ್ತ್ರೀಜಿ ಅವರು ಭಾರತದ ಸಮಗ್ರತೆ ಮತ್ತು ಏಕತೆಗೆ ಹಾಗೂ ರಾಷ್ಟದ ಗೌರವ ಕಾಪಾಡಲು ಅವರ ಬದುಕಿನ ಕೊನೆ ಕ್ಷಣದವರೆಗೂ ಹೋರಾಡಿದರು.



**ಗಾಂಧೀಜಿ ತನ್ನ ದೇಶದ ನಾಗರಿಕರನ್ನು ಅಸಹಕಾರ ಚಳುವಳಿಗೆ ಸೇರಲು ಕರೆ ನೀಡಿದ ಸಂದರ್ಭದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಓದನ್ನು ಬಿಟ್ಟು ಗಾಂಧಿಯವರ ಕೊಗಿಗೆ ಸ್ಪಂದಿಸುವ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.**

ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಬೆಂಬಲಿಸಿದ ದೇಶದ ರಾಜರುಗಳ ವಿರುದ್ಧ ಮಹಾತ್ಮಾ ಗಾಂಧಿ ಅವರ ತತ್ವ ಮತ್ತು ಸಿದ್ಧಾಂತದಿಂದ ಮನಸೋತು ಹೋದರು. ಮುಂದೆ ಗಾಂಧೀಜಿ ತನ್ನ ದೇಶದ ನಾಗರಿಕರನ್ನು ಅಸಹಕಾರ ಚಳುವಳಿಗೆ ಸೇರಲು ಕರೆ ನೀಡಿದ ಸಂದರ್ಭದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿಗೆ ಕೇವಲ ಹದಿನಾರು ವರುಷ ವಯಸ್ಸು. ಮಹಾತ್ಮಾ ಅವರ ಕರೆಗೆ ಪ್ರತಿಕ್ರಿಯೆಯಾಗಿ ತನ್ನ ಓದನ್ನು ಬಿಟ್ಟು ಚಳುವಳಿಗೆ ಸೇರಲು ಶಾಸ್ತ್ರಿ ಅವರು ನಿರ್ಧರಿಸಿದರು. ಅವರ ನಿರ್ಧಾರ ತಾಯಿಯ ನಿರೀಕ್ಷೆಗಳನ್ನು ನುಚ್ಚು ನೂರಾಗಿಸಿತು. ಲಾಲ್ ಬಹಾದ್ದೂರ್ ತನ್ನ ನಿರ್ಣಯವನ್ನು ತೆಗೆದುಕೊಂಡಿದ್ದರು. ಶಾಸ್ತ್ರಿ ಅವರ ಆತ್ಮೀಯರಾದವರಿಗೆಲ್ಲ ಅವರು ಒಮ್ಮೆ ನಿರ್ಣಯ ತೆಗೆದುಕೊಂಡ ಬಳಿಕ ಅವರ ಮನಸ್ಸನ್ನು ಬದಲಾಯಿಸಲು ಸಾಧ್ಯವಿಲ್ಲ. ಅವರ ಮೃದು ಬಾಹ್ಯದ ಒಳಗಿರುವುದು ಕಲ್ಲಿನಂತಹ ದೃಢ ಮನಸ್ಸು ಎಂಬುದರ ಅರಿವಿತ್ತು. ಹೀಗಾಗಿ ಗಾಂಧಿಯವರ ಕೊಗಿಗೆ ಸ್ಪಂದಿಸುವ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ಅವರ ಹಳ್ಳಿಯ ಪಕ್ಕದ ಮಿರ್ಜಾಪುರದ ಲಲಿತಾ ದೇವಿ ಅವರನ್ನು 1927 ರಲ್ಲಿ ವಿವಾಹವಾದರು. ಒಂದು ವಿಚಾರವನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳಲ್ಲಿ ವಿವಾಹ ಸಾಂಪ್ರದಾಯಿಕವಾಗಿತ್ತು. ಅದೇನೆಂದರೆ ವರದಕ್ಷಿಣೆಯಾಗಿ ಕೈಮಗ್ಗದ ಕೆಲವು ಬಟ್ಟೆ ಮತ್ತು ಚರಕವನ್ನು ವರದಕ್ಷಿಣೆಯಾಗಿ ನೀಡಲಾಗಿತ್ತು. ಶಾಸ್ತ್ರಿಯವರು ಇದಕ್ಕಿಂತ ಹೆಚ್ಚಿನದೇನನ್ನು ಸ್ವೀಕರಿಸಲಿಲ್ಲ ಎಂಬುದು ಸತ್ಯ.

ಲಾಲ್ ಬಹಾದ್ದೂರ್ ಶಾಸ್ತ್ರಿ ತಮ್ಮ ಅಗಾಧ ಜ್ಞಾನ ಮತ್ತು ಶಕ್ತಿಯೊಂದಿಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ, ಅನೇಕ ಹೋರಾಟಗಳು, ಅಂದೋಲನಗಳಲ್ಲಿ ಭಾಗಿಯಾಗುವ ಮೂಲಕ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾದರು. ಹೀಗಾಗಿ ಏಳು ವರುಷಗಳ ಕಾಲ ಕಾರಾಗೃಹದ ಸೆರೆವಾಸ ಅನುಭವಿಸಿದರು. ಹೋರಾಟದ ಕಿಚ್ಚಿನ ಉರಿಯಲ್ಲಿ ಬೆಂದರು.

ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ, ಸೌಮ್ಯ ಮತ್ತು ನಿರ್ಗರ್ವಿಯಾಗಿದ್ದ ಲಾಲ್ ಬಹಾದ್ದೂರ್ ಶಾಸ್ತ್ರಿ ಸ್ವಾತಂತ್ರ್ಯ ಹೋರಾಟದ ನಾಯಕರುಗಳಿಂದ ಆದಾಗಲೇ ಗುರುತಿಸಿಕೊಳ್ಳಲು ಶುರುವಾದರು. 1946ರಲ್ಲಿ ಕಾಂಗ್ರೆಸ್ ಸರ್ಕಾರ






downloaded from: www.kpscvaani.com

ರಚನೆಯಾದಾಗ ಈ 'ಆದರ್ಶ ವ್ಯಕ್ತಿ'ಯನ್ನು ಆಡಳಿತದಲ್ಲಿ ರಚನಾತ್ಮಕ ಪಾತ್ರ ನಿರ್ವಹಿಸಲು ಕರೆಸಲಾಯಿತು. ಶಾಸ್ತ್ರಿ ಅವರನ್ನು ಅವರ ಸ್ಥಳೀಯ ರಾಜ್ಯ ಉತ್ತರ ಪ್ರದೇಶದ ಸಂಸದೀಯ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಶೀಘ್ರದಲ್ಲೇ ಅವರು ಗೃಹ ಸಚಿವ ಸ್ಥಾನಕ್ಕೇರಿದರು. ಅವರ ಸಾಮರ್ಥ್ಯ ಮತ್ತು ಕಠಿಣ ಪರಿಶ್ರಮ ಉತ್ತರ ಪ್ರದೇಶದಲ್ಲಿ ಮನೆಮಾತಾಯಿತು. 1951ರಲ್ಲಿ ಅವರು ನವದೆಹಲಿಗೆ ತೆರಳಿದರು. ಕೇಂದ್ರ ಮಂತ್ರಿಮಂಡಲದ ವಿವಿಧ ಖಾತೆಗಳಲ್ಲಿ ಅಧಿಕಾರ ವಹಿಸಿಕೊಂಡರು. ರೈಲ್ವೆ, ಸಾರಿಗೆ ಮತ್ತು ಸಂಪರ್ಕ, ವಾಣಿಜ್ಯ ಮತ್ತು ಕೈಗಾರಿಕಾ, ಗೃಹ ಸಚಿವರಾಗಿ ಮತ್ತು ನೆಹರು ಅವರ ಅನಾರೋಗ್ಯದ ಸಂದರ್ಭದಲ್ಲಿ ಖಾತೆಯಿಲ್ಲದ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಶಾಸ್ತ್ರೀಜಿ ಅವರು ತಮ್ಮ ನಿಷ್ಠಾವಂತ ಕಾರ್ಯವೈಖರಿಯಿಂದ ನಿರಂತರವಾಗಿ ಜನಪ್ರಿಯರಾಗುತ್ತಿದ್ದರು. ಹಲವಾರು ಜನರನ್ನು ಬಲಿ ತೆಗೆದುಕೊಂಡ ರೈಲ್ವೆ ಅಪಘಾತವೊಂದಕ್ಕೆ ತಾನು ಜವಾಬ್ದಾರಿಯೆಂದು ಅನಿಸಿದ್ದರಿಂದ ಅವರು ತಮ್ಮ ರೈಲ್ವೆ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದ್ದರು.

ಅವರ ಈ ನಿರ್ಧಾರ ಸಂಸತ್ತು ಮತ್ತು ಇಡೀ ರಾಷ್ಟ್ರದಲ್ಲೇ ಪ್ರಶಂಸೆಗೆ ಪಾತ್ರವಾಯಿತು. ಆಗಿನ ಪ್ರಧಾನಮಂತ್ರಿ ಜವಾಹರ್ ಲಾಲ್ ನೆಹರು ಅವರು ಘಟನೆಯ ಕುರಿತು ಸಂಸತ್ತಿನಲ್ಲಿ ಮಾತನಾಡುತ್ತಾ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಉನ್ನತ ಆದರ್ಶಗಳು ಮತ್ತು ದೃಢನಿಶ್ಚಯನ್ನು ಪ್ರಶಂಸಿಸಿದರು. ರಾಜಿನಾಮೆಯನ್ನು ಸ್ವೀಕರಿಸಿದ ನೆಹರು ಅವರು ತಾನು ಈ ರಾಜೀನಾಮೆಯನ್ನು ಸ್ವೀಕರಿಸುತ್ತಿರುವುದು ಏಕೆಂದರೆ, ಈ ರಾಜೀನಾಮೆ ಸಾಂವಿಧಾನಿಕ ಔಚಿತ್ಯಕ್ಕೆ ಉದಾಹರಣೆಯಾಗಲಿದೆ ಎಂದು ವಿನಹ ಶಾಸ್ತ್ರಿ ಅವರು ಈ ಅಪಘಾತಕ್ಕೆ ಜವಾಬ್ದಾರರೆಂದಲ್ಲ ಎಂದು ಆ ಸಂದರ್ಭದಲ್ಲಿ ಹೇಳಿದರು. ರೈಲು ದುರಂತದ ಕುರಿತು ನಡೆದ ದೀರ್ಘ ಚರ್ಚೆಗೆ ಪ್ರತಿಕ್ರಿಯಿಸಿದ ಶಾಸ್ತ್ರಿ ಅವರು " ನಾನು ಗಾತ್ರದಲ್ಲಿ ಸಣ್ಣ ಮತ್ತು ಮೃದು ನಾಲಿಗೆ ಉಳ್ಳವನಾದುದರಿಂದ ಜನರು ನನಗೆ ಸ್ಥಿರವಾಗಿರಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು. ದೈಹಿಕವಾಗಿ ನಾನು ಸದೃಢನಲ್ಲದಿದ್ದರೂ, ಆಂತರಿಕವಾಗಿ ಅಷ್ಟೊಂದು ನಿಶಕ್ತನಲ್ಲ ಅಂದೊಕೊಂಡಿದ್ದೇನೆ'. ಎಂದರು. 1964ರಲ್ಲಿ ಅಂದಿನ ಪಂಡಿತ್ ಜವಾಹರ್ ಲಾಲ್ ನೆಹರೂರವರು ಹಠಾತ್ ನಿಧನಗೊಂಡಾಗ ಅವರ ಸ್ಥಾನ ತುಂಬುವುದು ಕಷ್ಟದ ಕೆಲಸವಾಗಿತ್ತು .ಇಂತಹ ಸಂದರ್ಭದಲ್ಲಿ ಎಲ್ಲರ ಕಣ್ಣಿಗೆ ಬಿದ್ದವರು ಶಾಸ್ತ್ರಿಯವರು. ಅವರ ಸರಳ ವ್ಯಕ್ತಿತ್ವ ಹಾಗೂ ಅಧಿಕಾರ ಮೋಹ ಇಲ್ಲದ ಧಿಮಂತ ನಾಯಕ ಎಂಬುದು ಎಲ್ಲಾ ನಾಯಕರಿಗೂ ಗೊತ್ತಿದ್ದ ಸತ್ಯವಾಗಿತ್ತು. ಹಾಗಾಗಿ ಎಲ್ಲಾ ನಾಯಕರು ಇವರೆ ದೇಶದ ಪ್ರಧಾನಿ ಯಾಗಲಿ ಎಂದು ಆಶಿಸುವ ಮೂಲಕ ಅವರನ್ನು ಭಾರತದ ಪ್ರಧಾನಿಯಾನ್ನಾಗಿ ಮಾಡಿದರು. ಆದರೆ ಅವರ ಪಾಲಿಗೆ ಅದು ಸಂಭ್ರಮದ ಕಾಲವಾಗಿರಲಿಲ್ಲ. ಬದಲಿಗೆ ವ್ಯಂಗ್ಯದ ನಗೆ ಬೀರುತ್ತಿದ್ದ ಸಾಲು ಸಾಲು ಸವಾಲು ಮತ್ತು ಸಮಸ್ಯೆಗಳು ಎದುರಿಸಬೇಕಾದ ಸಂದರ್ಭ ಅದಾಗಿತ್ತು. ಹಾಗೂ ಕ್ಲಿಷ್ಟತೆಗಳಿಗೆ ಅವರು ಎಂದು ಧೃತಿಗೆಡಲಿಲ್ಲ. ಮೇಲ್ನೋಟಕ್ಕೆ ಅತಿ ಮೃದು ಧೋರಣೆಯ ವ್ಯಕ್ತಿಯಂತೆ ಕಾಣಿಸುತ್ತಿದ್ದ ಶಾಸ್ತ್ರಿಯವರು ಅಂತರ್ಯದಲ್ಲಿ ವಜ್ರ ಕಠಿಣವಾಗಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದರು.



ಬಹುಶಃ ಭಾರತ ಕಂಡ ಅತ್ಯಂತ ಪ್ರಾಮಾಣಿಕ, ದಕ್ಷ ಪ್ರಧಾನಿಯಾಗಿ ಅವರು ಕಾರ್ಯನಿರ್ವಹಿಸಿದುದು ದೇಶದ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಇವರ ಪ್ರಾಮಾಣಿಕತೆಗೆ ಹಲವರು ತಲೆದೂಗಿದ್ದುಂಟು. ಹಾಗೆಯೇ ಇವರ ಸ್ವಾಭಿಮಾನ, ದೇಶಾಭಿಮಾನ ಕೂಡ ತಲೆದೂಗುವಂಥಹದ್ದು, ಹಾಗೂ 1965ರಲ್ಲಿ ಪಾಕಿಸ್ತಾನ ವಿರುದ್ಧ ಯುದ್ಧ ನಡೆದಾಗ ಶಾಸ್ತ್ರಿ ಎದೆಗುಂದದೆ ದೇಶವನ್ನು ಮುನ್ನಡೆಸಿದರು. ಸೇನಾ ಪಡೆಗಳು ಎದುರಾಳಿಗಳನ್ನು ಮಟ್ಟ ಹಾಕಿದರು. ಆಗಲೇ ಶಾಸ್ತ್ರಿ ಹೇಳಿದ್ದು, 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷ ವಾಕ್ಯವನ್ನು ಮತ್ತು ರೈತರು – ಸೈನಿಕರು ಈ ದೇಶದ ಆಸ್ತಿ ಅಲ್ಲದೆ ನನ್ನ ಎರಡು ಕಣ್ಣುಗಳಂತೆ ಅಂತಾ ಘಂಟಾ ಘೋಷವಾಗಿ ಹೇಳಿದ್ದರು.

ಈ ದೇಶಕ್ಕೆ ಮೂವತ್ತು ವರುಷಗಳ ಕಾಲ ಸಮರ್ಪಣಾ ಸೇವೆಯನ್ನು ಸಲ್ಲಿಸುವ ಮೂಲಕ ವಿಶ್ವಕ್ಕೆ ಮಾದರಿಯಾದರು. ಹಾಗೂ ಶಾಸ್ತ್ರಿಯವರು ಪ್ರಮಾಣಿಕ ಸೇವೆಗೆ ಮತ್ತು ಅತ್ಯಂತ ಸಾಮರ್ಥ್ಯವಿರುವ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದರು. ಶಾಸ್ತ್ರಿ ಅವರು ವಿನಮ್ರತೆ, ಸಹಿಷ್ಣುತೆ, ಮಹಾನ್ ಆಂತರಿಕ ಶಕ್ತಿಯುಳ್ಳ ಮತ್ತು ದೃಢನಿಶ್ಚಯವುಳ್ಳ, ಜನರ ಭಾಷೆಯನ್ನು ಅರ್ಥೈಸಿಕೊಂಡ ಜನಸಾಮಾನ್ಯರ ವ್ಯಕ್ತಿಯಾದರು. ಪ್ರಗತಿಯೆಡೆಗೆ ರಾಷ್ಟ್ರವನ್ನು ಮುನ್ನಡೆಸಿದ ಕೀರ್ತಿ ಇವರದು. ಅಲ್ಲದೆ ಅಭಿವೃದ್ಧಿಯ ದೂರದೃಷ್ಟಿಯುಳ್ಳ ವ್ಯಕ್ತಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರಾಗಿದರು. 1926 ರಲ್ಲಿ ಇವರಿಗೆ ಶಾಸ್ತ್ರಿ ಎಂಬ ಬಿರುದನ್ನು ಕಾಶಿ ವಿದ್ಯಾಪೀಠದಿಂದ ಕೊಡಲ್ಪಟ್ಟಿತು. ಹಾಗೂ ಇವರ ಮರಣಾನಂತರ ಭಾರತ ರತ್ನ ಪ್ರಧಾನ ಮಾಡಲಾಯಿತು. ಅಲ್ಲದೆ ಇವರ ಸ್ಮರಣೆಗೆ ದೆಹಲಿಯಲ್ಲಿ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ. ಇವರ ಜನಪ್ರಿಯ ವಾಕ್ಯ 'ಜೈ ಜವಾನ್ ಜೈ ಕಿಸಾನ್' ಇಂದಿಗೂ ಚಿರವಾಗಿ ಉಳಿದಿದೆ.

**ಕೊನೆಯ ಮಾತು:**

ಗಾಂಧೀಜಿ ಹುಟ್ಟಿದ ದಿನವೇ ಇವರದೂ ಕೂಡ ಹುಟ್ಟಿದ ದಿನ. ಅವರ ಆದರ್ಶ ನಿಲುವುಗಳನ್ನು ನಾಡಿಗೆ ತಿಳಿಸುವಂತಹ ಕೆಲಸ ನಮ್ಮಿಂದ ಆಗಲಿ. ಗಾಂಧೀಜಿಯವರು ಹೇಳುತಿದ್ದ ಆದರ್ಶಗಳನ್ನು ವಾಸ್ತವಕ್ಕೆ ತರುತಿದ್ದ ಶಾಸ್ತ್ರಿಗಳ ಜೀವನ ನಮಗೆಲ್ಲರಿಗೂ ಮಾದರಿಯಾಗಬೇಕು. ಆದ್ದರಿಂದ ಶಾಸ್ತ್ರಿಯವರ ಕನಸಿನಂತೆ ನಾವು ಬದುಕುವ ದಿಸೆಯಲ್ಲಿ ಯೋಚನೆ ಮಾಡುವ ಜೊತೆಗೆ, ಭ್ರಷ್ಟಾಚಾರ, ಕಂದಾಚಾರ ಮತ್ತು ಮೂಢನಂಬಿಕೆಗಳಿಗೆ ಕಡಿವಾಣ ಹಾಕುವ ಮೂಲಕ ಅವರ ಆಶಯಗಳಿಗೆ ಗೌರವ ಕೊಡೋಣ.

Published by : N S Siddaramappa, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com